ಮಾಡುವುದಕ್ಕೋಸ್ಕರ 8 ದಿವಸ ಅಸೆಂಬ್ಲಿ ಅಡ್ಜರ್ನ್ ಮಾಡಬಾರದಾಗಿತ್ತು. ಇದು ವಿಷಾದಕರವಾದ ವಿಷಯ. ರಾಜ್ಯದಲ್ಲಿ ಬಿಕ್ಕಟ್ಟು ಪರಿಸ್ಥಿತಿ ಇರುವ ಕಾಲದಲ್ಲಿ ಈ ಮೇಳ ನಡೆಸುವುದು, ಪ್ರದರ್ಶನ ನಡೆಸುವುದು ಅಷ್ಟು ಯೋಗ್ಯವಾದುದಲ್ಲ ಎಂದು ಹೇಳಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ :—ಬೆಂಗಳೂರಿನಲ್ಲಿ ನಾಳೆಯಿಂದ ಕಾಂಗ್ರೆಸ್ ಅಧಿವೇಶನ ನಡೆಯುತ್ತದೆ. ಅದಕ್ಕೆ ಎಷ್ಟು ಆಹಾರ ಒದಗಿಸಿದ್ದಾರೆ, ಎಷ್ಟು ಕೋಳಿಗಳು, ಎಷ್ಟು ಕುರಿಗಳನ್ನು ಒದಗಿಸಿದ್ದಾರೆ ಎಂಬುದು ಗೊತ್ತಿಲ್ಲ. ಬರಗಾಲ ಪ್ರದೇಶದಲ್ಲಿ ಅನ್ನ ಇಲ್ಲ ಎಂದು ಜನ ಸಾಯುತ್ತಿದ್ದಾರೆ. ಶ್ರೀಮಾನ್ ಚೆನ್ನಬಸಪ್ಪನವರು ಅಲ್ಲಿಗೆ ಆಹಾರ ಧಾನ್ಯ ಕಳುಹಿಸಿರುವ ಬಗ್ಗೆ ರಿಪೋರ್ಟ್ ಕೊಟ್ಟಿದ್ದಾರೆ. ಅದು ಅಲ್ಲಿಗೆ ತಲುಪಿದೆಯೋ ಇಲ್ಲವೋ ಗೊತ್ತಿಲ್ಲ. ನಾಳೆ ನೂರಾರು ಜನರು ಇಲ್ಲಿ ಬರುತ್ತಾರೆ. ಗ್ಲಾಸ್ ಹೌಸ್ ಇಂದ್ರನ ಅರಮನೆಯಂತೆ ತಯಾರಾಗುತ್ತಿದೆ. ಈ ಸಮ್ಮೇಳನಕ್ಕೆ ಯಾವ ಸೋರ್ಸ್‌ನಿಂದ ಗೋಧಿ ಮತ್ತು ಅಕ್ಕಿ ತಂದಿರಿ ? ಈ ಸಭೆಯನ್ನು 4 ದಿವಸ ಮುಂದಕ್ಕೆ ಹಾಕುತ್ತಾ ಇರತಕ್ಕ ಉದ್ದೇಶವೇನು ? ಈ ಸಮ್ಮೇಳನಕ್ಕೆ ಎಷ್ಟು ಹಣವನ್ನು ಯಾವ ಯಾವ ಕೈಗಾರಿಕೋದ್ಯಮಿಗಳಿಂದ ಎಲ್ಲೆಲ್ಲಿ ತಂದಿದ್ದೀರಿ ? ಚಪ್ಪರದ ವ್ಯವಸ್ಥೆಗೆ ಒಬ್ಬರು, ಊಟದ ವ್ಯವಸ್ಥೆಗೆ ಒಬ್ಬರು, ಮಲಗುವ ಹಾಸಿಗೆ ವ್ಯವಸ್ಥೆಗೆ ಒಬ್ಬರು ಅಂಥ ಒಂದು ದೊಡ್ಡ ಲಿಸ್ಟ್ ಇದೆ. ಇಂತಹ ಬರಗಾಲದ ಸಮಯದಲ್ಲಿ ದಕ್ಷಿಣ ವಲಯದಿಂದ ಜನರನ್ನು ಕರೆದುಕೊಂಡು ಬಂದು ಈ ವೈಭವದ ಸಮಾರಂಭ ನಡೆಸುವುದರ ಔಚಿತ್ಯವಾದರೂ ಏನು ? ದಯಮಾಡಿ ಇದನ್ನು ಸ್ಪಷ್ಟವಾಗಿ ಈ ಸಭೆಯಲ್ಲಿ ಹೇಳಬೇಕು ಎಂದು ಕೇಳಿ ಕೊಳ್ಳುತ್ತೇನೆ.

Budget estimates for 1973–74. Demands for grants. Demands Nos. 3, 10, 12, 13, 15 B, 35 and 36.

ಶ್ರೀ ಎಂ. ಎಂ. ಸಜ್ಜನ್ (ಮುದ್ದೇಬೀಹಾಳ್) :—ಮಾನ್ಯ ಸಭಾಪತಿಗಳೇ, ಇವತ್ತಿನ ದಿವಸ ನಾನು ಕೆಲವು ಸಲಹೆಗಳನ್ನು ಕೊಡಬಯಸುತ್ತೇನೆ. ಈಗ ಹಿಂದುಳಿದ ಮತ್ತು ಹರಿಜನರ ಉದ್ಧಾರವಾಗಬೇಕಾದರೆ, ಈ ಜನರಿಗೆ ನೌಕರಿ ಸವಲತ್ತು ಸಿಕ್ಕಬೇಕಾದರೆ, ಆದರಲ್ಲಿ ಮುಖ್ಯವಾಗಿ ಗ್ರಾಮಾಂತರದಲ್ಲಿರತಕ್ಕ ಹರಿಜನರ ಮತ್ತು ಹಿಂದುಳಿದವರ ಅಭಿವೃದ್ಧಿಯಾಗಬೇಕಾದರೆ ನೌಕರಿ ಕೊಡತಕ್ಕ ನೀತಿಯಲ್ಲಿ ಬದಲಾವಣೆ ಆಗಬೇಕು ಎಂದು ಹೇಳಬಯಸುತ್ತೇನೆ. ಆಯಾಯ ವಿಭಾಗದಲ್ಲಿ ಇರತಕ್ಕ ಗ್ರಾಮಾಂತರದ ಜನರಿಗೆ, ಹಿಂದುಳಿದವರಿಗೆ, ಹರಿಜನರಿಗೆ ನೌಕರಿ ಕೊಡಲಿಕ್ಕೆ ಡಿವಿಜನಲ್ ರೆಕ್ರೂಟ್‌ಮೆಂಟ್ ಕಮಿಟಿ ಎಂದು ಹೇಳಿ ಸ್ಥಾಪನೆಯಾಗಿತ್ತು. ನನಗೆ ಗೊತ್ತಿದ್ದಂತೆ ಅದು ರದ್ದು ಆಗಿದೆ. ನಿಜಕ್ಕೂ ಡಿವಿಜನಲ್ ರೆಕ್ರೂಟ್‌ಮೆಂಟ್ ಕಮಿಟಿ ನೇಮಕವಾದರೆ ಯೋಗ್ಯವಾಗುತ್ತದೆ. ಇದರಿಂದ ಆಯಾಯ ಭಾಗದಲ್ಲಿ ಇರತಕ್ಕ ಒಕ್ಕಲು ಮಕ್ಕಳಿಗೆ, ಹರಿಜನರಿಗೆ, ಹಿಂದುಳಿದವರಿಗೆ ಫಾಯಿದೆಯಾಗುತ್ತದೆ ಎಂದು ಹೇಳುತ್ತೇನೆ. ನಾವೆಲ್ಲ ಸಮತಾವಾದದ ಮಾತು ಹೇಳುವವರು. ಗರೀಬಿ ಹಠಾವೋ ಘೋಷಣೆ ಮಾಡುವವರು. ಹರಿಜನರು ಹಿಂದುಳಿದವರನ್ನು ಮೇಲಕ್ಕೆ ತರಬೇಕು ಎನ್ನುವವರು. ಈ ಒಂದು ಆಕಾಂಕ್ಷೆ ಇರುವಾಗ ಆಯಾಯ ಭಾಗದ ಜನರಿಗೆ, ಆಯಾ ಭಾಗದ ಹಿಂದುಳಿದವರಿಗೆ ನೌಕರಿಗಳ ಸವಲತ್ತು ಸಿಕ್ಕಬೇಕಾದರೆ ಡಿವಿಜನಲ್ ಲೆವೆಲ್ ರೆಕ್ರೂಟ್‌ಮೆಂಟ್ ಕಮಿಟಿಗಳನ್ನು ನೇಮಕ ಮಾಡಿದರೆ ಒಳ್ಳೆಯದೆಂದು ಹೇಳುತ್ತೇನೆ. ಈಗಿರುವಂತೆ ಸ್ಟೇಟ್ ರೆಕ್ರೂಟ್‌ಮೆಂಟ್ ಕಮಿಟಿ ಮಾಡುವುದಾದರೆ ಸರ್ಕಾರಕ್ಕೆ ಹೆಚ್ಚು ಖರ್ಚು ಬರುತ್ತದೆ. ಸ್ಟೇಟ್ ಲೆವೆಲ್ ರೆಕ್ರೂಟ್‌ಮೆಂಟ್ ಕಮಿಟಿ ಬೆಳಗಾಂ, ಬೀದರ್ ಮತ್ತು ಮೈಸೂರು ವಿಭಾಗಗಳಿಗೆ ಹೋಗಿ ಉಮೇದುವಾರರ ಸಂದರ್ಶನ ತೆಗೆದುಕೊಂಡು ಬರುವುದರಿಂದ ಅಲ್ಲಿನ ಜನರಿಗೆ ಲಾಭ ಮಾಡಿಕೊಟ್ಟಂತಾಗುವುದಿಲ್ಲ.

ಉಮೇದುವಾರರು ನೌಕರಿ ದೊರಕಿಸಿಕೊಳ್ಳುವ ಉದ್ದೇಶದಿಂದ ಬೆಂಗಳೂರಿಗೆ ಬಂದು ಹತ್ತಿಪ್ಪತ್ತು ಸಾವಿರ ರೂಪಾಯಿ ಖರ್ಚುಮಾಡುವ ಪ್ರಸಂಗ ಬರುತ್ತದೆ. ಹಿಂದುಳಿದವರಿಗೆ, ಹರಿಜನರಿಗೆ, ಗ್ರಾಮಾಂತರದಿಂದ ಬರತಕ್ಕ ಒಕ್ಕಲು ಮಕ್ಕಳಿಗೆ ಇಂತಹ ಖರ್ಚು ಉಳಿಸಬೇಕಾದರೆ ಡಿವಿಜನಲ್ ಲೆವೆಲ್ ಕಮಿಟಿಗಳನ್ನು ನೇಮಕ ಮಾಡಬೇಕು, ಮತ್ತು ಅಲ್ಲಿಂದ ಅಲ್ಲೇ ನೇಮಕಾತಿ ಹುಕುಂ ಕೊಡುವ ವ್ಯವಸ್ಥೆ ಮಾಡಬೇಕಾಗಿದೆ. ಈ ರೀತಿ ಸರ್ಕಾರದವರು ತಮ್ಮ ನೀತಿಯಲ್ಲಿ ಬದಲಾವಣೆ ಮಾಡಬೇಕು ಎಂದು ಹೇಳುತ್ತೇನೆ. ಇವರ ಜಾತಿಗೆ ಮುಖ್ಯವಾಗಿ ಹರಿಜನರಿಗೆ ಮತ್ತು ಹಿಂದುಳಿದ ವರ್ಗದವರಿಗೆ ಇಂಡಿಯನ್ ಕಾನ್‌ಸ್ಟಿಟ್ಯೂಷನ್‌ನಲ್ಲಿ ಇರುವ ಹಾಗೆ ರಿಜರ್ವೇಷನ್ ಸಿಕ್ಕಬೇಕಾದರೆ ಈ ಕಮಿಟಿ ಇರುವ ಅವಶ್ಯಕತೆ ಇದೆ. ನಾನ್‌ಅಫಿಶಿಯಲ್ ಜನರನ್ನು ಈ ಸಮಿತಿಯಲ್ಲಿ ಹಾಕಿಕೊಂಡು ಯಾವ ಯಾವ ಖಾತೆಯಲ್ಲಿ ನೌಕರಿಗಳನ್ನು ಕೊಡಬೇಕಾಗುತ್ತದೋ ಅಂತಹ ಖಾತೆಯ ಅಧಿಕಾರಿಗಳನ್ನು ಅದರಲ್ಲಿ ಸೇರಿಸಿಕೊಂಡು, ಉಮೇದುವಾರರನ್ನು ನೇಮಕ ಮಾಡಿ ಅಲ್ಲಿಂದ ಅಲ್ಲೇ ಹುಕುಂ ಕೊಟ್ಟರೆ, ಉಮೇದುವಾರರಿಗೂ ಖರ್ಚು ಬರುವುದಿಲ್ಲ ಮತ್ತು ಸರ್ಕಾರಕ್ಕೂ ಖರ್ಚು ಬರುವುದಿಲ್ಲ ಎನ್ನುವ ಮಾತನ್ನು ಹೇಳುತ್ತೇನೆ. ಈಗಾಗಲೇ ನಿಮಗೆ ಗೊತ್ತಿದ್ದಂತೆ ಎಸ್. ಡಿ. ಸಿ., ಎಫ್. ಡಿ. ಸಿ. ಗಳನ್ನು ಪಬ್ಲಿಕ್ ಸರ್ವೀಸ್ ಕಮಿಷನ್ ಅವರು ನೇಮಕ ಮಾಡುವ ಕಾಲಕ್ಕೆ, ಎಷ್ಟೋ ಅವಧಿ ತೆಗೆದುಕೊಳ್ಳುವುದರಿಂದ ಉಮೇದುವಾರರು ನೌಕರಿ ದೊರಕುವ ಇಚ್ಛೆಯಿಂದ ಬೆಂಗಳೂರಿಗೆ ತಿರುಗಾಡಿ ಅನೇಕ ತೊಂದರೆಗಳಿಗೆ ಮತ್ತು ಖರ್ಚಿಗೆ ಒಳಗಾಗುವ ಉದಾಹರಣೆಗಳು ಇರುತ್ತವೆ. ಈಗಿನ ಪದ್ಧತಿಯಿಂದ ಅರ್ಬನ್ ಉಮೇದುವಾರರಿಗೆ ನೌಕರಿ ದೊರೆಯುತ್ತದೆ, ಗ್ರಾಮಾಂತರ ಜನರಿಗೆ ಸಿಕ್ಕುವುದಿಲ್ಲ ಎನ್ನುವ ವಿಚಾರ ಇದೆ, ಎಸ್.ಡಿ.ಸಿ. ಪೋಸ್ಟ್, ಎಫ್.ಡಿ.ಸಿ. ಪೋಸ್ಟ್ ಮತ್ತು ಸಣ್ಣ ಸಣ್ಣ ನೌಕರಿಗಳಿಗೆ ನೇಮಿಸುವ ವಿಷಯದಲ್ಲಿ ಸರ್ಕಾರದ ನೀತಿ ಬದಲಾವಣೆಯಾಗಬೇಕು. ಈ ಕಾರಕೂನರ ನೇಮಕಾತಿಯನ್ನು ಆಯಾಯ ಡಿವಿಜನಲ್ ರೆಕ್ರೂಟ್ ಕಮಿಟಿಗಳು ಮಾಡಬೇಕು ಎನ್ನುವ ಮಾತನ್ನು ಹೇಳುತ್ತೇನೆ. ಸೀನಿಯಾರಿಟಿ ಮತ್ತು ಪ್ರಮೋಷನ್ಸ್ ವಿಷಯದಲ್ಲಿ ಅನೇಕ ದೋಷಗಳಿವೆ. ಅದಕ್ಕೆ ಅನೇಕ ಅಡೆತಡೆಗಳು ಉಂಟಾಗಿವೆ. ಅದಕ್ಕೆ ಕಾರಣ ಸೀನಿಯಾರಿಟಿ ಪಟ್ಟಿ ಆಗಲಿ ಅಥವಾ ಪ್ರಮೋಷನ್ಸ್ ಆಗಲಿ ಇದಕ್ಕೆ ಬೇಕಾದಂಥ ಏಕರೂಪವಾದ ವಿಧಿ ನಿಯಮಗಳನ್ನು ಮಾಡಲಿಲ್ಲ ಎಂದು ಕಾಣುತ್ತದೆ. ಅನೇಕ ಖಾತೆಗಳಲ್ಲಿ ಸೀನಿಯಾರಿಟಿ ಲಿಸ್ಟ್ ಆಗಿಲ್ಲ, ಪ್ರಮೋಷನ್ಸ್ ಬಂದಿಲ್ಲ ಎಂದು ಗೋಳು ಪಡತಕ್ಕ ಅನೇಕ ನೌಕರರಿದ್ದಾರೆ, ಸೀನಿಯಾರಿಟಿ ಲಿಸ್ಟ್ ಮಾಡಲಿಕ್ಕೆ ಮತ್ತು ಪ್ರಮೋಷನ್ಸ್ ಮಾಡಲಿಕ್ಕೆ ಬೇರೆ ಒಂದು ತಜ್ಞರ ಸಮಿತಿಯನ್ನು ನೇಮಿಸಿ ಶೀಘ್ರಗತಿಯಿಂದ ಈ ಸಮಸ್ಯೆಯನ್ನು ಬಗೆಹರಿಸಬೇಕು ಎಂದು ಹೇಳುತ್ತೇನೆ. ನಮ್ಮ ಕನ್ನಡ ರಾಜ್ಯ 1956ನೇ ಇಸವಿಯಲ್ಲಿ ಹುಟ್ಟಿದ ಲಾಗಾಯಿತು ಇಲ್ಲಿಯವರೆಗೆ ನೇಮಕಾತಿ ಮತ್ತು ಪ್ರಮೋಷನ್ಸ್ ವಿಷಯದಲ್ಲಿ ಮತ್ತು ಸೀನಿಯಾರಿಟಿ ಲಿಸ್ಟ್ ವಿಷಯದಲ್ಲಿ ಅನೇಕ ದೋಷಗಳಿವೆ ಎನ್ನುವುದು ಹೈಕೋರ್ಟಿನಲ್ಲಿ ಹಾಗೂ ಸುಪ್ರೀಂ ಕೋರ್ಟಿನಲ್ಲಿ ಪೆಂಡಿಂಗ್ ಇರತಕ್ಕ ಅನೇಕ ಸರ್ವೀಸ್ ಕೇಸುಗಳಿಂದ ಗೊತ್ತಾಗುತ್ತದೆ. ಸಾಮಾನ್ಯ ಆಡಳಿತದಲ್ಲಿ ಈ ವಿಷಯಕ್ಕೆ ಹೆಚ್ಚಿನ ಜಾಗೃತಿ ವಹಿಸಿಲ್ಲ ಹೆಚ್ಚಿನ ಕೆಲಸ ಪೂರೈಸಿಲ್ಲ, ಅದರ ಬಗ್ಗೆ ಒಂದು ಕ್ರಮಬದ್ಧ ವ್ಯವಸ್ಥೆ ನಮ್ಮ ಸರ್ಕಾರ ಮಾಡಿಲ್ಲ, ನಮ್ಮ ಸರ್ಕಾರ ಹಿಂದೇನೂ ಮಾಡಿಲ್ಲ, ಈಗಲೂ ಕೂಡ ಮಾಡುತ್ತಿಲ್ಲ. ಅದಕ್ಕಾಗಿ ಈ ವಿಷಯಕ್ಕೆ ಕೂಡಲೇ ಒಂದು ವ್ಯವಸ್ಥಿತವಾದ ನೀತಿಯನ್ನು ಸರ್ಕಾರದವರು ಹಾಕಿಕೊಳ್ಳಬೇಕು ಎಂದು ಹೇಳುತ್ತೇನೆ. ಇನ್ನೂ ಅನೇಕ ಖಾತೆಗಳಲ್ಲಿ ಎಷ್ಟೋ ಜಾಗಗಳು ಖಾಲಿ ಬಿದ್ದಿವೆ, ತುಂಬಿರುವುದಿಲ್ಲ. ಪಬ್ಲಿಕ್ ಸರ್ವೀಸ್ ಕಮಿಷನ್‌ನ್ನು ಕೇಳಿದರೆ ಖಾತೆಯವರಿಂದ ಎಷ್ಟು ಜಾಗ ತುಂಬಿಸಬೇಕೆಂದು ವಿವರಗಳು ಬಂದಿಲ್ಲ ಎಂದು ಹೇಳುತ್ತಾರೆ. ಖಾತೆಯವರನ್ನು ಕೇಳಿದರೆ ಪಬ್ಲಿಕ್ ಸರ್ವೀಸ್ ಕಮಿಷನ್‌ನಿಂದ ಲಿಸ್ಟ್ ಬಂದಿಲ್ಲ ಎಂದು ಹೇಳುತ್ತಾರೆ, ಈ ಸ್ಟೇಟ್ ರೆಕ್ರೂಟ್‌ಮೆಂಟ್ ಕಮಿಟಿಯವರು ನೇಮಕಾತಿಗಳನ್ನು ಮಾಡುವುದರಿಂದ ಈ ರೀತಿ ಕೆಲಸಕಾರ್ಯಗಳು ತಡವಾಗುತ್ತವೆ

ಮತ್ತು ಸರ್ಕಾರಕ್ಕೆ ಹೆಚ್ಚಿನ ದುಡ್ಡು ಖರ್ಚಾಗುತ್ತದೆ. ಇದನ್ನು ತಪ್ಪಿಸಲು ಡಿವಿಜನಲ್ ರೆಕ್ರೂಟ್‌ಮೆಂಟ್ ಕಮಿಟಿಗಳನ್ನು ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಇನ್ನು ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ವಿಚಾರ. ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜಿನ ನಿಯಮ ನಿಬಂಧನೆಗಳನ್ನು ಅನುಸರಿಸಿ ನಡೆಯುತ್ತಿಲ್ಲ. ಈ ಬಗ್ಗೆ ಅನೇಕ ಉದಾಹರಣೆಗಳನ್ನು ಕೇಳಬಹುದು. 1972ನೇ ಇಸವಿಯಲ್ಲಿ ಹೆಸರುಗಳನ್ನು ಉಡಾಯಿಸಿದ್ದವರಿಗೆ ನೌಕರಿ ಸಿಗುತ್ತಿದೆ. ಆದರೆ 1969–70ನೇ ಇಸವಿಯಲ್ಲಿ ಹೆಸರು ಉಡಾಯಿಸಿದ್ದ ಉಮೇದು ವಾರರಿಗೆ ಇನ್ನೂ ಕೆಲಸ ಸಿಕ್ಕಿಲ್ಲ. ನನಗೆ ಗೊತ್ತಿದ್ದಂತೆ ಅಲ್ಲಿಯೂ ಕೂಡ ಲಂಚಾವತಾರ ಇದೆ. ಎಂಪ್ಲಾಯ್‌ಮೆಂಟ್ ಆಫೀಸಿನಲ್ಲಿ ಅನ್ಯಾಯವಾಗುತ್ತಿದೆ. ನೌಕರಿ ದೊರೆಯಬೇಕು ಎಂದು ಇಚ್ಛೆ ಪಡತಕ್ಕ ಬಹಳ ಉಮೇದುವಾರರಿಗೆ ನೌಕರಿಯ ಸೌಲಭ್ಯ ಸವಲತ್ತುಗಳು ಸಿಕ್ಕಿಲ್ಲ. ಹಿಂದುಳಿದವರಿಗೆ, ಬಡವರಿಗೆ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಆಫೀಸಿನಲ್ಲಿ ಅವಕಾಶ ದೊರಕುವಂತೆ ವ್ಯವಸ್ಥೆ ಮಾಡಬೇಕು ಎಂದು ಹೇಳುತ್ತೇನೆ. ಕೆಲವು ನೇಮಕಾತಿ ಮಾಡುವ ಕಾಲಕ್ಕೆ ಮೌಖಿಕ ಪರೀಕ್ಷೆಮಾಡಿ ನೇಮಕ ಮಾಡುವ ಪದ್ಧತಿ ಇದೆ. ನನಗೆ ಗೊತ್ತಾದಂತೆ ಶ್ರೀ ಧರ್ಮವೀರರು ಗವರ್ನರ್ ಆಗಿದ್ದ ಕಾಲದಲ್ಲಿ ಮೊದಲು ಮೌಖಿಕ ಪರೀಕ್ಷೆಗಳಿಗೆ 100ಗುಣ ಗಳು ಇದ್ದಿದ್ದನ್ನು 30 ಗುಣಗಳನ್ನಾಗಿ ಮಾಡಿದರು ಎಂದು ಕೇಳಿದ್ದೇನೆ. 30 ಗುಣಗಳನ್ನು ಪರೀಕ್ಷೆಯಿಂದ ಬರುವ ಗುಣಗಳಿಗೆ ಕೂಡಿಸಿ ಉಮೇದುವಾರರನ್ನು ನೇಮಕಾತಿ ಮಾಡುವುದರಿಂದ ದೊಡ್ಡ ಅನ್ಯಾಯವಾಗಿದೆಯೆಂದು ತಿಳಿದು ಬಂದಿದೆ. ಅಡ್ವಾನ್ಸ್ ಕ್ಲಾಸಿನವರು ಹೆಚ್ಚಿನ ಮಾರ್ಕ್ಸ್‌ನ್ನ ಪರೀಕ್ಷೆಗಳಲ್ಲಿ ತೆಗೆದುಕೊಳ್ಳುವುದರಿಂದ ಮೌಖಿಕ ಪರೀಕ್ಷೆಗಳಿಗೆ 30 ಗುಣಗಳನ್ನು ಇಟ್ಟಿರುವುದರಿಂದ ಅವರಿಗೆ ಹೆಚ್ಚಿನ ಪ್ರಿಫರೆನ್ಸ್ ಸಿಗುತ್ತದೆ, ನೌಕರಿ ಸೌಲಭ್ಯ ಸಿಗುತ್ತದೆ. ಹಿಂದುಳಿದವರು ಮತ್ತು ಗ್ರಾಮಾಂತರದಿಂದ ಬರತಕ್ಕ ಉಮೇದುವಾರರು ಅಡ್ವಾನ್ಸ್ ಕ್ಲಾಸ್ ತೆಗೆದುಕೊಂಡು ಮಾರ್ಕ್ಸ್‌ನ್ನ ನಷ್ಟು ತೆಗೆದುಕೊಳ್ಳದೆ ಇರುವುದರಿಂದ ಅವರಿಗೆ ಮೌಖಿಕ ಪರೀಕ್ಷೆಯಲ್ಲಿ ಎಷ್ಟು ಮಾರ್ಕ್ಸ್‌ನ್ನ ಕೊಟ್ಟರೂ, ಅಡ್ವಾನ್ಸ್ ಕ್ಲಾಸ್ ಉಮೇದುವಾರರಿಗೆ ಒಳ್ಳೆಯ ಮಾರ್ಕ್ಸ್‌ನ್ನ ಬಂದು ಅವರಿಗೆ ನೌಕರಿ ಸಿಗುತ್ತದೆ. ಆದುದರಿಂದ ಮೌಖಿಕ ಪರೀಕ್ಷೆಗೆ 30 ಗುಣಗಳನ್ನು ಇಟ್ಟಿರುವುದನ್ನು ತೆಗೆದು ಹಾಕಿ 100 ಗುಣಗಳನ್ನು ಇಟ್ಟರೆ ಹಿಂದುಳಿದ ವರ್ಗದವರಿಗೆ ಅನುಕೂಲ ಮಾಡುವುದಕ್ಕೆ ಸಾಧ್ಯ ವಿದೆ. ಅಲ್ಲದೆ ಎಫ್. ಡಿ, ಸಿ., ಎಸ್. ಡಿ. ಸಿ.ಗಳನ್ನು ನೇಮಕ ಮಾಡುವಾಗ ಪಬ್ಲಿಕ್ ಸರ್ವೀಸ್ ಕಮಿಷನ್‌ನವರು ಮತ್ತೊಂದು ಪರೀಕ್ಷೆ ಮಾಡುವುದರಿಂದ ಸರ್ಕಾರಕ್ಕೆ ಹಾನಿಯಾಗುತ್ತದೆ. ಆದುದರಿಂದ ಈ ಪರೀಕ್ಷೆ ಅನಾವಶ್ಯಕ ಎಂದು ಹೇಳುತ್ತೇನೆ.

ಮುಖ್ಯವಾಗಿ ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಒಕ್ಕಲು ಮಕ್ಕಳಿಗೆ ಹೆಚ್ಚಿನ ಪ್ರಮಾಣದಲ್ಲಿ ನೌಕರಿ ಸಿಕ್ಕಿಲ್ಲ. ಸಿಟಿಯಲ್ಲಿರತಕ್ಕಂಥ ಅಧಿಕಾರಿಗಳ ಮಕ್ಕಳಿಗೆ ನೌಕರಿ ಸಿಕ್ಕುವ ಅವಕಾಶ ಹೆಚ್ಚಾ ಗಿರುತ್ತದೆ. ಅವರು ಹೆಚ್ಚಿಗೆ ಓದಲು ಅವಕಾಶವಿರುವುದರಿಂದ ಹೆಚ್ಚಿಗೆ ಗುಣ ಪಡೆದಿರುತ್ತಾರೆ. ಆದುದರಿಂದ ಒಕ್ಕಲು ಮಕ್ಕಳಿಗೆ ಸೆಲೆಕ್ಟ್ ಕಮಿಟಿಯವರು ಹತ್ತಿಪ್ಪತ್ತು ಗ್ರೇಸ್ ಮಾರ್ಕ್ಸ್‌ನ್ನ ಕೊಟ್ಟು, ಪ್ರಿಫರೆನ್ಸ್ ಕೊಟ್ಟು ನೇಮಕ ಮಾಡಬೇಕು ಎನ್ನುವ ಮಾತನ್ನು ನಾನು ಮಾನ್ಯ ಸದನದ ಗಮನಕ್ಕೆ ತರುತ್ತೇನೆ ; ಮತ್ತು ಸರ್ಕಾರದ ಗಮನಕ್ಕೆ ತರುತ್ತೇನೆ. ನಾನು ಮೇಲೆ ಹೇಳಿದಂತೆ ಸರ್ಕಾರದ ನೇಮಕಾತಿ ನೀತಿಯಲ್ಲಿ ಬದಲಾವಣೆ ಮಾಡಿ ಡಿವಿಜನಲ್ ಲೆವೆಲ್ ರೆಕ್ರೂಟ್‌ಮೆಂಟ್ ಕಮಿಟಿಗಳನ್ನು ಏರ್ಪಾಡು ಮಾಡುವುದರಿಂದ ಹಿಂದುಳಿದವರಿಗೆ ಮತ್ತು ಒಕ್ಕಲು ಮಕ್ಕಳಿಗೆ ನೌಕರಿ ಸಿಗಲು ಸಾಧ್ಯವಾಗುತ್ತದೆ. ಆದುದರಿಂದ ಸರ್ಕಾರದವರು ನೇಮಕಾತಿ ವಿಷಯದಲ್ಲಿ ತಮ್ಮ ನೀತಿಯನ್ನು ಬದಲಾವಣೆ ಮಾಡಬೇಕು ಎಂದು ಹೇಳುತ್ತೇನೆ.

ಇನ್ನು ಆಲ್ ಇಂಡಿಯಾ ಸರ್ವೀಸ್ ಬಗ್ಗೆ ಹೇಳುವುದಾದರೆ, ಐ. ಎ. ಎಸ್., ಐ.ಎಫ್.ಎಸ್. ಇದೆ. ಇಂಜನಿಯರಿಂಗ್ ಇಲಾಖೆಯ ಬಗ್ಗೆ ಐ.ಇ.ಎಸ್. ಮಾಡಲಿಕ್ಕೆ ಕೂಡ ಸೆಂಟ್ರಲ್

ಗೌರ್ನಮೆಂಟ್‌ನವರು ಶಿಫಾರಸು ಮಾಡಿ ಕಳಿಸಿದ್ದಾರೆಂದು ಹೇಳಿದ್ದೇನೆ. ಐ.ಎ.ಎಸ್‌ಗೆ ಆಲ್ ಇಂಡಿಯಾ ಸರ್ವೀಸ್ ಇದ್ದರೆ, ಎಲ್ಲಾ ಖಾತೆಗಳಿಗೂ ಸಂಬಂಧಪಟ್ಟಂತೆ ಆಲ್ ಇಂಡಿಯಾ ಸರ್ವೀಸ್ ಇರತಕ್ಕದ್ದು ಒಳ್ಳೆಯದು. ಇಲ್ಲದಿದ್ದರೆ ಐ.ಎ.ಎಸ್. ಆಲ್ ಇಂಡಿಯಾ ಸರ್ವೀಸ್ ತೆಗೆದು ಹಾಕತಕ್ಕದ್ದು.

ಇಲ್ಲದೇ ಇದ್ದರೆ ಪಕ್ಷಪಾತ ತೋರಿಸಿದಂತಾಗುತ್ತದೆ. ಒಂದೊಂದು ಖಾತೆಯಲ್ಲಿ ಒಬ್ಬೊಬ್ಬರು ಐ.ಎ.ಎಸ್. ಆಫೀಸರು ಇರುವುದು ಮತ್ತೊಂದು ಖಾತೆಯಲ್ಲಿ ಐ.ಎ.ಎಸ್. ಆಫೀಸರು ಇಲ್ಲದೇ ಇರುವುದು, ಹೀಗೆ ಮಾಡಿದರೆ ಅವರ ಕರ್ತವ್ಯದ ಕಡೆಗೆ ನಿರುತ್ಸಾಹವಾಗುತ್ತದೆ. ಇದ್ದರೆ ಎಲ್ಲಾ ಖಾತೆಗಳಲ್ಲೂ ಐ.ಎ.ಎಸ್. ಅಧಿಕಾರಿಗಳು ಇರಬೇಕು. ಇಲ್ಲವಾದರೆ ಅದನ್ನು ತೆಗೆದು ಹಾಕಬೇಕು ಎಂದು ಹೇಳುತ್ತೇನೆ.

ಇನ್ನು ಹೋಮ್ ಗಾರ್ಡ್ಸ್ ವಿಷಯದಲ್ಲಿ ಹೇಳುವುದಾದರೆ ಇದನ್ನು ಮಾನ್ಯ ಮುಖ್ಯ ಮಂತ್ರಿಗಳು ಗಮನದಲ್ಲಿಟ್ಟುಕೊಳ್ಳಬೇಕು. ಈ ಹೋಮ್ ಗಾರ್ಡ್ಸ್‌ನಿಂದ ಸರ್ಕಾರಕ್ಕೆ ಹೆಚ್ಚು ದುಡ್ಡು ಖರ್ಚಾಗುತ್ತದೆಯೇ ವಿನಾ ಇದರಿಂದ ಯಾವುದೇ ಅವಶ್ಯಕವಾದಂಥ ಉಪಯೋಗ ವಾಗುತ್ತಾ ಇಲ್ಲ ಎನ್ನುವ ಮಾತನ್ನು ಹೇಳುತ್ತೇನೆ. ಇದು ನಿರ್ವಿವಾದ ಮಾತು. ಇವಾಗ ದೇಶದಲ್ಲಿ ಅನ್‌ಎಂಪ್ಲಾಯ್‌ಮೆಂಟ್ ಪ್ರಾಬ್ಲಮ್ ಇದೆ. ಅನೇಕರಿಗೆ ನೌಕರಿ ಸಿಕ್ಕದೇ ಇರುವಾಗ ಹೋಮ್‌ಗಾರ್ಡ್ಸ್‌ಗೆ ಎಷ್ಟು ದುಡ್ಡು ಖರ್ಚು ಮಾಡುತ್ತಿದ್ದೀರೋ, ಅಷ್ಟು ಹಣವನ್ನು ಖರ್ಚು ಮಾಡಿ ಪೊಲೀಸ್ ಖಾತೆಗೆ ಜನರನ್ನು ತುಂಬಿ ನಮ್ಮ ದೇಶದಲ್ಲಿ ಪೊಲೀಸರ ಸಂಖ್ಯೆ ಜಾಸ್ತಿ ಯಾಗಬೇಕಾಗಿರುವುದರಿಂದ ಹೆಚ್ಚು ಪೊಲೀಸರನ್ನು ನೇಮಿಸಿಕೊಳ್ಳಬೇಕು. ಹಾಗಾದರೆ ದೇಶದಲ್ಲಿ ಲಾ ಅಂಡ್ ಆರ್ಡರ್ ಸಿಚುಯೇಷನ್‌ಗೆ ಅನುಕೂಲವಾಗುತ್ತದೆ. ಈವೊತ್ತು ಕೂಡ ಹಳ್ಳಿಗಳಲ್ಲಿ ಹೋಮ್‌ಗಾರ್ಡ್ಸ್ ಸಿಕ್ಕುವುದಿಲ್ಲ, ನಾವು ಪೊಲೀಸಿನವರಿಗೆ ಕಾಗದ ಬರೆಯಬೇಕು. ಅದು ತಮಗೂ ಗೊತ್ತಿದೆ. ಆದುದರಿಂದ ಹೋಮ್‌ಗಾರ್ಡ್ಸ್ ಇರುವುದು ಒಳ್ಳೆಯದಲ್ಲ ಅದನ್ನು ತೆಗೆದು ಹಾಕಬೇಕು ಎಂದು ಹೇಳುತ್ತೇನೆ.

ಇನ್ನು ಪೊಲೀಸ್ ಖಾತೆಯಲ್ಲಿ ಸಿ. ಐ. ಡಿ. ಆಂಟಿ ಕರಪ್ಷನ್ ಮತ್ತು ವಿಜಿಲೆನ್ಸ್ ಈ ಬ್ರಾಂಚುಗಳು ಇವೆ. ಇದರಲ್ಲಿ ಕೆಲಸ ಮಾಡುತ್ತಾ ಇರತಕ್ಕಂಥ ಜನಗಳು ಎಲ್ಲರೂ ಪೊಲೀಸ್ ಖಾತೆಯಿಂದ ಬಂದಿರತಕ್ಕಂಥಾವರು. ಈ ಬಗ್ಗೆ ನಾನು ಹೇಳುವುದಾದರೆ ಇದು ಪೊಲೀಸ್ ಖಾತೆಯಲ್ಲಿ ಇರತಕ್ಕಂಥದ್ದಲ್ಲ: ಇದಕ್ಕೆ ಬೇರೆ ಒಂದು ಸಿಬ್ಬಂದಿಯನ್ನೇ ಇಡಬೇಕು. ಇದು ಇಂಡಿಪೆಂಡೆಂಟ್ ಆಗಿ ಇರಬೇಕು ಎಂದು ಹೇಳುತ್ತೇನೆ. ಪೊಲೀಸ್ ಖಾತೆಯಲ್ಲಿ ಏನು ಒಂದು ನಿಯಮ ಇದೆಯೋ ತಮ್ಮ ಜನರನ್ನೇ ಸಿ.ಐ.ಡಿ.ಗೆ ಆಂಟಿ ಕರಪ್ಷನ್‌ಗೆ, ವಿಜಿಲೆನ್ಸ್‌ಗೆ ತೆಗೆದು ಕೊಳ್ಳುವುದು ಮಾಡಿದರೆ ಇದರಿಂದ ಪಕ್ಷಪಾತ ಮಾಡಿದಂತಾಗುತ್ತದೆ. ಈ ರೀತಿ ಆಗಬಾರದು. ಇದನ್ನು ಬೇರೆ ಒಂದು ಖಾತೆ ಮಾಡಿ, ಇದು ಇಂಡಿಪೆಂಡೆಂಟ್ ಆಗಿರುವಂತೆ ಮಾಡಬೇಕು. ಸಿ. ಐ. ಡಿ. ಮತ್ತು ಆಂಟಿ ಕರಪ್ಷನ್ ಸೇರಿದಂತೆ ಇದು ಇಂಡಿಪೆಂಡೆಂಟ್ ಆಗಿರಬೇಕೆಂದು ಹೇಳುತ್ತೇನೆ.

ಇನ್ನು ಮಾದಕಪಾನೀಯ ವಿಷಯ ಹೇಳುವುದಾದರೆ ಮಹಾತ್ಮಾ ಗಾಂಧೀಜಿಯವರ ತತ್ವವನ್ನು ನಾನು ಪರಿಪಾಲನೆ ಮಾಡಬೇಕಾಗಿದೆ. ಇದರ ಬಗ್ಗೆ ಪ್ರೊಹಿಬಿಷನ್ ತರಬೇಕು. ಪ್ರೊಹಿಬಿಷನ್ ತೆಗೆದರೆ ದುಡ್ಡು ಬರುತ್ತದೆ. ಅದು ಸ್ಕ್ರ್ಯಾಪ್ ಮಾಡುವುದು ಬೇಡ ಎನ್ನುವುದಾದರೆ, ನಿಮಗೆ ದುಡ್ಡೇ ಪ್ರಾಧಾನ್ಯ ಎನ್ನುವುದಾದರೆ ವೇಶ್ಯಾವೃತ್ತಿಯನ್ನು ಏತಕ್ಕೆ ತೆಗೆದುಹಾಕಬೇಕು. ಆದುದರಿಂದ ನೀವು ಪ್ರೊಹಿಬಿಷನ್ ತರುವುದಾದರೆ ವೇಶ್ಯಾವೃತ್ತಿಯನ್ನೂ ಕೂಡ ತೆಗೆಯಬೇಕು. ಇದನ್ನು ನಮ್ಮ ಸರ್ಕಾರ ಮನಸ್ಸು ಮಾಡಬೇಕು ಎಂದು ಹೇಳುತ್ತೇನೆ. ಮತ್ತು ಈ ಮಾದಕ ಪಾನೀಯಗಳನ್ನು ಕುಡಿಯದಂತೆ ಒಂದು ನೀತಿಯನ್ನು ಅನುಸರಿಸಬೇಕು ಎಂದು ಹೇಳುತ್ತೇನೆ.

ಇನ್ನು ಅಂಗಹೀನರ ಬಗ್ಗೆ ಹೇಳುವುದಾದರೆ ಅನೇಕರಿಗೆ ನೌಕರಿಗೆ ಹೋಗಲು ಕಾಲು ಇರುವುದಿಲ್ಲ, ಕೈ ಇರುವುದಿಲ್ಲ. ಆದುದರಿಂದ ನಾನು ಹೇಳುವುದು ಏನೆಂದರೆ ಯಾವ ನೌಕರಿಗೆ ಅವನು ಯೋಗ್ಯ ಇರುತ್ತಾನೋ ಅಂಥಾ ಜಾಗವನ್ನು ಕೊಟ್ಟು ಅವರಿಗೆ ಪ್ರಾಶಸ್ತ್ಯ ಕೊಡಬೇಕು. ಈ ದಿಶೆಯಲ್ಲಿ ಸರ್ಕಾರದ ಮನಸ್ಸು ಬದಲಾವಣೆಯಾಗಬೇಕು ಎಂದು ಹೇಳುತ್ತೇನೆ.

ಇನ್ನು ಯಾವುದೇ ಹೆಡ್ ಆಫ್ ದಿ ಡಿಪಾರ್ಟ್‌ಮೆಂಟ್ ತೆಗೆದುಕೊಳ್ಳಲಿ, ಅದು ಇಂಜಿನೀಯರಿಂಗ್ ಆಗಲಿ ವ್ಯವಸಾಯ ಖಾತೆ ಆಗಲಿ, ಯಾವುದೇ ಆಗಲಿ ಅವನು ಪರದೇಶಕ್ಕೆ ಹೋಗಿ ತನ್ನ ಒಂದು ಕೆಲಸದಲ್ಲಿ ಹೆಚ್ಚಿನ ಜ್ಞಾನ ಪಡೆದುಕೊಂಡು ಬಂದಮೇಲೆ ಅಂಥಾವನಿಗೆ ಇಲ್ಲಿ ಒಂದು ಸ್ಪೆಷಲ್ ಅಪಾಯಿಂಟ್‌ಮೆಂಟ್ ಕೊಟ್ಟು ಅವನ ಜ್ಞಾನವನ್ನು ಉಪಯೋಗಿಸಿಕೊಳ್ಳಬೇಕು. ಅವನಿಗೆ ಸೀನಿಯಾರಿಟಿ ಇಲ್ಲ ಎಂದು ಅವನಿಗೆ ಒಂದು ಸರಿಯಾದ ಹುದ್ದೆ ಕೊಡದೇ ಹೋದರೆ ಅದು ಲೋಪವಾಗುತ್ತದೆ. ಅವನ ಜ್ಞಾನವನ್ನು ಉಪಯೋಗ ಮಾಡಿಕೊಳ್ಳಬೇಕಾದರೆ ಸೀನಿಯಾರಿಟಿ ತೆಗೆದುಕೊಳ್ಳದೆ ಡೈರೆಕ್ಟ್ ಆಗಿ ನೇಮಕ ಮಾಡಿ ಅವನ ಜ್ಞಾನವನ್ನು ಉಪಯೋಗ ಮಾಡಿಕೊಳ್ಳಬೇಕು ಎಂದು ಹೇಳುತ್ತೇನೆ. ಮಾನ್ಯ ಅಧ್ಯಕ್ಷರು ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Sri B B. SAYANAK (Belgum) :—Madam Speaker, I rise to oppose Demands Nos. 3, 10, 12, 13, 15B, 35 and 36.

At the outset I want to speak on General Administration So many members have spoken on it. In all the offices, though the office time is 10-30 A. M. nobody will be in the office by that time. When we visit to these offices, we are told that the officers have not come or that they have gone to the Minister or somewhere else. The recess is at 1 P. M. but these officers will be coming to office at 4 P. M. If this is the case, what is the use of the office time? Instructions must be issued to the officers that they must be in the office from such and such time to such and such time. The Secretaries or Ministers never pay surprise visits to any office. Let them pay surprise visits. As a result of their non-observance of office time, the common people and the agriculturists are not getting justice.

Corruption is rampant. Even after the M. L. As. approach the Secretaries, Divisional Commissioners and Deputy Commissioners not once but several times, the work is not done. If this is the fate of the M. L As., what will be the fate of the poor and down trodden agriculturists? I heard that the officers want three W's. If they get three W's, the work will be done immediately. The three W's means wealth, wine and women.

Regarding I.A.S. officers, my friend Sri Deve Gowda said that the I.A.S. cadre should be removed. India is a federal democratic country and I am of the opinion that in the interest of the integration of the country the I.A.S. cadre must be there. Not only that, there must also be all-India cadres in respect of Engineering, Forest, Medicine, Agriculture and Education.

Regarding the ex-servicemen, you have directed the Employment Exchanges to help them. I approached the Offices of the Employment

Exchanges so many times on behalf of the ex-servicemen. But, they are not getting the required assistance or services from these exchanges. What is the use of giving instructions to the Employment Exchanges? If one pays Rs. 100 they immediately get orders. This is the fate of the Employment Exchanges.

The Government is acquiring lands from agriculturists for establishing several industries. In this connection instructions have been issued to the concerned officers to give preference to persons who have lost their lands due to acquisition. In Belgaum there is the Indian Aluminium Factory and a number of persons have given their land to the Factory. All those lands belong to the agriculturists and many young boys from these agriculturists families who have passed B.A., B.Sc., B.Com. and even Diplomas have approached the factory for employment. But they do not get jobs. On the other hand persons from Dharwar, Bijapur and Gulbarga are given preference and they are getting jobs. Therefore, what is the use of the Government giving instructions to the Aluminium Factory?

In the matter of transfers of officers, there must be a general policy. In Belgaum there is one Block Development Officer. Though I do not like generally to mention castes of officers, in this particular case I should like to mention. He is a Lingayat. He was transferred to Belgaum in the month of June. Three months he was there, he has done very good service and all the M.L. As. and even the Taluk Board Members were impressed with his work and they all wanted this person to be retained in Belgaum. But within three months of his coming, there, he was transferred to Mysore. I sent a telegram to the minister concerned and even the Divisional Commissioner was against his transfer. There is the Government Order that when a person is to be transferred within three months, the consent of the Chief Minister must be obtained. I heard that this officer who was doing some good work there, has worked for the Syndicate Congress at Bijapur and so he was transferred to Mysore. If that is the case, how many officers have you verified that they belong either to Syndicate Congress or Indicate Congress? How many persons you are going to transfer on such considerations? Though I am pleading for Marathi speaking people, I am requesting that this man should be retained in Belgaum because he is a very honest one.

Regarding pension to freedom fighters, I am sorry to say that there are so many bogus cases in Belgaum district. It is very necessary that you to appoint a committee. There are so many old persons like Sri Channappa Wali, Sri Jivanarao Yalgi and Pundalikji Kalgade who are alive and who know who is the real freedom fighter. I do not know why the Government has not seriously looked into this matter.

In regard to Kannada language, I know it is the Official Language of the State and I have no objection for it. In the border areas we are in majority.

Sri S. BANGARAPPA.—The Minority Languages Commission has stated that Mysore has done more for minorities than other States like Maharashtra.

Sri B. B. SAYANAK It is stated by the Chief Minister on the floor of the House that the Maharashtra Mysore dispute is not solved and it is pending before the Parliament. There are so many villages which have cent per cent marathi speaking population and so many other villages where 50 per cent of the population speak marathi You have said in your report that where there are more than 15 per cent of pulation speaking minority languages, they can send their application in their language if the people of the border area, that is, Belgaum, Khanapur, Chokodi send their application in marathi, they do not get any reply in marathi and their work is not done. That is the experience of the marathi people in border areas.

Sri S. BANGARPPA :—If a Kannadiga sends a letter in Kannada to the Chief Minister of Maharashtra, does he send reply in Kannada ?

Sri B. B. SAYANAK :—It is not my concern.

Regarding the excise department, during the Britishers' rule in India liquor shops used to be started outside the cities. In Belgaum there were only two liquor shops. But, today the present Government which is supposed to follow the tradition of Mahatma Gandhi and which supports the father of the Nation, has given permission to start liquor shops in every lane and by-lanes. Liquor shops are opened in front of schools. I have brought this to the notice of the Deputy Commissioner but these shops are not closed. I would tell the Government that if only they had started milk booths in all these lanes, the health of young boys would have improved. Now even the school going boys and girls are consuming liquor. Is this the way to build India ? Are we thinking that by starting these liquor shops we can get more income ? We are thinking only of income. Is it a good thing on the part of the government which is running administration in the name of Mahatma Gandhi to think that income is its only concern ? Therefore, I requeest the Government to stop opening of liquor shops in the lanes and ifat all they want to have they could it outside the city of Belgaum.

The Policeman when he is in uniform he does not behave like a human being but behaves as a brute and he would beat in the street even women and children. Secondly, when there was enhancement of fees in Private colleges of Karnatak University there was agitation and student belonging to R. B. V. College of Commerce Belgaum took out a procession towards the Lingaraj College. But the police did not allow them to Proceed. Again after some time when the students of Lingaraj College took out a Procession and marched towards the R. B. V. College of Commerce the Police quietly allowed them. Such sort of discrimination is being made by the police between students of marathi college and other colleges in Belgaum.

Then Mr. Lewis, an ex-I. G. P. has constructed big bungalows at Bangalore and Belgaum and is getting about one thousand rupees as rent. I know how corrupt he was. The D. I. G. of police in Belgaum now is no doubt a very nice man. But I don't know why he has been continued there for more than five years? Is there no other suitable Person to replace him?

With regard to Home Guards, I would like to mention that you are taking the services of the teachers in the Home Guards services Teachers are being utilised for serving during various festivals like Mohurrum, GanaPathi festival etc. The teachers take part in these activities because of the impression they have that they would not be transferred elsewhere from Belgaum. Further if the Teachers are engaged in these activities the student community will have to suffer. Therefore I request the Government not to allow the teachers to participate in these activities. With these w rds I thank the Chair and conclude my speech.

ಶ್ರೀ ಬಿ. ಜಿ. ಬಣಕಾರ್ (ಹಿರೇಕೆರೂರು) :—ಮಾನ್ಯ ಅಧ್ಯಕ್ಷಿಣಿಯವರೇ, ಇವೊತ್ತಿನ ದಿವಸ ಮಂಡಿಸಿರತಕ್ಕ ಬೇಡಿಕೆಗಳನ್ನು ಸ್ವಾಗತಿಸುತ್ತಾ ಕೆಲವು ಸಲಹೆಗಳನ್ನು ಕೊಡಬಯಸುತ್ತೇನೆ. ಇವೊತ್ತಿನ ದಿವಸ ರಾಜ್ಯದಲ್ಲಿ ಜನತೆಗೆ ಬೇಕಾಗಿರುವುದು ಉಚ್ಚಮಟ್ಟದ ಆಡಳಿತ. ಅದಕ್ಕೆ ಸಾಕಷ್ಟು ಶ್ರಮವಹಿಸಿ ಜನತೆಗೆ ಅನುಕೂಲ ಮಾಡಿಕೊಡಲು ಇಂತಹ ಅಧಿಕಾರ ಸರಕಾರಕ್ಕೆ ಕೊಟ್ಟಿದೆ. ಇದನ್ನು ಸರಕಾರ ಉತ್ತಮ ರೀತಿಯಿಂದ ನಡೆಸಿಕೊಂಡು ಬರುತ್ತಿದ್ದರೆ ಆಗ ನಮ್ಮ ರಾಜ್ಯದಲ್ಲಿ ಉತ್ತಮವಾದ ಆಡಳಿತವಿದೆ ಎನ್ನುವ ಒಂದು ಪ್ರತೀತಿ ಎಲ್ಲ ಕಡೆಗೂ ಬರುತ್ತದೆ. ಜನತೆ ಕೇಳುತ್ತಿರುವುದು ಉತ್ತಮವಾದ ಆಡಳಿತ ಮತ್ತು ರಾಜ್ಯದ ಮುಖ್ಯ ಮಂತ್ರಿಗಳು ಒಂದು ಮಂತ್ರಿಮಂಡಲವನ್ನು ಮಾಡಿಕೊಂಡು ಅವರ ಸಲಹೆಗಳನ್ನು ಪಡೆಯಲು ರಾಜ್ಯದಲ್ಲಿರುವ ನೌಕರರುಗಳ ಸೇವೆಯನ್ನು ಪಡೆಯುತ್ತಿದ್ದಾರೆ. ಇದಕ್ಕಾಗಿ ನಮ್ಮ ರಾಜ್ಯದ ಎಲ್ಲ ಜನರೂ ಹಾಗೂ ಸಂಘ ಸಂಸ್ಥೆಗಳವರು ಉತ್ತಮವಾದ ರೀತಿಯಿಂದ ಸರಕಾರಕ್ಕೆ ಸಹಾಯ ಮಾಡುವಂತೆ ನಡೆದುಕೊಂಡರೆ ನಮ್ಮ ರಾಜ್ಯ ಇತರ ರಾಜ್ಯಗಳಿಗಿಂತ ಹಿಂದೆ ಏನು ರಾಮರಾಜ್ಯ ಎಂದು ಹೇಳುತ್ತಿದ್ದರೋ ಅಂತಹ ರಾಜ್ಯ ನಮ್ಮ ರಾಜ್ಯದಲ್ಲಿ ಬಂದೀತೋ ಏನೋ ಎಂದು ಭಾವಿಸುತ್ತಾರೆ. ಇದಕ್ಕಾಗಿ ನಮ್ಮ ರಾಜ್ಯದಲ್ಲಿರುವ ಎಲ್ಲ ಗ್ರಾಮ ಪಂಚಾಯತಿಗಳವರು ಇವರಿಂದ ಹಿಡಿದು ಇತರ ಎಲ್ಲ ಸಂಸ್ಥೆಗಳೂ ರಾಜ್ಯಕ್ಕೆ ಒಳ್ಳೆಯ ಹೆಸರು ಬರುವಂತೆ ಸಲಹೆಗಳನ್ನು ಕೊಟ್ಟು ಉತ್ತಮವಾದ ಹೆಸರು ಬರುವಂತೆ ಯತ್ನ ಮಾಡಬೇಕು. ಇಂತಹ ಒಳ್ಳೆಯ ಕೆಲಸಗಳನ್ನು ಮಾಡಬೇಕಾದರೆ ನಮ್ಮ ದೇಶದ ಹೊಣೆ ಹೊತ್ತಿರುವ ಮುಖ್ಯಮಂತ್ರಿಗಳಿಗೊಬ್ಬರಿಗೇ ಅಲ್ಲ, ಅವರ ಜೊತೆಗೆ ನಮ್ಮ ಎಲ್ಲ ಶಾಸಕರುಗಳು, ಹಾಗೂ ಇನ್ನಿತರ ಅನೇಕ ಸಂಘ ಸಂಸ್ಥೆಗಳು ಉಪಯುಕ್ತವಾದ ಸಲಹೆಗಳನ್ನು ಕಾಲಕಾಲಕ್ಕೆ ಕೊಡಬೇಕು, ಇದರಲ್ಲಿ ಪಂಚಾಯತಿಯಿಂದ ಹಿಡಿದು ಎಂದರೆ ಪಟೇಲ, ಶ್ಯಾನುಭೋಗರುಗಳು ಹಾಗೂ ಇನ್ನಿತರ ಜನರ ಸಹಕಾರ ಅಗತ್ಯವಾಗಿ ನಮ್ಮ ಸರಕಾರಕ್ಕೆ ಕೊಡಬೇಕು. ಹಾಗೆ ಮಾಡಿದರೆ ಉತ್ತಮವಾದ ಆಡಳಿತವನ್ನು ನಡೆಸಲು ಸಹಾಯವಾಗುತ್ತದೆ. ಹಾಗೆ ಉತ್ತಮವಾದ ಆಡಳಿತಗಳು ನಡೆಯಬೇಕಾದರೆ ಇದರಲ್ಲಾಗುವ ನೇಮಕಗಳ ಹಾಗೂ ವರ್ಗಾವಣೆಗಳ ಕಡೆಗೆ ನಾವು ದೀರ್ಘವಾಗಿ ಆಲೋಚನೆ ಮಾಡಬೇಕಾಗಿದೆ. ನೇಮಕಗಳನ್ನು ಮಾಡುವಾಗ ದೊಡ್ಡ ದೊಡ್ಡ ಪ್ರಭಾವವುಳ್ಳವರಿಗೆ ಹಾಗೂ ಇವರ ಮಕ್ಕಳಿಗೇ ನೌಕರಿಗಳು ಸಿಗುತ್ತವೆ. ನೌಕರಿಗಳನ್ನು ಕೊಡುವಾಗ ಒಂದು ಕರಾರು ಮಾಡಬೇಕು. ನೌಕರಿಗೆ ಬರುವಾತನ ತಂದೆಗೆ ಅವರು ಯಾವ ಸ್ಥಿತಿಯಲ್ಲಿದ್ದಾರೆ? ಅವರು ದೊಡ್ಡ ವ್ಯಾಪಾರಿಗಳೇ?

ಅಥವಾ ದೊಡ್ಡ ಜಮೀನುದಾರರ ಮಕ್ಕಳೇ ಇವನ್ನೆಲ್ಲಾ ಪರಿಶೀಲನೆ ಮಾಡಬೇಕು. ಒಬ್ಬ ಜಮೀನುದಾರನಿಗೆ 40 ಎಕರೆ ಜಮೀನುಗಳಿದ್ದು ಅವರಿಗೆ ಎರಡು ಮಕ್ಕಳಿದ್ದರೆ ಅವರಲ್ಲಿ ಒಬ್ಬರು ಸರಕಾರದ ನೌಕರಿಗೆ ಬರಲು ಅರ್ಜಿ ಹಾಕಿದರೆ ಅಂತಹವರಿಗೆ ಸರಕಾರದಲ್ಲಿ ನೌಕರಿ ಕೊಡಬಾರದು? ಏಕೆಂದರೆ ಅವರಿಗಿರುವ ಜಮೀನಿನಲ್ಲೇ ಕೆಲಸ ಮಾಡಿಕೊಂಡು ಚೆನ್ನಾಗಿ ಜೀವನ ನಡೆಸಬಹುದು. ಒಬ್ಬರು ದೊಡ್ಡ ವ್ಯಾಪಾರಿಯಾಗಿದ್ದು ಅವರಿಗೆ ಇಬ್ಬರು ಮಕ್ಕಳಿದ್ದರೆ ಅವರಲ್ಲಿ ಕೂಡ ಸರಕಾರದ ಕೆಲಸಕ್ಕೆ ಬರಬೇಕೆಂದರೆ ಅಂತಹ ಜನಕ್ಕೆ ನೌಕರಿಗಳನ್ನು ಕೊಡಬಾರದು. ಏಕೆಂದರೆ ಅವರು ವ್ಯಾಪಾರ ಮಾಡಿಕೊಂಡು ಇರಬಹುದು. ಯಾರು ಬಡಜನರಾಗಿದ್ದಾರೆ ಮತ್ತು ಜೀವನ ಮಾಡಲು ಬೇರೆ ಯಾವ ಒಂದು ಕಸಬುಗಳು ಇರುವುದಿಲ್ಲವೋ ಅಂತಹ ಜನಕ್ಕೆ ಉದ್ಯೋಗಗಳನ್ನು ಒದಗಿಸಿಕೊಡತಕ್ಕದ್ದು.

ಇವೊತ್ತು ನಮ್ಮ ರಾಜ್ಯದಲ್ಲಿ ಜಮೀನು ಇಲ್ಲದವರ ಮಕ್ಕಳು ಏನಿದ್ದಾರೆ, ಬಡ ಸರ್ಕಾರಿ ನೌಕರರ ಮಕ್ಕಳು ಏನಿದ್ದಾರೆ, ಅವರುಗಳಿಗೆ ಮೊದಲು ನೌಕರಿ ದೊರೆಯಬೇಕು. ಈ ವಿಚಾರ ದಲ್ಲಿ ಪ್ರತಿ ತಾಲ್ಲೂಕ್‌ನಲ್ಲಿಯೂ ಎಸ್. ಎಸ್. ಎಲ್. ಸಿ. ಪಾಸ್ ಮಾಡಿದವರು ಎಷ್ಟು ಮಂದಿ ಇದ್ದಾರೆ, ಬಿ. ಎ. ಪಾಸ್ ಮಾಡಿದವರು ಎಷ್ಟು ಮಂದಿ ಇದ್ದಾರೆ, ಇತರೇ ಪರೀಕ್ಷೆಗಳನ್ನು ಪಾಸ್ ಮಾಡಿದವರು ಎಷ್ಟು ಮಂದಿ ಇದ್ದಾರೆಂಬ ಬಗ್ಗೆ ಸರ್ವೆ ನಡೆಸಿ ಆ ಒಂದು ಲೆಕ್ಕವನ್ನು ಇಡಬೇಕು. ಇಂದು ಅಭ್ಯರ್ಥಿಗಳನ್ನು ಕೆಲಸಕ್ಕೆ ತೆಗೆದುಕೊಳ್ಳುವ ಬಗ್ಗೆ ರಾಜ್ಯಮಟ್ಟದಲ್ಲಿ ಮತ್ತು ಜಿಲ್ಲಾ ಮಟ್ಟಗಳಲ್ಲಿ ರೆಕ್ರೂಟ್‌ಮೆಂಟ್ ಕಮಿಟಿಗಳು ಇವೆ. ಈ ಜಿಲ್ಲಾ ರೆಕ್ರೂಟ್‌ಮೆಂಟ್ ಕಮಿಟಿ ಯವರು ಪ್ರತಿ ತಾಲ್ಲೂಕ್‌ವಾರು ಇಷ್ಟಿಷ್ಟು ಸೀಟುಗಳು ಎಂದು ಕೊಡದೆ ಅಭ್ಯರ್ಥಿಗಳ ಅಳತೆ ಗೋಲನ್ನು ನೋಡಿಕೊಂಡು. ಅವರ ಸಾಮರ್ಥ್ಯವನ್ನು ನೋಡಿಕೊಂಡು, ಅವರ ಮೆರಿಟ್‌ನ್ನು ನೋಡಿಕೊಂಡು ಕೆಲಸ ಕೊಡಬೇಕೆಂದು ಹೇಳುತ್ತೇನೆ.

ಇನ್ನು ವರ್ಗಾವಣೆ ವಿಚಾರದಲ್ಲಿಯೂ ಸಹ ಮುಖ್ಯಮಂತ್ರಿಗಳು ಒಂದು ದೊಡ್ಡ ನಿಲುವು ತೆಗೆದುಕೊಳ್ಳದೇ ಹೋದರೆ ಈ ರಾಜ್ಯದ ಆಡಳಿತಕ್ಕೆ ಕೆಟ್ಟ ಹೆಸರು ಬರಬಹುದು. ಇಂದು ನಮ್ಮ ರಾಜ್ಯದಲ್ಲಿ ಉತ್ತಮ ರೀತಿಯಿಂದ ಕೆಲಸ ಮಾಡುವ ಅಧಿಕಾರಿಗಳೂ ಇದ್ದಾರೆ, ಅದರಂತೆ ಕೆಟ್ಟ ಅಧಿಕಾರಿಗಳೂ ಸಹ ಇದ್ದಾರೆ. ಇಂತಹವರ ಬಗ್ಗೆ ಸರ್ಕಾರದವರು ನಿಗಾ ಇಟ್ಟು ಅವರು ಸರಿಯಾಗಿ ಕೆಲಸ ಮಾಡಲಿಲ್ಲ ಎಂದರೆ ನಿರ್ದಾಕ್ಷಿಣ್ಯವಾಗಿ ಮನೆಗೆ ಕಳುಹಿಸಬೇಕು. ಎಲ್ಲೆಲ್ಲಿ ಉತ್ತಮ ಅಧಿಕಾರಿಗಳು ಇದ್ದಾರೆ ಅವರಿಗೆ ಇನ್ನೂ ಹೆಚ್ಚಿನ ಹುದ್ದೆಗಳನ್ನು ಕೊಟ್ಟು ಅವರಿಂದ ಇನ್ನೂ ಉತ್ತಮ ರೀತಿಯಿಂದ ಕೆಲಸಗಳನ್ನು ತೆಗೆದುಕೊಳ್ಳಿ. ಯಾವ ಯಾವ ಅಧಿಕಾರಿಗಳು ತಮ್ಮ ತಮ್ಮ ಊರಿನಲ್ಲಿಯೋ ಇದ್ದುಕೊಂಡು ತಮ್ಮ ಖಾಸಗೀ ಕೆಲಸಕ್ಕೆ ಹೆಚ್ಚು ಪ್ರಾಮುಖ್ಯತೆ ಕೊಡುತ್ತಿದ್ದಾರೋ ಅಂತಹವರ ಬಗ್ಗೆ ನಿಗಾ ವಹಿಸಬೇಕೆಂದು ಹೇಳುತ್ತೇನೆ. ಕೆಲವು ಕಡೆಗಳಲ್ಲಿ ಡಾಕ್ಟರ್ ಇರುತ್ತಾರೆ. ಅವರು 5 ಗಂಟೆಗೆ ಕೆಲಸ ಮುಗಿಸಿಕೊಂಡು ತಮ್ಮ ಊರಿಗೆ ಹೊರಟು ಹೋಗಿ ತಮ್ಮ ಸ್ವಂತ ಕೆಲಸಗಳ ಕಡೆಗೆ ಗಮನ ಕೊಡುತ್ತಾರೆ. ಅಂತಹ ಸಂದರ್ಭಗಳಲ್ಲಿ ಯಾರಿಗಾದರೂ ಹಾವು ಕಚ್ಚಿದರೆ ಕೂಡಲೆ ಡಾಕ್ಟರ್ ಸಿಕ್ಕುವುದಿಲ್ಲ. ಆಗ ಜನರು ಈ ಸರ್ಕಾರದ ಆಡಳಿತದಲ್ಲಿ ಡಾಕ್ಟರ್ ಸಹ ಸಮಯದಲ್ಲಿ ಸಿಗುವುದಿಲ್ಲ ಎಂದು ಹೇಳು ತ್ತಾರೆ. ಅದೇ ರೀತಿ ತಹಶೀಲ್‌ದಾರರು ಮತ್ತು ಬಿ. ಡಿ. ಒ. ಗಳು ಸಹ ಆಯಾ ತಾಲ್ಲೂಕ್ ಗಳಲ್ಲಿ ಇರದೆ ತಮ್ಮ ತಮ್ಮ ಊರುಗಳಿಗೆ ಕೆಲಸ ಮುಗಿದ ಮೇಲೆ ಹೋಗುವ ಪದ್ಧತಿ ಇದೆ. ಬೇಕಾದಾಗ ಇವರುಗಳು ಸಿಗುವುದಿಲ್ಲ. ಅದರಲ್ಲಿಯೂ ಬಿ. ಡಿ. ಒ. ಗಳು ರಾಜಕೀಯದಲ್ಲಿ ಪ್ರವೇಶ ಮಾಡಿ ರಾಜಕೀಯ ಧುರೀಣರ ಜೊತೆಯಲ್ಲಿ ಸೇರಿಕೊಂಡು ಅವರು ಹೇಳಿದಂತೆ ಕೆಲಸ ಮಾಡುವುದು ನಡೆಯುತ್ತಿದೆ. ಆಗ ಜನರು ತಮ್ಮ ಮಾತು ' ಏನೂ ನಡೆಯುವುದಿಲ್ಲ ಕೇವಲ ಪ್ರಭಾವಶಾಲಿಗಳ ಮಾತು ಮಾತ್ರ ನಡೆಯುತ್ತದೆ ಎಂದು ಹೇಳಿಕೊಳ್ಳುತ್ತಾರೆ.ಯಾವ ಅಧಿಕಾರಿಗಳು ನಿಷ್ಪಕ್ಷಪಾತವಾಗಿ ಮತ್ತು ನಿರ್ದಾಕ್ಷಿಣ್ಯವಾಗಿ ಕೆಲಸ ಮಾಡುತ್ತಾರೆ ಅಂತಹವರ ಬಗ್ಗೆ ಉತ್ತಮ

ರೀತಿಯಿಂದ ಕೆಲಸ ಮಾಡುತ್ತಿದ್ದಾರೆ ಎಂದು ಜನರು ಹೇಳುತ್ತಾರೆ. ಇಂದು ರಾಜ್ಯದಲ್ಲಿ ಆಹಾರ ಪರಿಸ್ಥಿತಿ ಹದಗೆಟ್ಟಿದ್ದರೆ ಅದಕ್ಕೆ ಅಧಿಕಾರಿಗಳು ಸರಿಯಾಗಿ ಲೆವಿಯನ್ನು ವಸೂಲಿ ಮಾಡದಿರುವುದು. 50 ಪರ್ಸೆಂಟ್ ಕೂಡ ಪ್ರೊಕ್ಯೂರ್‌ಮೆಂಟ್ ಆಗಿಲ್ಲ. ಇಂದು ಅಕ್ಕಿಯ ರೇಟ್ ಕ್ವಿಂಟಾಲ್‌ಗೆ 120 ರಿಂದ 130ರವರೆಗೆ ಇದೆ. ಎಷ್ಟೋಜನರು ಭತ್ತವನ್ನು ರೈತರಿಂದ ಕೊಂಡು ಅಕ್ಕಿ ಮಾಡಿಸಿ ಬೆಂಗಳೂರು ಕಡೆಗೆ ಮತ್ತು ಮಹಾರಾಷ್ಟ್ರದ ಕಡೆಗೆ ಕಳಿಸುತ್ತಿದ್ದಾರೆ; ಇದರ ಕಡೆಯೂ ಸಹ ಅಧಿಕಾರಿಗಳು ಸರಿಯಾದ ಕ್ರಮ ತೆಗೆದುಕೊಳ್ಳುತ್ತಿಲ್ಲ ; ಮತ್ತು ಲೆವಿಯನ್ನು ಸಹ ಸರಿಯಾಗಿ ವಸೂಲಿ ಮಾಡುತ್ತಿಲ್ಲ ; ಇದರಿಂದ ಬ್ಲಾಕ್‌ನಲ್ಲಿ ಅಕ್ಕಿಯ ರೇಟ್ ಜಾಸ್ತಿಯಾಗುವುದಕ್ಕೆ ಅವಕಾಶವಾಗಿದೆಯೆಂದು ಜನರಿಂದ ಕೂಗು ಬರುತ್ತಿದೆ. ಇಂಥಾದ್ದಕ್ಕೆ ಸರ್ಕಾರದವರು ಅವಕಾಶ ಕೊಟ್ಟರೆ ಸರ್ಕಾರಕ್ಕೇ ಕೆಟ್ಟ ಹೆಸರು ಬರುತ್ತದೆ. ಮುಖ್ಯವಾಗಿ ಅಧಿಕಾರಿಗಳ ಬಗ್ಗೆ ಸರ್ಕಾರ ದವರು ಬಿಗಿ ಕ್ರಮ ಅನುಸರಿಸಬೇಕು. ಅನೇಕ ಜನ ಅಧಿಕಾರಿಗಳು ತಮಗೆ ಇಲ್ಲವೇ ತಮ್ಮ ಹೆಂಡರು ಮಕ್ಕಳಿಗೆ ಹವಾ ಹೊಂದುವುದಿಲ್ಲವೆಂಬ ಕಾರಣ ಕೊಟ್ಟು ಬೇರೆ ಕಡೆಗೆ ವರ್ಗ ಕೇಳು ತ್ತಾರೆ. ಮತ್ತು ಮಂತ್ರಿಗಳ ಮತ್ತು ಎಂ. ಎಲ್. ಎ. ಗಳ ವರ್ಚಸ್ಸನ್ನು ಸಹ ಇಂತಹ ಸಂದರ್ಭ ಗಳಲ್ಲಿ ಬೀರಿಸುವುದಕ್ಕೆ ಅವರ ಹಿಂದೆ ಕೂಡಬರುತ್ತಾರೆ. ಇದರಿಂದ ಇಂದು ಮಂತ್ರಿಗಳಾದವರು ಮತ್ತು ಎಂ. ಎಲ್. ಎ. ಗಳಾದವರು ತಮ್ಮ ಸಮಯದಲ್ಲಿ ಕಾಲುಭಾಗವನ್ನು ಈ ನೌಕರರ ಸಲುವಾಗಿಯೇ ಕಳೆಯಬೇಕಾಗಿದೆ. ಈ ರೀತಿ ವರ್ಗದ ಬಗ್ಗೆ ಯಾರಾದರು ಶಿಫಾರಸ್ ಮಾಡಿಸಿದರೆ ಮುಖ್ಯಮಂತ್ರಿಗಳು ಅದಕ್ಕೆ ನಿಗಾ ಕೊಡಬಾರದು ಮತ್ತು ರಾಜ್ಯದ ಯಾವುದೇ ಭಾಗಕ್ಕೆ ಹಾಕಿದರೂ ಸಹ ಹೋಗಬೇಕೆಂದು ಅವರಿಗೆ ಹೇಳಬೇಕು. ಇಂದು ರಾಜ್ಯದಲ್ಲಿ ಎರಡು ಲಕ್ಷ ಅಥವಾ 3 ಲಕ್ಷ ನೌಕರರು ' ಏನಿದ್ದಾರೆ ಅವರೆಲ್ಲರೂ ಸಹ ರಾಜ್ಯದ ಯಾವುದೇ ಭಾಗದಲ್ಲಿ ಯಾದರೂ ಕೆಲಸ ಮಾಡಲು ತಯಾರಿರಬೇಕು. ಇಂದು ಗ್ರಾಮಮಟ್ಟದಲ್ಲಿ ಪಟೇಲರು, ತಳವಾರರು, ಗ್ರಾಮಸೇವಕರು ಸರಿಯಾಗಿ ಕೆಲಸ ಮಾಡುತ್ತಿಲ್ಲ ಇವರ ಸಂಬಳಸಾರಿಗೆಯ ಬಗ್ಗೆ ಸರ್ಕಾರದವರು ಅಷ್ಟೊಂದು ನಿಗಾ ಕೊಟ್ಟಿಲ್ಲ. ಗ್ರಾಮಮಟ್ಟದಲ್ಲಿ ಸರಿಯಾಗಿ ಆಡಳಿತ ನಡೆಯಬೇಕಾದರೆ, ಗ್ರಾಮ ಸರ್ಕಾರ ಉತ್ತಮ ರೀತಿಯಿಂದ ನಡೆಯಬೇಕಾದರೆ ಅವರ ಕುಂದು ಕೊರತೆಗಳನ್ನು ಮುಖ್ಯಮಂತ್ರಿಗಳು ಬಗೆಹರಿಸಬೇಕು ಮತ್ತು ಆ ಕಡೆಗೆ ನಿಗಾ ವಹಿಸಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳಿಕೊಂಡು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಅಧ್ಯಕ್ಷರಿಗೆ ವಂದಿಸಿ ನನ್ನ ಚಿಕ್ಕ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಎಚ್. ಎಸ್. ಸಿದ್ದಪ್ಪ ಅರಸೀಕೆರೆ :—ಸನ್ಮಾನ್ಯ ಅಧ್ಯಕ್ಷಿಣಿಯವರೇ, ಈ ಸಭೆಯ ಮುಂದೆ ಮಂಡಿಸಿರುವ ರಾಜ್ಯದ ಅಬಕಾರಿ, ಪೊಲೀಸು, ವಾರ್ತಾ ಪ್ರಸಾರ ಇಲಾಖೆ ಹಾಗೂ ಇತರೇ ಡಿಮ್ಯಾಂಡ್‌ಗಳು ಏನಿವೆ, ಅವುಗಳನ್ನು ವಿರೋಧಿಸುತ್ತಾ, ಇವೊತ್ತು ನಮ್ಮ ಸಾಮಾನ್ಯ ಆಡಳಿತ ಬಹಳ ಹದಗೆಟ್ಟಿದೆ ಎಂಬುದನ್ನು ನಮ್ಮ ಅನೇಕ ಮಿತ್ರರು ಹೇಳಿದ್ದಾರೆ. ಇದರ ಬಗ್ಗೆ ನಾನು ಹೇಳುವುದು ಇಷ್ಟೆ, ಸಾಮಾನ್ಯವಾಗಿ ಆಡಳಿತ ತೀರಾ ಸಾಮಾನ್ಯವಾಗಿ ಹೋಗಿದೆ ಎಂದು. ಆ ರೀತಿ ಆಗಬಾರದು. ಇದಕ್ಕೆ ಕಾರಣಗಳನ್ನು ಮಾನ್ಯ ಸದಸ್ಯರು ಹೇಳಿದ್ದಾರೆ. ಇಂದು ಉನ್ನತ ಅಧಿಕಾರಿಗಳು ಏನಿದ್ದಾರೆ, ಅವರು ಜವಾಬ್ದಾರಿಯನ್ನು ಹೊರುತ್ತಾ ಇಲ್ಲ. ಯಾವ ಜವಾಬ್ದಾರಿ ಬಂದರೂ ಸಹ, ಸೆಕ್ರೆಟೇರಿಯಟ್‌ನಲ್ಲಿರುವ ಸೆಕ್ರೆಟರಿಗಳನ್ನು ಷರೀಕ್ ಮಾಡಿಕೊಂಡು ಮತ್ತು ಅವರನ್ನು ಹದದಲ್ಲಿ ಇಟ್ಟುಕೊಂಡು ; ಮಂತ್ರಿಗಳ ಮುಂದೆ ಚೆನ್ನಾಗಿ ಇದ್ದುಕೊಂಡು ಕೆಲಸ ಮಾಡುತ್ತಿದ್ದಾರೆಯೇ ಹೊರತು, ಜನ ಸಾಮಾನ್ಯರು ಇಂದು ಅವರನ್ನು ಹೋಗಿ ಕಾಣತಕ್ಕ ಅವಕಾಶ ಇಲ್ಲವಾಗಿದೆ. ಮಂತದಾರರಿಗೆ ಯಾವ ರೀತಿ ಕೆಲಸ ಮಾಡಿ ಕೊಡಬೇಕೆಂಬುದನ್ನು ಅವರು ಮರೆತಿದ್ದಾರೆಂದು ಹೇಳುತ್ತೇನೆ. ಇದಕ್ಕೆ ಒಂದು ಉದಾಹರಣೆ ಕೊಡುತ್ತೇನೆ. ಮುಖ್ಯ ಮಂತ್ರಿಗಳಿಗೆ ಜನವರಿ ತಿಂಗಳಲ್ಲಿ ಒಂದು ಪತ್ರ ಬರೆದೆ. ಕಾಮಧೇನು ಎಂಟರ್‌ಪ್ರೈಜಸ್ ಎಂಬ ಸಂಸ್ಥೆಯವರು ಸುಳ್ಳು

ಹೆಸರು ಕೊಟ್ಟು ಸಂಸ್ಥೆಯನ್ನು ರಿಜಿಸ್ಟರ್ ಮಾಡಿಸಿ ಬೇಕಾದಷ್ಟು ಅವ್ಯವಹಾರ ಮಾಡಿದ್ದಾರೆ; ರೈತರಿಂದ 2 ಲಕ್ಷ ರೂಪಾಯಿಗಳವರೆಗೆ ಹಣ ದೋಚಿದ್ದಾರೆ. ಆದ್ದರಿಂದ ಈ ಸಂಸ್ಥೆಯ ಮೇಲೆ ತಕ್ಕ ಕ್ರಮ ಕೈಕೊಳ್ಳಬೇಕೆಂದು ಮುಖ್ಯ ಮಂತ್ರಿಗಳಿಗೆ ಪತ್ರ ಬರೆದಿದ್ದಕ್ಕೆ ಅವರಿಂದ 3 ದಿವಸಗಳಲ್ಲಿಯೇ ನನಗೆ ಒಂದು ಪತ್ರ ಬಂತು. ಇದರ ಬಗ್ಗೆ ತನಿಖೆ ಮಾಡಿ ಸೂಕ್ತ ಕ್ರಮ ಕೈಕೊಳ್ಳುವುದಕ್ಕೆ ಹೋಂ ಸೆಕ್ರೆಟರಿಯವರಿಗೆ ಕಳಿಸಿ ಕೊಟ್ಟಿದ್ದೇನೆ, ಅವರು ಸೂಕ್ತ ಕ್ರಮ ತೆಗೆದುಕೊಂಡ ಮೇಲೆ ತಕ್ಷಣ ತಮಗೆ ಮತ್ತೆ ಕಾಗದ ಬರೆಯುತ್ತೇನೆಂದು ಅದರಲ್ಲಿ ಹೇಳಿದ್ದರು. ಅಲ್ಲಿಂದ ಇಲ್ಲಿಯವರೆಗೆ ಏನು ಕ್ರಮ ತೆಗೆದುಕೊಂಡಿದ್ದಾರೆಂಬುದು ನನಗೆ ತಿಳಿಯಲಿಲ್ಲ. ಈ ಬಗ್ಗೆ ನಾನು ಹೋಂ ಸೆಕ್ರೆಟರಿಯವರಿಗೆ ಮತ್ತು ಪೋಲೀಸ್ ಕಮಿಷನರ್ ಅವರಿಗೆ ಫೋನ್ ಮಾಡಿ ಕೇಳಿದರೆ ತಮಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಇಂತಹ ಸಂದರ್ಭಗಳಲ್ಲಿ ಸಾರ್ವಜನಿಕ ಹಿತದೃಷ್ಟಿಯಿಂದ ಮುಖ್ಯ ಮಂತ್ರಿಗಳೇ ಜ್ಞಾಪಕ ಮಾಡಿಕೊಂಡು ಕೇಳಬೇಕಾಗಿದೆ. ಇದು ಹೋಗಬೇಕು. ಯಾವುದೇ ಮಂತ್ರಿಗಳಿಂದ ಆ ಇಲಾಖೆಯ ಮುಖ್ಯಾಧಿಕಾರಿಗಳಿಗೆ ಯಾವುದಾದರು ವಿಷಯದ ಬಗ್ಗೆ ಕ್ರಮ ತೆಗೆದು ಕೊಳ್ಳಬೇಕೆಂದು, ತಿಳಿಸಿದರೆ. ಸಂಬಂಧಪಟ್ಟ ಅಧಿಕಾರಿಗಳು ಇಂತಿಷ್ಟೇ ಅವಧಿಯೊಳಗೆ ಕ್ರಮ ಕೈಕೊಳ್ಳುವಂತಿರಬೇಕು, ಇಲ್ಲವೇ ಅದು ಹೀಗಾಗಿದೆ ಎಂಬುದನ್ನು ಸಂಬಂಧಪಟ್ಟ ಸಚಿವರಿಗೆ ವರದಿ ಮಾಡುವ ವ್ಯವಸ್ಥೆಯನ್ನು ಸಾಮಾನ್ಯ ಆಡಳಿತದಲ್ಲಿ ಜಾರಿಗೆ ತರಬೇಕು. ಅನಾವಶ್ಯಕವಾಗಿ ತಡಮಾಡಿದರೆ justice delayed is justice denied ಎನ್ನುವಂತೆ ಆಗುತ್ತದೆಂದು ತಮ್ಮ ಗಮನಕ್ಕೆ ತರುತ್ತೇನೆ.

ಇನ್ನು ಪೋಲೀಸ್ ಇಲಾಖೆಯಲ್ಲಿರುವ ಉನ್ನತ ಅಧಿಕಾರಿಗಳಲ್ಲಿ ಬಹಳ ಅತೃಪ್ತಿ ಇದೆ ಎಂಬುದನ್ನು ಈ ಸಂದರ್ಭದಲ್ಲಿ ತಮ್ಮ ಮುಖಾಂತರ ಮುಖ್ಯಮಂತ್ರಿಗಳಿಗೆ ಹೇಳಬಯಸುತ್ತೇನೆ. ಇಂದು ಅನೇಕ ಉನ್ನತ ಅಧಿಕಾರಿಗಳು [illegible] ಬೇಸರ ಹೊಂದಿ ಬಂದಿದ್ದಾರೆ. ಒಳ್ಳೆಯ ರೀತಿಯಿಂದ ಕೆಲಸ ಮಾಡುತ್ತಿರುವ ಈ ಅಧಿಕಾರಿಗಳ ಮನಸ್ಸಿನಲ್ಲಿ ಏನಿದೆ ಎಂದರೆ, ತಮಗೆ ಸರಿಯಾದ ಅಧಿಕಾರ ಸಿಕ್ಕಲಿಲ್ಲ, ನಮ್ಮನ್ನೆಲ್ಲಾ ಓವರ್–ಲುಕ್ ಮಾಡಿದ್ದಾರೆ ಎಂಬುದು. ಈ ಒಂದು ವ್ಯಥೆ ಅವರ ಮನಸ್ಸಿನಲ್ಲಿ ಬಂದಿದೆ. ಇದಕ್ಕೆ ಒಂದು ಉದಾಹರಣೆ ಹೇಳುವುದಾದರೆ, ಕಳೆದ ಒಂದು ವರ್ಷದ ಅವಧಿಯಲ್ಲಿ ಬೆಂಗಳೂರಿನಲ್ಲಿ ಅನೇಕ ಬ್ಯಾಂಕ್‌ಗಳಲ್ಲಿ ದರೋಡೆ ನಡೆದಿದೆ.

ಯಾವ ವರ್ಷವೂ ಇಷ್ಟು ದರೋಡೆ ನಡೆದದ್ದನ್ನು ನಾನು ನೋಡಲಿಲ್ಲ. ರಾಯಚೂರು, ಗುಲ್ಬರ್ಗ, ಬಿಜಾಪುರದಲ್ಲಿ ದರೋಡೆ ನಡೆದಿದ್ದರೆ ಅಲ್ಲಿ ಹೊಟ್ಟೆಗೆ ಇಲ್ಲದೆ ದರೋಡೆ ನಡೆದಿದೆ ಎಂದು ಹೇಳಬಹುದು. ಬೆಂಗಳೂರಿನಲ್ಲಿ ಕಲ್ಯಾಣನಗರದಲ್ಲಿ ಹಾಡು ಹಗಲಿನಲ್ಲಿ ದರೋಡೆ ನಡೆದಿದೆ. ಬ್ಯಾಂಕುಗಳಲ್ಲಿ ದರೋಡೆ ನಡೆದಿದೆ. ಈ ರೀತಿ ದರೋಡೆ ನಡೆಯಬೇಕಾದರೆ ಪೋಲೀಸು ಉನ್ನತ ಅಧಿಕಾರಿಗಳ ದಕ್ಷತೆಯನ್ನು ನಾವು ಪ್ರಶ್ನೆ ಮಾಡಬೇಕಾಗಿದೆ. ಇದು ಬರೀ ಅವಮಾನ ಅಷ್ಟೇ ಅಲ್ಲ, ಈ ಪೋಲೀಸ್ ಇಲಾಖೆಯ ಪೋರ್ಟ್‌ಫೋಲಿಯೋವನ್ನು ನಿರ್ವಹಿಸ ತಕ್ಕ ಮುಖ್ಯಮಂತ್ರಿಗಳ ಮೇಲೆ ಎಂತಹ ಪರಿಣಾಮವನ್ನುಂಟುಮಾಡುತ್ತದೆ ಎಂಬುದನ್ನು ಅಧಿಕಾರಿಗಳು ಅರಿತುಕೊಳ್ಳಬೇಕು. ಈ ರೀತಿ ದರೋಡೆಗಳು ನಡೆದರೆ ಜನಸಾಮಾನ್ಯರ ಮೇಲೆ ಏನು ಪರಿಣಾಮವಾಗುತ್ತದೆ ಎಂಬುದನ್ನು ಯೋಚನೆ ಮಾಡಬೇಕಾಗುತ್ತದೆ. ಪೋಲೀಸ್ ಅಧಿಕಾರಿಗಳು ರಾಜ್ಯದ ಸೇವಕರು, ನಾವು ಕಾನೂನು ಮತ್ತು ಕಟ್ಟಳೆಗಳನ್ನು ನಿರ್ವಹಿಸತಕ್ಕ ಅಧಿಕಾರಿಗಳು ಎನ್ನುವುದನ್ನು ಮರೆತು ತಮ್ಮ ಸ್ವಪ್ರತಿಷ್ಠೆಯನ್ನು ಪ್ರತಿಬಿಂಬಿಸುವ ಅಧಿಕಾರಿಗಳಾಗಿದ್ದಾರೆ. ಮೊನ್ನೆತಾನೆ ಒಬ್ಬರು ಪತ್ರಿಕೋದ್ಯಮಿಯನ್ನು ಒಬ್ಬ ಸರ್ಕಲ್ ಇನ್ಸ್‌ಪೆಕ್ಟರ್ ಅವರು ಹೀನಾಮಾನ ಮನಸ್ಸೋಇಚ್ಛೆ ಬೈಯುದಿರತಕ್ಕ ನಿದರ್ಶನಗಳಿವೆ. ನಾನು ಇಲ್ಲಿದ್ದೇನೆ, ನಿನ್ನ

ಚರ್ಮವನ್ನು ಸುಲಿಸುತ್ತೇನೆ ಎನ್ನುವ ಹಂತಕ್ಕೆ ಪೊಲೀಸ್ ಅಧಿಕಾರಿಗಳು ಹೋಗಿದ್ದಾರೆ. ಸಮಾಜ ವಾದವನ್ನು ಪ್ರತಿಬಿಂಬಿಸತಕ್ಕ ನಮ್ಮ ರಾಜ್ಯ ಪೊಲೀಸರಾಜ್ಯ ಆಗಬಾರದು. ಹಿಂದೆ ನಮ್ಮ ದೇಶದಲ್ಲಿ ಬ್ರಿಟಿಷರು ಇದ್ದಾಗಲೂ ಸಹ ಪೊಲೀಸನವರು ಇಷ್ಟೊಂದು ಹೀನಾಯವಾಗಿ ಮರ್ಯಾದೆಯಿಲ್ಲದೆ ಮಾತನಾಡಿರಲಿಲ್ಲ. ಉನ್ನತ ಮಟ್ಟದ ಪೊಲೀಸ್ ಅಧಿಕಾರಿಗಳು ಸರ್ಕಲ್ ಇನ್ಸ್‌ಪೆಕ್ಟರ್‌ಗಳಿಗೆ ಮೇಲ್ಪಟ್ಟು ಇರತಕ್ಕವರು ಸರಿಯಾದ ರೀತಿಯಲ್ಲಿ ವರ್ತನೆ ಮಾಡುತ್ತಿಲ್ಲ. ಅವರು ಸಾರ್ವಜನಿಕರು ನಮ್ಮ ಸಹೋದರರು ಎಂದು ತಿಳಿದುಕೊಂಡು ಅವರ ಕ್ಷೇಮಾಭಿವೃದ್ಧಿ ನೋಡತಕ್ಕ ಮನೋಭಾವ ಅವರಲ್ಲಿರಬೇಕು. ಅವರ ಕಷ್ಟಗಳು ಏನಿವೆ ಎಂಬುದನ್ನು ನೋಡುವ ಮನೋಭಾವ ಬರಬೇಕು ಎಂದು ನಾನು ಹೇಳುತ್ತೇನೆ.

ಐ ಎ ಎಸ್ ಅಧಿಕಾರಿಗಳು ನಮ್ಮ ಗೆಳೆಯರು. ಐ ಎ ಎಸ್ ಅಧಿಕಾರಿಗಳಲ್ಲಿ ಉತ್ತಮರಾದ ಅಧಿಕಾರಿಗಳು ಇದ್ದಾರೆ. ಅಂಥವರು 3–4 ಜನ ಇರಬಹುದು. ಜನಸಾಮಾನ್ಯರ ಬಗ್ಗೆ ಅಭಿಮಾನವನ್ನು ಇಟ್ಟುಕೊಂಡಿರತಕ್ಕವರು ಇದ್ದಾರೆ. ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ಒಂದು ವಿಷಯವನ್ನು ಪ್ರಸ್ತಾಪಮಾಡಿದ್ದಾರೆ. ಕಮರ್ಷಿಯಲ್ ಟ್ಯಾಕ್ಸ್ ಕಮಿಷನರ್ ಅವರು ಬಹಳ ಚತುರರು, ಅಂಥವರನ್ನು ತೆಗೆದು ಬೆಂಗಳೂರು ಡೈರಿಗೆ ಹಾಕಿದ್ದಾರೆ ಎಂದು ಹೇಳಿದರು. ಇದು ಪತ್ರಿಕೆಯಲ್ಲಿ ವರದಿಯಾಗಿದೆ, ಅವರು ಹಾಗೆ ಹೇಳಲಿಲ್ಲ. ಈಗ ಕಮರ್ಷಿಯಲ್ ಟ್ಯಾಕ್ಸ್ ಕಮೀಷನರ್ ಅವರು ಇದ್ದಾರೆ ಅವರು ಅತ್ಯಂತ ದಕ್ಷ ಅಧಿಕಾರಿಗಳು ಎಂದು ನಾನು ಹೇಳಬಯ ಸುತ್ತೇನೆ. ವೀರರಾಜ ಅರಸ್ ಮತ್ತು ಬಾಲಸುಬ್ರಹ್ಮಣ್ಯ ಅವರು ಉನ್ನತ ಅಧಿಕಾರಿಗಳು, ಉತ್ತಮವಾದ ಕೆಲಸವನ್ನು ಮಾಡುತ್ತಿದ್ದಾರೆ. ಅವರು ಜನಸಾಮಾನ್ಯರ ಬಗ್ಗೆ ಅಭಿಮಾನವುಳ್ಳ ವರಾಗಿದ್ದಾರೆ. ಮತ್ತು ಸತ್ಯಸಂಧರಾಗಿರತಕ್ಕ ಜನ 4–6 ಜನ ಇದ್ದಾರೆ. ಅಂಥವರ ಬಗ್ಗೆ ಸರ್ಕಾರ ಉತ್ತೇಜನ ಕೊಡಬೇಕು. ಉತ್ತಮರಾಗಿರತಕ್ಕ ಅಧಿಕಾರಿಗಳನ್ನು ಯಾವುದೋ ಸಂದಿಗ್ಧ ಪರಿಸ್ಥಿತಿಗೆ ಸಿಕ್ಕಿಸಿ ನಮ್ಮ ರಾಜ್ಯದ ಹೊರಗಡೆ ಕಳುಹಿಸುತ್ತಾರೆ. ಆದ್ದರಿಂದ ನಮ್ಮ ರಾಜ್ಯದಲ್ಲಿ ಉತ್ತಮರಾಗಿರತಕ್ಕ ಅಧಿಕಾರಿಗಳನ್ನು ಹೊರಗಡೆ ಕಳುಹಿಸಿ, ಹೊರಗಡೆಯ ಅಧಿಕಾರಿಗಳು ಮೇಲೆಕ್ಕೆ ಬರತಕ್ಕ ಪರಿಸ್ಥಿತಿ ಆಗಬಾರದು. ಶ್ರೀಮಾನ್ ಅಮರ್ಲಿಂಗಂ ಅವರು ಮಾತನಾಡುತ್ತಾ ನಮ್ಮ ರಾಜ್ಯದ ಉತ್ತಮ ಅಧಿಕಾರಿಗಳನ್ನು ಹೊರಗಡೆ ಕಳುಹಿಸಿ ಇನ್ನೊಬ್ಬರು ಬರುವ ವ್ಯವಸ್ಥೆ ನಡೆಯುತ್ತಿದೆ. ಆರೀತಿ ಆಗಬಾರದು, ಧಕ್ಷರಾದಂತಹ ಅಧಿಕಾಗಳಿಗೆ ಪ್ರೋತ್ಸಾಹ ಕೊಡಬೇಕು, ಒಳ್ಳೆಯ ನೀತಿವಂತರಾದ ಅಧಿಕಾರಿಗಳು ಸೇವೆ ಮಾಡುವುದಕ್ಕೆ ಅವಕಾಶವನ್ನು ಕಲ್ಪಿಸಬೇಕೆಂದು ಹೇಳಿದರು ನನ್ನ ತಾಲ್ಲೂಕಿಗೆ ಸಂಬಂಧಪಟ್ಟ ಹಾಗೆ ಒಂದು ವಿಷಯವನ್ನು ನಾನು ಮುಖ್ಯ ಮಂತ್ರಿಗಳಗಮನಕ್ಕೆ ತರುತ್ತೇನೆ.

Sri H. D. DEVEGOWDA.—My friend Sri Siddappa referred to the work of the Commercial Tax Commissioner. He is one of the honest and efficient officer who has got the highest integrity. I can dare say that. Sri Veeraj Urs has served as a Deputy Commissioner in Hassan District. I have seen the report in the Deccan Heralad. Sri Thimmappa has made a remark against the Excise Commissioner but not against Sri Veeraraj Urs.

ಶ್ರೀ ಎಚ್. ಎಸ್. ಸಿದ್ದಪ್ಪ :—ಎಕ್ಸ್ಯೈಜ್ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ಅಬ್ಕಾರಿ ಯಿಂದ ನಮ್ಮ ರಾಜ್ಯಕ್ಕೆ ಸಾಕಷ್ಟು ಆದಾಯ ಬರುತ್ತದೆ. ಈಗ ಸರ್ಕಾರದವರು ನಮ್ಮ ರಾಜ್ಯದಲ್ಲಿ ಟೆಂಪರೆನ್ಸ್ ಕಮಿಟಿಯನ್ನು ಮಾಡಿದ್ದಾರೆ. ಆ ಕಮಿಟಿಯ ಸದಸ್ಯರು ಯಾವುದಾದರೂ ಬಾರ್‌ನಲ್ಲೋ ಅಂಗಡಿಯಲ್ಲಿಯೋ ಕುಳಿತುಕೊಂಡಿರುತ್ತಾರೆ. ಅದರಲ್ಲಿ ಕುಡಿಯುವವರು ಎಷ್ಟೋ

ಜನ ಇದ್ದಾರೆ. ಅಂಥವರು ಜನಗಳಿಗೆ ಕುಡಿಯಬೇಡಿ ಎಂದು ನೀತಿಯನ್ನು ಹೇಳುತ್ತಾರೆ. ಈಗಿನ ಪ್ರೊಹಿಬಿಷನ್ ಪಾಲನೆಯಲ್ಲಿ ಟೆಂಪರೆನ್ಸ್ ಕಮಿಟಿಯ ಅವಶ್ಯಕತೆ ಇಲ್ಲ. ಅದನ್ನು ರದ್ದು ಮಾಡಬೇಕು ಎಂದು ನಾನು ಹೇಳುತ್ತೇನೆ.

ಸುದ್ದಿ ಮತ್ತು ಪ್ರಸಾರ ಇಲಾಖೆಗೆ ಸಂಬಂಧಪಟ್ಟ ಹಾಗೆ ಒಂದು ವಿಷಯವನ್ನು ನಾನು ಹೇಳುತ್ತೇನೆ. ಪ್ರಪಂಚದಲ್ಲಿ ಬಹುತೇಕ ಪತ್ರಿಕೆಗಳು ವರದಿ ಮಾಡಿದ್ದನ್ನು ತಿಳಿಸತಕ್ಕ ಒಂದು ಜಾಗದಲ್ಲಿ ಒಬ್ಬ ಮೂರನೆಯ ದರ್ಜೆಯ 1 ಡಿವಿಜನ್ ಕ್ಲಾರ್ಕನ್ನು ಕೂಡಿಸಿದ್ದಾರೆ. ಸುದ್ದಿಪ್ರಸಾರದ ಇಲಾಖೆ ಅತ್ಯುತ್ತಮವಾಗಿ ಕೆಲಸ ಮಾಡಬೇಕು. ಗ್ರಾಮಾಂತರ ಪ್ರದೇಶಗಳಲ್ಲಿ ಪ್ರತಿಯೊಬ್ಬರಿಗೂ ಗೊತ್ತಾಗುವ ಹಾಗೆ ಸರ್ಕಾರ ಏನೇನು ಮಾಡುತ್ತದೆ, ಸರ್ಕಾರದವರು ಏನು ಏನು ಯೋಜನೆಗಳನ್ನು ಮಾಡುತ್ತಾರೆ, ಅದರಲ್ಲಿ ಜನಗಳ ಪಾತ್ರ ಏನು ಎನ್ನುವ ಬಗ್ಗೆ ಜನಗಳನ್ನು ಹೊಡೆದೆಬ್ಬಿಸುವ ರೀತಿಯಲ್ಲಿ ಸುದ್ದಿಪ್ರಸಾರ ಇಲಾಖೆಯವರು ಕೆಲಸ ಮಾಡಬೇಕು. ಆ ಇಲಾಖೆಯಲ್ಲಿ ಹೆಂಡತಿ ಹೆಸರಿನಲ್ಲಿ ಒಂದು ಪತ್ರಿಕೆಯನ್ನು ಹೊರಡಿಸತಕ್ಕ ಒಬ್ಬ ಅಧಿಕಾರಿ ಇದ್ದಾರೆ. ಅಡ್ವರ್ಟೈಸ್‌ಮೆಂಟ್‌ಗಳನ್ನು ತಮ್ಮ ಹೆಂಡತಿ ಹೆಸರಿನಲ್ಲಿ ನಡೆಯುವ ಪೇಪರಿಗೆ ಕೊಡುತ್ತಾರೆ. ಸರ್ಕಾರದವರು ಸಣ್ಣ ಪತ್ರಿಕೆಗಳಿಗೆ ಉತ್ತೇಜನ ಕೊಡಬೇಕು. ಸಣ್ಣ ಸಣ್ಣ ಪತ್ರಿಕೆಗಳಿಗೆ ಸಾಕಷ್ಟು ಜಾಹಿರಾತು ಸುದ್ದಿ ಕೊಡಬೇಕು, ದೊಡ್ಡ ಪತ್ರಿಕೆಗಳಿಗೆ ಕೊಡಬಾರದು ಎಂದು ಅಲ್ಲ. ಅವುಗಳಿಗೆ ಉತ್ತೇಜನ ಕೊಡಬೇಕು. ಸಣ್ಣ ಸಣ್ಣ ಪತ್ರಿಕೆಗಳಿಗೆ ಕಂಪ್ಲೀಟ್ ಇನ್‌ಫರ್ಮೇಷನ್‌ಅನ್ನು ಬ್ರಾಡ್‌ಕ್ಯಾಸ್ಟಿಂಗ್‌ಗೆ ಕೊಟ್ಟು ಚೆನ್ನಾಗಿ ಪ್ರಸಾರ ಮಾಡಿ ಜನಗಳಿಗೂ ಸರ್ಕಾರಕ್ಕೂ ಒಂದು ನಿಕಟ ಬಾಂಧವ್ಯ ಬೆಳೆಯುವಂತೆ ಪ್ರಸಾರ ಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Sri SUBHAS ASTURE. (Bhalki):—Madam Speaker, at the outset I recall the words of late Sardar Patel who had once told that the civil servants are the steel framework of the administration. If we examine this statement minutely, I am afraid whether the present set up is worth its name. In the General Administration Department, the Police and the Revenue Departments occupy a most important place. In the Police Department, there are several cases wherein injustice is done, delay is caused and hardship is imposed upon the people. For instance, in the cases which are placed before the Courts, the prisoners for months together they are treated as undertrial prisoners and at the stage of filing the charge-sheet and evidence, a lot of delay is caused. Years are spent only at the evidence level and at filing the charge-sheet. Whether the accused is guilty or not, before the guilty is brought home, the person is kept in the jail for years together and months together. This is a great injustice. Therefore limitation should be imposed that within so much of time the charge-sheet should be filed and the evidence should be completed so that the person's fate which is hanging whether he is guilty or not should be decided as early as possible.

One more suggestion is in the Police Department generally if any person has got any complaint to make against an officer, and when he files a complaint or makes an allegation to redress his grievances, the superior officer sends that application or complaint to the very officer against whom the allegations are made. That is very bad. If such complaints are made, they should be investigated by an independent

Officer, but not by the person against whom the allegations are made. One more important thing I want to suggest and that is when allegations are made against any Police Officers, atleast 5 per cent of the cases may be investigated by the Inspector General of Police, 10 per cent by the Deputy Inspector General of Police and 15 to 20 per cent by the Superintendent of Police. They should examine the complaints made against the subordinate officers. But on the other hand the complaints/ made are not being enquired into by these officers themselves and they are being sent to the lower officers. Whenever such complaints are made to the higher officers, these complaints are again sent back to the District Officers, the District Officers in turn to the Superintendent of Police, the Superintendent of Police in turn to the Inspector of Police and the Inspector of Police in turn to the Sub-inspector. The purpose of making a complaint against the officers will not be served if the complaints are sent to person to person. If the complaint, on the other hand, is sent to the person against whom it made, the person who has sent that complaint will be harassed and put to a lot of trouble by the officer. The ultimate result would be that he becomes his enemy and as long as that officer is there, the man who made the complaint will not be happy and will be in trouble. Therefore these allegations and complaints should be entrusted to an independent officer who should conduct an enquiry and submit his report. The highest officers of the State should at least decide some percentage of the cases. The Inspector General of Police should decide 5 per cent of the cases, the Deputy Inspector General of Police should decide 10 per cent of the cases and the Superintendent of Police should decide 15 per cent of the cases. They should go to the spot, enquire into the allegations and give their report. If they do so, the subordinate officers will have some fear with the result there will be some honesty and integrity among the Police Officers.

Mr. Deputy Speaker in the chair

The bulk of the Constables are illiterates and they do not know even writing and reading. Sometimes they simply put their signatures. Therefore, a minimum qualification of Metriculation may be fixed for these Constables. This should be made compulsory. If we want honesty and integrity from the Officers, they must be given adequate facilities. Their children, and their aged parents should be looked after by the State Government. Their salary should be enhanced. You must keep them in a good position so that they must feel they are given adequate facilities and they need not indulge in such bad activities. Therefore I suggest that the pay of the Sub Inspector should be raised from Rs. 175 to 400 to 450/- per month. The same salary is being paid to the Sub-Inspectors of the Central Government.

I would like to suggest one more thing. Whoever may be in-charge of the Home Department, whether it may be Chief Minister, or an independent Minister to be in-charge of the Home Department, there should be one Deputy Secretary of the Cadre of Superintendent of Police, to inform the Minister concerned about the various activities going on the

Department so that the man at the helm of affairs should be in touch with the day to day affairs of the Department

As par as the Revenue Department is concerned, the same thing continues here also. There is no time limit for the disposal of the cases. There are instances wherein even more than 5 to 7 years had elapsed for the disposal of the cases. Cases are pending before the Deputy Commissioners, and Assistant Commissioners for a number of years. These officers here-after will have to decide the cases arising out of the Land Revenue Act and various other Acts. They are already over burdened with a number of cases. There are several instances where in the cases are adjourned for months together. Sometimes it so happens that the Bench Clerk comes and tells the Advocates waiting for the case that the Deputy Commissioner has gone urgently to inspect a village or to inspect the Taluk Board Office and so on and so forth, and the cases are adjourned for future dates. The Advocate sometimes have to wiat for more than 2 to 3 hours for the arrival of the Deputy Commissioner or the Assistant Commissioner. If the reply comes that they have gone out, think of the position of the Advocates and the clients. This sort of harassment should be stopped. Therefore. I suggest that Additional Deputy Commissioners and the Assistant Commissioners should be posted for this work and the regular Deputy Commissioners and the Assistant Commissioners should be left free to attend to administrative and development activities. They should not be given the judicial cases to decide upon. The officers of the Department are not ready to take or share the responsibility of anything that happens in the Department. There are various instances which have come to my notice that the Deputy Commissioner tries to shift his responsibility on the Assistant Commissioner. the Assistant Commissioner on the Tahasildar and the Tahasildar on the Clerk. Ultimately the poor clerk will be held responsible for all the omissins and commissions. If any mistake is done, the senior officer should be held responsible instead of the poor clerks. What a poor clerk can do? The Officer is there to look into everything. How a poor clerk is responsible for any omissions and commission?

There are a number of I. A. S. Officer in the State. As far as my experience goes I can say they are the must inexperienced people.

I. A. S people are posted for six months or three months, to look after the of R. I. but they never attend to that work. They simply sit in the office. An I A S. Officer must work for three years as Tashildar and for five years as Assistant Commissionere and then only he should be promoted for the cadre of Deputy Commission r, because the Deputy Commissioner is the key of the district administration. Therefore, after only gaining so much experience, an officer should be placed in charge of the Deputy Commissioner's duties ond not before it.

Now, Sir, I would like to talk a few words about the drought condition which is prevailing in my district. At the outset, I won't say that the work taken up is more then sufficient. Only 16% is employed as labourers. At least 50 to 60 per cent of the population are in need of the jobs. Therefore, we should ask for more relief works instead of saying that Government has not done anything I would like to compliment the officers, especially P.W.D. officers, who are doing very good work in connection with the relief operations in the drought affected areas. I wish to appreciate the work that the M.S.E.B. has done specially the 36 kilometers line drawn between Karanji and Majra...

MR. DEPUTY SPEAKER :—This does not come under the Demands under discussion.

SRI SUBASH ASTURE :—I wish to speak about one or two points more. There is rise of the prices of articles in the recent days and this fact connot be denied. So many speakers inside and outside the House have made capital out of this. For the increase of prices there are several reasons ..

MR DEPUTY SPEAKER :—The question is whether the matter which has been raised by the non-member comes under the Demands under discussion to-day. He cannot bring anything under the Sun here.

SRI SUBASH ASTURE :—It is a very important thing.

MR. DEPUTY SPEAKAR :—So many things are very important but they must come under the demand under discussion, Now he will please conclude his speech.

SRI SUBASH ASTURE :—In almost all countries like America and U. K., there was rise in the prices in the transition period, but always prices are controlled by the supply and demand theory. So much money is put in circulation by way of wages....

MR. DEPUTY SPEAKER :—How could the Hon. Member speak on food and civil Supplies ? I have to come in the way because he is speaking on things which are not within the scope of to-day's discussions. Does he mean that I can allow him to speak anything under the sun ?

SRI SUBASH ASTHURE :—Supporting this demand, I conclude my speech and I thank the Deputy Speaker for giving me an opportunity to speak.

ಶ್ರೀ ಹಂಜಿ ಶಿವಣ್ಣ (ತರೀಕೆರೆ) :—ಸನ್ಮಾನ್ಯ ಉಪಾಧ್ಯಕ್ಷರೇ : ಈ ದಿವಸ ನಮ್ಮ ಮುಂದೆ ಇರತಕ್ಕ ಬೇಡಿಕೆಗಳು ಬಹಳ ಮುಖ್ಯವಾದವುಗಳು. ಇವುಗಳನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತ ಕೆಲವು ವಿಷಯುಗಳನ್ನು ಸರ್ಕಾರದವರ ಗಮನಕ್ಕೆ ತರಬಯಸುತ್ತೇನೆ.

ಜನರಲ್ ಅಡ್ಮಿನಿಸ್ಟ್ರೇಷನ್ ಬೇಡಿಕೆ ಏನಿದೆ ಇದು ಬಹಳ ಪ್ರಾಮುಖ್ಯವಾದ ಬೇಡಿಕೆ. ಈ ದಿವಸ ದೇಶದಲ್ಲಿ ಎಲ್ಲಿ ನೋಡಲಿ ಆಡಳಿತ ಕುಸಿದು ಬೀಳುತ್ತಿದೆ. ಅಧಿಕಾರಿಗಳಲ್ಲಿ ಅದ್ಯಕ್ಷತೆ

ಅಭಾವವಿದ್ದರೆ ಇನ್ನೊಂದು ಕಡೆ ಲಂಚದ ಹಾವಳಿ ಮೇರೆ ಮೀರಿದೆ. ಜನರು ಬಹಳ ಕಷ್ಟಕ್ಕೆ ತುತ್ತಾಗಿದ್ದಾರೆ, ಕಣ್ಣೀರನ್ನು ಇಡುತ್ತಿದ್ದಾರೆ. ಇದನ್ನು ಸರ್ಕಾರದವರು ಹೇಗಾದರೂ ಮಾಡಿ ನಿರ್ಮೂಲ ಮಾಡಬೇಕೆಂದು ನಾನು ಕಡ್ಡಾಯವಾಗಿ ಸರ್ಕಾರದವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಅನೇಕ ಅಧಿಕಾರಿಗಳು ತಮ್ಮ ಅಧಿಕಾರವನ್ನು ಸಾಧ್ಯವಾದಷ್ಟೂ ದುರುಪಯೋಗ ಪಡಿಸಿಕೊಳ್ಳುತ್ತಿದ್ದಾರೆ. ಆದರೆ ಒಳ್ಳೆಯ ಅಧಿಕಾರಿಗಳಿರುವುದು ಬಹಳ ಅಪರೂಪ. ದೊಡ್ಡ ದೊಡ್ಡ ಹುದ್ದೆಗಳನ್ನು ಹಿಡಿದಿರತಕ್ಕ ಅಧಿಕಾರಿಗಳು ತಮ್ಮ ಜವಾಬ್ದಾರಿಯನ್ನು ತಪ್ಪಿಸಿಕೊಳ್ಳಲು ತಮ್ಮ ಹೊಣೆಯನ್ನು ಬೇರೊಬ್ಬರ ಮೇಲೆ ಹಾಕಿ ತಾವು ತಮ್ಮ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸುತ್ತಿಲ್ಲ. ಹೀಗಾಗಿ ಜನರು ಕಷ್ಟನಷ್ಟಗಳಿಗೆ ಗುರಿಯಾಗುತ್ತಿದ್ದಾರೆ. ಈ ದಿವಸ ತಾಲ್ಲೂಕ್ ಆಫೀಸುಗಳ ಬಗ್ಗೆ ಮತ್ತು ಈ ಎನ್. ಇ. ಎಸ್. ಆಫೀಸುಗಳ ಮೇಲೆ ಜಿಲ್ಲಾಧಿಕಾರಿಗಳ ನಿಗಾ ಲೇಶಾಂಶವೂ ಇಲ್ಲ. ಆದರಿಂದ ಅಲ್ಲಿನ ಕೆಲಸಕಾರ್ಯಗಳೆಲ್ಲಾ ಬಹಳ ಅವ್ಯವಸ್ಥೆಯಲ್ಲಿ ನಡೆಯುತ್ತಿವೆ. ಅಂಥಾ ಅಧಿಕಾರಿಗಳಿಗೆ ಸರ್ಕಾರದವರು ಮಾನ್ಯತೆ ಕೊಡಬಾರದು ಮತ್ತು ಅವರಿಗೆ ಸೂಕ್ತ ಎಚ್ಚರಿಕೆಯ ಕ್ರಮಗಳನ್ನು ಕೈಗೊಳ್ಳುವಂತೆ ಸರ್ಕಾರದವರು ಸೂಚಿಸಬೇಕೆಂದು ಒತ್ತಾಯ ಮಾಡುತ್ತೇನೆ.

ಇನ್ನು ಪೋಲೀಸ್ ಇಲಾಖೆಯ ಬಗ್ಗೆ ಎರಡು ಮಾತುಗಳನ್ನಾಡಬಯಸುತ್ತೇನೆ. ನಮಲ್ಲಿ ಪೋಲೀಸ್ ಸ್ಟೇಷನ್ನಿನಲ್ಲೇ ಎರಡು ಕೊಲೆಗಳಾದವು. ಅವುಗಳನ್ನು ಅಲ್ಲಿನ ಪೋಲೀಸ್ ಇನ್‌ಸ್ಪೆಕ್ಟರು ಮತ್ತು ಪೋಲೀಸ್ ಸಬ್ ಇನ್‌ಸ್ಪೆಕ್ಟರುಗಳು ಸೇರಿಕೊಂಡು ಮುಚ್ಚಿ ಹಾಕಿದ್ದರು. ಆದರೆ ಆ ಕೇಸುಗಳು ಸಿ.ಐ.ಡಿ. ಇಲಾಖೆಯವರ ದಕ್ಷತೆಯಿಂದ ಬೈಲಿಗೆ ಬಂದವು. ಕಡೂರು ಪೋಲೀಸ್ ಸ್ಟೇಷನ್ನಿನಲ್ಲಿದ್ದ ಒಬ್ಬ ಸಬ್ ಇನ್‌ಸ್ಪೆಕ್ಟರು ತನ್ನನ್ನು ಯಾರೂ ಕೇಳತಕ್ಕವರಿಲ್ಲ ಎಂದು ಒಬ್ಬ ಹಳ್ಳಿಯವನನ್ನು ಸ್ಟೇಷನ್ನಿನಲ್ಲೇ ಹೊಡೆದು ಸಾಯಿಸಿದ ನಂತರ ಆ ಹೆಣವನ್ನು ಅಲ್ಲಿಗೆ 20 ಮೈಲಿ ದೂರದಲ್ಲಿರುವ ಕಾಡಿನಲ್ಲಿ ತೆಗೆದುಕೊಂಡು ಹೋಗಿ ಹೂತುಹಾಕಿಸಿದ್ದ. ಅದನ್ನು ಹೇಗೋ ಮಾಡಿ ಸಿ.ಐ.ಡಿ. ಪೋಲೀಸರು ಪತ್ತೆ ಮಾಡಿದರು. ಆದರೆ ಅವನನ್ನು ಉಳಿಸಿಕೊಳ್ಳಲು ಅಲ್ಲಿನ ಪೋಲೀಸ್ ಅಧಿಕಾರಿಗಳು ಅವನ ಬಗ್ಗೆ ಇಂಡಿಯನ್ ಪಿನಲ್‌ಕೋಡಿನ ಸೆಕ್ಷನ್ 302ರ ಪ್ರಕಾರ ಕೇಸನ್ನು ರಿಜಿಸ್ಟರ್ ಮಾಡಿದರೆ ಅವನನ್ನು ಜಾಮೀನ್ ಮೇಲೆ ಬಿಡಿಸುವುದಕ್ಕೆ ಆಗುವುದಿಲ್ಲ ಎಂದು ಬೇರೆ ಸೆಕ್ಷನ್‌ಗಳನ್ನು ಹಾಕಿ ಅವನನ್ನು ಹೊರಗಡೆಗೆ ಬಿಡಿಸಿದ್ದಾರೆ. ಹಾಗೇ ನಮ್ಮ ತಾಲ್ಲೂಕಿನಲ್ಲಿ ಲಿಂಗದಹಳ್ಳಿಯ ಒಬ್ಬ ವ್ಯಕ್ತಿಯನ್ನು ಸ್ಟೇಷನ್ನಿಗೆ ಎಳೆತರಿಸಿ ಅವನ ಮರ್ಮಸ್ಥಳಗಳಿಗೆಲ್ಲಾ ಹೊಡೆದು ಬೆಂಕಿ ಹತ್ತಿಸಿ ಅವನು ಸತ್ತ ನಂತರ ಅವನನ್ನು ಹೂತುಹಾಕಿದರು. ಸಿ. ಐ. ಡಿ. ಅವರಿಂದ ಇದೂ ಕೂಡ ಬೈಲಿಗೆ ಬಂತು. ಆದರೆ ಹೀಗೆ ಯಾರು ತಪ್ಪು ಮಾಡಿದ್ದಾರೋ ಅವರನ್ನು ಉಳಿಸುವುದಕ್ಕೆ ಪ್ರಯತ್ನ ಮಾಡತಕ್ಕ ಅವರ ಮೇಲಧಿಕಾರಿಗಳೇನಿದ್ದಾರೆ ಅವರನ್ನೂ ಕೂಡ ತಪ್ಪಿತಸ್ಥರೆಂದೇ ನಿರ್ಧಾರ ಮಾಡಿ ಅವರ ಮೇಲೂ ಕ್ರಮ ಕೈಗೊಳ್ಳಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಅಷ್ಟೇ ಅಲ್ಲ, ಇವರ ಬಗ್ಗೆ ಇನ್ನೂ ಉಗ್ರ ಕ್ರಮ ಕೈಗೊಳ್ಳಬೇಕೆಂದು ಹೇಳುತ್ತೇನೆ.

ಇನ್ನು ತಾಲ್ಲೂಕುಗಳಲ್ಲಿ ಈ ಹೊತ್ತು ಲಂಚದ ಹಾವಳಿಯನ್ನು ಹೇಳವುದಕ್ಕಾಗದು. ದುಡ್ಡು ಕೊಡದಿದ್ದರೆ ಯಾವ ಕೆಲಸವೂ ಆಗುವುದಿಲ್ಲ. ಜನರು ಸಾಯುತ್ತಿದ್ದಾರೆ. ಅವರನ್ನು ಕೇಳತಕ್ಕವರೇ ಇಲ್ಲ. ಅವರು ಬಂದು ಸುಮ್ಮನೆ ನಮ್ಮಲ್ಲಿ ಕಾಡುತ್ತಿದ್ದಾರೆ. ಇನ್ನು ಸರ್ಕಾರದವರು ಈ ವಿಚಾರದಲ್ಲಿ ತಕ್ಕ ಕ್ರಮಗಳನ್ನು ಕೈಗೊಳ್ಳದಿದ್ದರೆ ಅಧಿಕಾರಿಗಳನ್ನು ಜನರು ಇನ್ನು ಸುಮ್ಮನೆ ಬಿಡುವುದಿಲ್ಲ.

ಏಕೆಂದರೆ ಇದು ಎಲ್ಲೆಲ್ಲೂ ಕಾಳಸಂತೆಯಿದೆ. ತಾಲ್ಲೂಕು ಆಫೀಸು, ಡಿಸ್ಟ್ರಿಕ್ಟ್ ಆಫೀಸು ಮಂತ್ರಿತರ ಎಲ್ಲಾ ಆಫೀಸುಗಳಲ್ಲೂ ಪ್ರಾಮಾಣಿಕತೆ ಇಲ್ಲದಿದ್ದರೆ ಬಹಳ ಕಷ್ಟವಾಗುತ್ತದೆ.

ಜನರಲ್ ಅಡ್ಮಿನಿಸ್ಟ್ರೇಷನ್ ವಿಚಾರದಲ್ಲಿ ಇನ್ನೂ ಎರಡು ಮಾತು ಹೇಳುತ್ತೇನೆ. ಕೆಲವು ಕಡೆ ಉದ್ದೇಶಪೂರ್ವಕವಾಗಿ ಒಂದೇ ಕೋಮಿಗೆ ಸೇರಿದವರನ್ನು ಮತ್ತು ತಮಗೆ ಬೇಕಾದವರನ್ನು ನೇಮಕಮಾಡುವುದು ವಾಡಿಕೆಯಾಗಿದೆ. ಇದನ್ನು ಆದಷ್ಟು ತಪ್ಪಿಸಬೇಕು. ಎಲ್ಲರಿಗೂ ಸಮಾನವಾದ ಅವಕಾಶ ಕಲ್ಪಿಸಬೇಕು.

ರಾಜಕೀಯ ಸಂತ್ರಸ್ಥರಿಗೆ ಈಗ ಮಾಸಾಶನ ಕೊಡುವ ಪದ್ಧತಿಯಿದೆ. ಇದರ ಬಗ್ಗೆ ಒಂದು ಅಂಶ ಹೇಳಬೇಕಾಗಿದೆ. ಕೆಲವು ರಾಜಕೀಯ ಸಂತ್ರಸ್ಥರಿಗೆ ಮಾಸಾಶನ ಕೊಡುವಾಗ ರಿಕಾರ್ಡ್ ವಗೈರೆ ತೀರ್ಮಾನಮಾಡಲು ಎರಡು ಮೂರು ವರ್ಷವಾಗುತ್ತಿದೆ. ಒಬ್ಬ ನನ್ನ ತಾಲ್ಲೂಕಿನ ಮನುಷ್ಯನಿಗೆ ಮಾಸಾಶನ ಕೊಡಲು ಹೀಗೆ ನಿಧಾನವಾಗಿದೆ. ಹಾಸನ ಜಿಲ್ಲೆಯಲ್ಲಿ 5 ಜನರಿಗೆ ಒಟ್ಟಾಗಿ ಶಿಕ್ಷೆಯಾಗಿದೆ. 1970ರಲ್ಲಿ ಮಾಸಾಶನಕ್ಕೆ ಅರ್ಜಿ ಕೊಟ್ಟರೂ ಇನ್ನೂ ಇತ್ಯರ್ಥವಾಗಿಲ್ಲ. ಇಲಾಖೆಯವರು ಕ್ವೆರಿ ಹಾಕಿ ತಾಲ್ಲೂಕು ಆಫೀಸಿನಿಂದ ಮೇಲಕ್ಕೆ ಕಳಿಸುವುದು ಮೇಲಿನವರು ಮತ್ತೆ ಏನಾದರೂ ಕೇಳುವುದು ಹೀಗಾಗಿ ನಿಧಾನವಾಗುತ್ತಾ ಇದೆ. ಒಂದೊಂದು ಆಫೀಸಿನಲ್ಲಿ ಕೆಲವು ಕಾಲ ಬಿದ್ದಿರುವುದು. ಹೀಗೆ ನಿಧಾನವಾಗಲು ಅವಕಾಶ ಕೊಡದೆ ಆದಷ್ಟು ಜಾಗ್ರತೆ ಇತ್ಯರ್ಥಮಾಡಬೇಕು. ಈಗ ನಾನು ಹೇಳಿದವರ ಅರ್ಜಿ ಸೆಕ್ರೆಟೇರಿಯಟ್ಟಿಗೆ 1970 ರಲ್ಲಿ ಬಂದಿದೆ. ಮಂತ್ರಿಗಳಿಗೆ ಇದರ ವಿಚಾರ ತಿಳಿಸಿ ಬೇಗ ವೇತನ ಕೊಡಬೇಕೆಂದು ಹೇಳಿದೆ. ಅವರು ತಮ್ಮ ಪಿ ಎ ಗೆ ಹೇಳಿ ರಿಕಾರ್ಡನ್ನು ಕಷ್ಟಪಟ್ಟು ಹುಡುಕಿಸಿದರು. ಅದನ್ನು ಹೊರಗೆ ತರುವುದೇ ಕಷ್ಟವಾಯ್ತು. ಇನ್ನು ಜಾಗ್ರತೆ ತೀರ್ಮಾನವಾಗಬಹುದು. ಈ ಅರ್ಜಿಗಳ ಬಗ್ಗೆ ನಿಧಾನಮಾಡದೆ ಆದಷ್ಟು ಜಾಗ್ರತೆ ಫೈಸಲು ಮಾಡಲು ತಕ್ಕ ಕ್ರಮ ತೆಗೆದುಕೊಳ್ಳಬೇಕು.

ಎಕ್ಸೈಜು ಇಲಾಖೆಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಸೇಂದಿ ಮರ ಹೆಚ್ಚಾಗಿ ಸಿಕ್ಕುತ್ತಿಲ್ಲ. ಆದುದರಿಂದ ಹೆಂಡ ಮಾಡಲು ಸಕ್ಕರೆ ಮತ್ತು ಕೆಮಿಕಲ್ಸ್ ಉಪಯೋಗಮಾಡಿ ತಯಾರಿಸಿ ಕೊಡುವರು. ಇದು ಆರೋಗ್ಯಕ್ಕೆ ಒಳ್ಳೆಯದಲ್ಲ, ಇದನ್ನು ತಯಾರಿಸಲು ಅವಕಾಶ ಕೊಡಬಾರದು. ಇಷ್ಟು ಹೇಳಿ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಭಾಷಣ ಮುಕ್ತಾಯ ಮಾಡುತ್ತೇನೆ. ಜೈ ಹಿಂದ್.

ಶ್ರೀ ಸಿ. ಬೈರೇಗೌಡ (ವೇಮಗಲ್):—ಅಧ್ಯಕ್ಷರೇ, ಇವತ್ತಿನ ದಿವಸ ಈ ಸಭೆಯ ಒಪ್ಪಿಗೆಗಾಗಿ ಪ್ರಾಮುಖ್ಯವಾಗಿ ಇಟ್ಟಿರುವ ಸಾಮಾನ್ಯ ಆಡಳಿತ, ಎಕ್ಸೈಜು, ಇನ್‌ಫರ್ಮೇಷನ್ ಅಂಡ್ ಬ್ರಾಡ್ ಕ್ಯಾಸ್ಟಿಂಗ್, ಪೊಲೀಸು ಮುಂತಾದ ಬೇಡಿಕೆಗಳೇನಿವೆ ಅವನ್ನು ವಿರೋಧಿಸುತ್ತಾ ಕೆಲವು ಮಾತುಗಳನ್ನು ಹೇಳುತ್ತೇನೆ. ಮೊದಲನೆಯದಾಗಿ ಸಾಮಾನ್ಯ ಆಡಳಿತ ಪದ್ಧತಿ ನಮ್ಮ ದೇಶದಲ್ಲಿ ಹಿಂದೆ ಬ್ರಿಟಿಷರ ಕಾಲದಲ್ಲಿ ಹೇಗಿತ್ತೋ ಹಾಗೆಯೇ ಇದೆ. ಬ್ರಿಟಿಷರನ್ನು ಹೋರಾಟಮಾಡಿ ಈ ದೇಶದಿಂದ ಓಡಿಸಿದ ಮೇಲೂ ಕೂಡ ಅವರ ಕಾಲದಲ್ಲಿ ಯಾವ ಆಡಳಿತ ಪದ್ಧತಿಯಿತ್ತೋ ಅದೇ ಇಂದೂ ಸಹ ಮುಂದುವರೆಯುತ್ತಿದೆ. 1947 ರಿಂದ ಈಚೆಗೆ ನಮ್ಮ ದೇಶದ ಪರಿಸ್ಥಿತಿ ಬದಲಾವಣೆಯಾಗಿದೆ. ಆದರೆ ಕೇವಲ ಜನರನ್ನು ಶೋಷಣೆ ಮಾಡುವ ಪದ್ಧತಿಯೇ ಇಂದೂ ಸಹ ಇದೆ. ವಾತಾವರಣ ಇಂದು ಬದಲಾಗಿರುವುದನ್ನು ಗಮನಿಸಿ ಅದಕ್ಕೆ ಹೊಂದಿಕೊಳ್ಳುವಂತೆ ಆಡಳಿತ ನಡೆಸಬೇಕಾದ್ದು ಅಧಿಕಾರಿಗಳ ಕರ್ತವ್ಯ. ಆದರೆ ಇಂದು ಪರಿಸ್ಥಿತಿ ಬದಲಾವಣೆಯಾಗಿಲ್ಲ. ಅಧಿಕಾರಿಗಳ ಮನೋಭಾವನೆ ಬದಲಾಗಿಲ್ಲ. ಮುಖ್ಯವಾಗಿ ತಳಹದಿ ರೆವಿನ್ಯೂ ಇಲಾಖೆ ಇಂದು ನಮ್ಮ ದೇಶದಲ್ಲಿ ಸಮಾಜವಾದ ಮುಂದುವರೆಯಬೇಕೆಂದು ಹೇಳುವಾಗ ಅದಕ್ಕೆ ತಕ್ಕಂತೆ ಆಡಳಿತ ವ್ಯವಸ್ಥೆಯಲ್ಲಿ ಬದಲಾವಣೆಯಾಗಬೇಕಾದ್ದು ಅವಶ್ಯಕ. ಮೇಲಿನಿಂದ ಕೆಳಗಿನವರೆಗೆ ಇಂದು ಎಷ್ಟು ಜನರಿಗೆ ಸಮಾಜವಾದವೆಂದರೇನು ಎಂಬುದು ಅರ್ಥವಾಗಿದೆ ? ಯಾರಿಗೂ ಅದು ಸರಿಯಾಗಿ ಗೊತ್ತಿಲ್ಲ. ಚನ್ನಬಸಪ್ಪನವರು ಸೆಕ್ರೆಟರಿಗಳನ್ನಾಗಲಿ ಅಥವ ಸೆಕ್ರೆಟೇರಿಯಟಿನಲ್ಲಿರುವ ಇತರ ಅಧಿಕಾರಿಗಳಿಗಾಗಲಿ ಪ್ರಶ್ನೆ ಹಾಕಿದರೆ ಯಾರು ಇದಕ್ಕೆ ಸರಿಯಾಗಿ ಉತ್ತರ ಕೊಡಬಲ್ಲರು ? ಅಧಿಕಾರಿಗಳಿಗೆ ಇದಕ್ಕೆ ಸರಿಯಾದ ಉತ್ತರ ಕೊಡುವ ಶಕ್ತಿಯಿಲ್ಲ. ಇಂದು

ಇಂಡಿಯನ್ ಅಡ್ಮಿನಿಸ್ಟ್ರೇಟಿವ್ ಸರ್ವಿಸ್ ಇದೆ, ಐ. ಸಿ. ಎಸ್. ಹೋಯಿತು. ಈ ಎರಡೂ ಕೂಡ ಸರಿಯಾದ ಪದ್ಧತಿಯಲ್ಲ. ಐ. ಎ. ಎಸ್. ಎಂದರೆ ಇಂಡಿಯನ್ ಆರೋಗೆಂಟ್ ಸರ್ವಿಸ್ ಎಂದು ಹೇಳಬಹುದು. ಕೆಲವರು ಒಳ್ಳೆಯ ಅಧಿಕಾರಿಗಳಿದ್ದಾರೆ, ಅವರಿಗೆ ಇಡೀ ದೇಶ ಕೃತಜ್ಞತೆಗಳನ್ನು ಅರ್ಪಿಸಬೇಕಾಗಿದೆ. ಅದೇ ರೀತಿಯಲ್ಲಿ ಆರೋಗೆಂಟ್ ಆಗಿರುವ ಅಧಿಕಾರಿಗಳನ್ನು ಖಂಡಿಸಬೇಕಾಗಿದೆ. ಈ ರೀತಿ ಮಾಡಿ ಆಡಳಿತದಲ್ಲಿರುವ ಲೋಪದೋಷಗಳನ್ನು ತಿದ್ದಬೇಕಾದ್ದು ಆಡಳಿತ ಪಕ್ಷದ ಮೊದಲನೆಯ ಕರ್ತವ್ಯ. ಇದನ್ನು ಇಲ್ಲಿಯವರೆಗೆ ಮಾಡಿಲ್ಲ. ಇದರಿಂದ ಇಂದು ಅನೇಕ ಸಂದರ್ಭಗಳಲ್ಲಿ ಜನರಿಗೆ ತೊಂದರೆಯಾಗುತ್ತಿದೆ. ಉದಾಹರಣೆಗೆ ಮೂರು ದಿವಸಗಳ ಹಿಂದೆ ಕೋಲಾರದಲ್ಲಿ 250 ರೂಪಾಯಿ ಸಾಲ ತೆಗೆದುಕೊಂಡಿದ್ದ ಒಬ್ಬ ಮನುಷ್ಯ ಅದನ್ನು ಎಲ್ಲಿ ಕೊಡಬೇಕೆಂದು ತಾಸೀಲ್ದಾರರನ್ನು ಕೇಳಿದರೆ ಅವರು ತಮ್ಮ ಹತ್ತಿರ ಲೆಕ್ಕವಿಲ್ಲವೆಂದು ಹೇಳಿದರು, ಅದನ್ನು ನನ್ನ ಹತ್ತಿರ ಅತ ತಂದ. ಸಾಮಾನ್ಯ ಜನರಿಗೆ ನ್ಯಾಯ ದೊರಕಿಸುವ ಪದ್ಧತಿಯೇ ಇದು ಎಂದು ಪ್ರಶ್ನೆಮಾಡಬೇಕಾಗಿದೆ. ಸುಪ್ರೀಂ ಕೋರ್ಟಿನಲ್ಲಿಂದು ಉನ್ನತ ನ್ಯಾಯಾಲಯದಲ್ಲಿ ಈ ದಿವಸ ನಡೆಯುವುದನ್ನು ಜಡ್ಜಿಗಳ ನೇಮಕವಾಗುವುದನ್ನು ನೋಡಿದರೆ ಇಂದಿನ ವಾತಾವರಣ ಚೆನ್ನಾಗಿ ಅರ್ಥವಾಗುವುದು. ಜನರಿಗೆ ನ್ಯಾಯ ದೊರೆಯುವ ಕೋರ್ಟುಗಳಲ್ಲಿ ಕೂಡ ಇದೇ ರೀತಿಯಾದರೆ ಏನು ಹೇಳಬೇಕು ? ಇದರಲ್ಲಿ ಮೂಲಭೂತವಾದ ಬದಲಾವಣೆಯಾಗಬೇಕು. ಅಡ್ಮಿನಿಸ್ಟ್ರೇಟಿವ್ ಸರ್ವಿಸ್‌ಗೆ ನೇಮಕ ಮಾಡುವಾಗ ಇಂದು ಬುದ್ಧಿವಂತರು ಬೇಕಾಗಿಲ್ಲ. ಅವರು ಕಳಿಸುವ ಸರ್ಕ್ಯುಲರುಗಳು, ಗವರ್ನಮೆಂಟ್ ಆರ್ಡರುಗಳು ನೋಡಿದರೆ ಗೊತ್ತಾಗುವುದು. ಅವುಗಳಿಗೆ ಇಪ್ಪತ್ತುಸಾರಿ ಕ್ಲಾರಿಫಿಕೇಷನ್ ಇಷ್ಯೂ ಆಗುವುದು. ಇಂಥ ಸರ್ಕ್ಯೂಲರುಗಳು ಸರಕಾರಿ ಆಜ್ಞೆಗಳು ಇಷ್ಯೂಮಾಡಲು ಬುದ್ಧಿವಂತರು ಬೇಕಾಗಿಲ್ಲ. ಅವರು ವಿಜ್ಞಾನ ಪ್ರಪಂಚಕ್ಕೆ ಬೇಕು. ಇಲ್ಲಿ ಬರೆದು ಕಳಿಸುವ ವ್ಯವಸ್ಥೆ ಇರುವುದರಿಂದ ಬುದ್ಧಿವಂತರ ಅವಶ್ಯಕತೆ ಇಲ್ಲದಿರುವುದರಿಂದ ರೆಕ್ರೂಟ್‌ಮೆಂಟ್ ಪದ್ಧತಿಯಲ್ಲಿ ಆಮೂಲಾಗ್ರವಾಗಿ ಬದಲಾವಣೆ ಮಾಡಬೇಕು.

ಇನ್ನೊಂದು ವಿಷಯ ಪ್ರಸ್ತಾಪಿಸಬೇಕಾಗಿದೆ. 1972 ರಿಂದೀಚೆಗೆ ನಮ್ಮ ದೇಶದಲ್ಲಿ ಜಾತೀಯತೆ ತಾಂಡವವಾಡುತ್ತಿದೆ. ಇಂದು ಜಾತಿಗಳ ಬಗ್ಗೆ ನೂರೆಂಟು ಸಮ್ಮೇಳನಗಳು ಬೆಂಗಳೂರಿನಲ್ಲಿ ನಡೆಯುತ್ತಿವೆ. ಇದರಲ್ಲಿ ಮಂತ್ರಿಗಳು ಸಹ ಭಾಗವಹಿಸುತ್ತಿದ್ದಾರೆ. ಜಾತಿ ಪದ್ಧತಿ ಮತ್ತು ಗೊಂದಲ ನಮ್ಮ ದೇಶದಲ್ಲಿ ಜಾಸ್ತಿಯಾದರೆ ಅನಾಹುತವಾಗುತ್ತದೆ. ಇದಕ್ಕೆ ಅವಕಾಶ ಕೊಡಬಾರದು. ಇಂದು ಸಮಾಜದಲ್ಲಿ ಎರಡು ವರ್ಗಗಳಿವೆ.

ಒಂದು ಶೋಷಣೆಗೆ ಒಳಪಟ್ಟಿರತಕ್ಕ ವರ್ಗ, ಮತ್ತೊಂದು ಶೋಷಣೆ ಮಾಡುತ್ತಿರುವ ವರ್ಗ. ವರ್ಗಗಳ ಆಧಾರದ ಮೇಲೆ ಆಡಳಿತ ನಡೆಸಿದರೆ, ಸಾಮಾಜಿಕ ನ್ಯಾಯವನ್ನು ದೊರಕಿಸುವ ಏರ್ಪಾಡು ಮಾಡಬೇಕು. ಜಾತಿಯ ಆಧಾರದ ಮೇಲೆ ಮಾಡಿದರೆ ದೊಡ್ಡ ಅನಾಹುತವಾಗುತ್ತದೆ ಎಂದು ನಾನು ಹೇಳುತ್ತೇನೆ. ಇವತ್ತಿನ ದಿವಸ ಜನತೆ ಚೇತರಿಸಿಕೊಳ್ಳತಕ್ಕ ಕಾಲ ಬಂದಿರುವಾಗ ಜಾತಿಯ ಆಧಾರದ ಮೇಲೆ ಆಡಳಿತ ಮಾಡುವುದಾದರೆ, ದೊಡ್ಡ ಅನಾಹುತವನ್ನು ತಂದಂತಾಗುತ್ತದೆ. ಆದ್ದರಿಂದ ಜಾತೀಯತೆಯನ್ನು ಆದಷ್ಟು ಕಡಿಮೆ ಮಾಡಬೇಕು. ಜಾತೀಯ ಆಧಾರದ ಮೇಲೆ ಯಾವ ತೀರ್ಮಾನವನ್ನೂ ಕೈಗೊಳ್ಳಬಾರದು ಎಂದು ನಾನು ಸರ್ಕಾರಕ್ಕೆ ಎಚ್ಚರಿಕೆ ಕೊಡಬಯಸುತ್ತೇನೆ. ಇವತ್ತಿನ ದಿವಸ ಎಲ್ಲಾ ಶಾಸಕರೂ, ಮಂತ್ರಿಗಳು ಗಮನಿಸತಕ್ಕದ್ದು ಏನೆಂದರೆ ಅಧಿಕಾರಿಗಳ ಟ್ರಾನ್ಸ್‌ಫರ್ ಬಗ್ಗೆ, ಒಬ್ಬ ಅಧಿಕಾರಿ ಒಂದು ಕಡೆ ಕೆಲಸ ಮಾಡುತ್ತಿದ್ದಾನೆ ಎಂದರೆ, ಅವನ ಮೇಲೆ ಬೇರೆಯವರು ಕಂಪ್ಲೇಂಟ್ ಕೊಡುವುದಾದರೆ ಅವನನ್ನು ಅದಕ್ಷ ಎಂದು ಹೇಳುವುದಾದರೆ, ಅವನು ಎಲ್ಲಿಯೂ ಕೆಲಸ ಮಾಡುವುದಕ್ಕೆ ಅಧಕ್ಷನಿರುತ್ತಾನೆ. ಅಂಥವನನ್ನು ತೆಗೆದುಹಾಕಿ ಮನೆಗೆ ಕಳುಹಿಸಿ. ಅದನ್ನು ಬಿಟ್ಟು ಆಡಳಿತ ಪಕ್ಷದವರು ಯಾರೋ ಹೇಳುತ್ತಾರೆ ಎಂದು ಕೆಲವರನ್ನು ಅಲ್ಲಿಯೇ ಇಡುವುದು, ಮತ್ತೆ ಕೆಲವರನ್ನು ಬೇರೆ ಕಡೆಗೆ

ವರ್ಗಾಯಿಸುವುದು ಸರಿಯಲ್ಲ. ಕೆಲವು ಪೋಲೀಸ್ ಕಾನ್ಸ್ಟೇಬಲ್‌ಗಳನ್ನು ಅಲ್ಲಿಯೇ ಇಡಿ ಎಂದು ಆಡಳಿತ ಪಕ್ಷದ ಕೆಲವು ಸದಸ್ಯರು ಮಂತ್ರಿಗಳಿಗೆ ಕಾಗದ ಬರೆದ ಪ್ರತಿ ನನ್ನ ಹತ್ತಿರ ಇದೆ. ಇಂಥ ಪರಿಸ್ಥಿತಿ ಬರಬೇಕಾದರೆ, ಕೆಲವು ಸ್ಥಳಗಳನ್ನು ಇವರಿಗೆ ಬೇಕಾದವರಿಗೆ ಜಹಗೀರ್ ಆಗಿ ಇವರಿಗೆ ಕೊಟ್ಟುಬಿಡಲಿ. ಕೋಲಾರ ತಾಲ್ಲೂಕನ್ನು ಇಂತಿಂಥ ಸಬ್‌ಇನ್ಸ್‌ಪೆಕ್ಟರ್ ಇಂತಿಂಥ ಕಾನ್ಸ್ಟೇಬಲ್‌ಗಳಿಗೆ ಜಾಗೀರ್ ಎಂದು ಕೊಟ್ಟುಬಿಡಲಿ, ಕೆಲವರು ಹೇಳಿದರೆ ಮಾತ್ರ ಟ್ರಾನ್ಸ್‌ಫರ್ ಮಾಡುತ್ತಾರೆ. ಇಲ್ಲದೇ ಹೋದರೆ ಇಲ್ಲ, ಟ್ರಾನ್ಸ್‌ಫರ್ ಬೇಕಿಲ್ಲ, ಯಾವ ಅಧಿಕಾರಿ ಅದಕ್ಷ ಎಂದು ತಿಳಿದರೆ ಅಂಥವನನ್ನು ಕೆಲಸದಿಂದ ತೆಗೆದು ಡಿಸ್‌ಮಿಸ್‌ಮಾಡಿ ಮನೆಗೆ ಕಳುಹಿಸಿ, ಒಪ್ಪಿಕೊಳ್ಳುತ್ತೇನೆ. ಅದುಬಿಟ್ಟು ಯಾರು ಹೆಚ್ಚಿನ ಒತ್ತಾಯ ತರುತ್ತಾರೆ ಅಂಥವರು 20 ವರ್ಷ ತಮ್ಮ ಸರ್ವೀಸ್ ಪೂರ್ತಿ ಬೆಂಗಳೂರಿನಲ್ಲಿ ಇರುವುದು. ಇನ್ನು ಕೆಲವರನ್ನು ಪದೇ ಪದೇ ಟ್ರಾನ್ಸ್‌ಫರ್ ಮಾಡುವುದು ಸರಿಯಲ್ಲ. ಟ್ರಾನ್ಸ್‌ಫರ್ ಮಾಡುವುದರ ಬಗ್ಗೆ ಏನಾದರೂ ಒಂದು ಬೇಸಿಸ್ ಇರಬೇಕು. ಅಂಥ ಒಂದು ಬೇಸಿಸ್ ಮೇಲೆ ಟ್ರಾನ್ಸ್‌ಫರ್ ಮಾಡಿದರೆ, ಶಾಸಕರ ಹೆಚ್ಚಿನ ಸಮಯವನ್ನು ಈ ಅಧಿಕಾರಿಗಳು ಹಾಳುಮಾಡುವುದು ತಪ್ಪುತ್ತದೆ. ಇಲ್ಲದೆ ಹೋದರೆ ಅವರು ತಂದೆಗೆ ಕಾಯಿಲೆ, ಮಗನಿಗೆ ಕಾಯಿಲೆ ಎಂದು ಹೇಳಿಕೊಂಡು ನಮಗೂ ಕಾಯಿಲೆ ತರುತ್ತಾರೆ. ಆದ್ದರಿಂದ ತಾವು ಮನಸ್ಸಿಗೆ ಬಂದ ಹಾಗೆ ಸಿಕ್ಕಾಪಟ್ಟೆ ಟ್ರಾನ್ಸ್‌ಫರ್ ಮಾಡುವುದು ಸರಿಯಲ್ಲ. ಒಂದು ಆಧಾರದ ಮೇಲೆ ಟ್ರಾನ್ಸ್‌ಫರ್ ಮಾಡಿದರೆ ನಮಗೂ ನಮ್ಮ ಕೆಲಸ ಕಾರ್ಯಗಳನ್ನು ಮುಖ್ಯವಾಗಿ ನಮ್ಮ ಕ್ಷೇತ್ರದ ಕೆಲಸ ಕಾರ್ಯಗಳನ್ನು ಮಾಡುವುದಕ್ಕೆ ಅವಕಾಶವಾಗುತ್ತದೆ. ಇವತ್ತಿನ ದಿವಸ ಆಡಳಿತದಲ್ಲಿ ಕಂಡುಬಂದಿರತಕ್ಕ ಲಂಚ ಎಲ್ಲಾ ಕಡೆಯೂ ಲಂಚಮಯವಾಗಿದೆ. ಸದಾಶಿವನಗರದಲ್ಲಿ ಇರುವ ಮನೆಗಳ ಅಂಕಿ ಅಂಶಗಳನ್ನು ಎತ್ತಿದರೆ, ಅಧಿಕಾರಿಗಳ ಮನೆ ಎಷ್ಟು ಇವೆ, ಈ ಮನೆಗಳನ್ನು ಅವರು ಕಟ್ಟಿಸಬೇಕಾದರೆ ಅವರಿಗೆ ಅಷ್ಟೊಂದು ಹಣ ಎಲ್ಲಿಂದ ಬಂತು ಸರ್ಕಾರ ಏನಾದರೂ ಕೂಡ ಶುದ್ಧವಾದ ಆಡಳಿತವನ್ನು ಕೊಡಬೇಕು, ನಮ್ಮ ರಾಜ್ಯದಲ್ಲಿ ನ್ಯಾಯ ಕೊಡಬೇಕು ಎನ್ನುವ ಮನಸ್ಸು ಇದ್ದರೆ, ಬೆಂಗಳೂರಿನಲ್ಲಿ ಯಾವ ಯಾವ ಅಧಿಕಾರಿಗಳಿಗೆ ಎಷ್ಟೆಷ್ಟು ಮನೆಗಳು ಇವೆ ಎನ್ನುವ ಅಂಕಿ ಅಂಶಗಳನ್ನು, ಯಾರ ಯಾರ ಹೆಸರಿನಲ್ಲಿ ಎಷ್ಟೆಷ್ಟು ಮನೆಗಳು ಇವೆ ಎನ್ನುವ ಅಂಕಿ ಅಂಶಗಳನ್ನು ಎತ್ತಿದರೆ, ಅವರಿಗೆ ಇಷ್ಟೊಂದು ಹಣ ಎಲ್ಲಿಂದ ಬಂತು ಎಂಬುದು ಎನ್‌ಕ್ವಯರಿ ಮಾಡಿದರೆ ಗೊತ್ತಾಗುತ್ತದೆ. ಇದನ್ನು ಸರ್ಕಾರ ಮಾಡುವುದಕ್ಕೆ ತಯಾರು ಇಲ್ಲ. ಒಬ್ಬ ಮಂತ್ರಿ, ಒಬ್ಬ ವಿಲೇಜ್ ಅಕೌಂಟೆಂಟ್ ಇಂಥ ಕಡೆ ಇರಬೇಕು ಎಂದು ಟೆಲಿಫೋನ್ ಮಾಡಿ ಹೇಳುವುದಾದರೆ ಇದರಲ್ಲಿ ಎಷ್ಟು ಘನತೆ ಇದೆ, ಇದರಲ್ಲಿ ಎಷ್ಟು ನೀತಿ ಇದೆ ಮತ್ತು ಇವರ ಕೆಳಗೆ ಕೆಲಸ ಮಾಡುವ ಅಧಿಕಾರಿಗಳು ಯಾವ ರೀತಿ ಇರುತ್ತಾರೆ ? ಇದನ್ನು ತಾವೇ ಹೇಳಬೇಕು. ಇವತ್ತಿನ ದಿವಸ ಯಾವುದೇ ಪಕ್ಷ ಆಡಳಿತದಲ್ಲಿದ್ದರೂ ಕೂಡ, ಅದು ಮುಂದು ವರಿಯಲು, ಪುನಃ ಅಧಿಕಾರಕ್ಕೆ ಬರಲು ಆಡಳಿತದ ದಕ್ಷತೆಯಿಂದ ಮಾತ್ರ ಸಾಧ್ಯ ಎಂದು ಎಲ್ಲರೂ ಒಪ್ಪಿಕೊಳ್ಳಬೇಕು.

ಇನ್ನು ಜೈಲಿನ ಬಗ್ಗೆ ನನ್ನ ಒಂದು ಸಲಹೆ ಏನೆಂದರೆ, ತಪ್ಪು ಮಾಡಿದವರು ಅಪರಾಧಿ' ನಿರಪರಾಧಿ ಎಂದು ತಿಳಿಯದೆ ಇರತಕ್ಕಂಥ ಪರಿಸ್ಥಿತಿಯಲ್ಲಿ ನಿರಪರಾಧಿಯಾದವರೂ ಕೆಲವು ವರ್ಷಗಳವರೆಗೂ ಅವರು ಜೈಲಿನಲ್ಲಿರಬೇಕಾಗುತ್ತದೆ. ಕನ್‌ವಿಕ್ಷನ್ ಮಾಡಿದರೆ ಜೈಲಿನಲ್ಲಿ ಅಂಡರ್ ಟ್ರಯಲ್ ಪಿರಿಯಡ್‌ನಲ್ಲಿರುವವರನ್ನೂ ಸೆಂಟೆನ್ಸ್‌ನಲ್ಲಿ ಸೇರಿಸುವುದಿಲ್ಲ. ಆದ್ದರಿಂದ ಸೆಂಟೆನ್ಸ್ ಜೊತೆಗೆ ಸೇರಿಸಿದರೆ, ಇದರಿಂದ ಕೆಲವರಿಗೆ ಅನುಕೂಲವಾಗುತ್ತದೆ ಎಂದು ನಾನು ಹೇಳುತ್ತೇನೆ. ಎಕ್ಸೈಜ್ ಡಿಪಾರ್ಟ್‌ಮೆಂಟಿನಲ್ಲಿ ಸ್ಕ್ವಾಡ್ ಇಟ್ಟಿದ್ದಾರೆ. ಇದರ ಬಗ್ಗೆ ನನ್ನ ಸ್ವಂತ ಅನುಭವದಿಂದ ಹೇಳುತ್ತೇನೆ. ಮಾಲೂರಿನಿಂದ ಬೆಂಗಳೂರಿಗೆ ಬರುವ ಮಧ್ಯದಲ್ಲಿ ಗದಿಗೆನಹಳ್ಳಿ ಹತ್ತಿರ ಕಾಡು ಇದೆ. ಹನ್ನೊಂದೂವರೆ ಗಂಟೆ ರಾತ್ರಿಯಲ್ಲಿ ನಾನು ಒಬ್ಬನೇ ನನ್ನ ಕಾರಿನಲ್ಲಿ ಬರುತ್ತಿದ್ದಾಗ ಅಲ್ಲಿ ನನ್ನನ್ನು ತಡೆದರು,

ಉಪಾಧ್ಯಕ್ಷರು :—ಮಾನ್ಯ ಹಗರಿಯವರು ಭಾಷಣ ಪ್ರಾರಂಭ ಮಾಡಬಹುದು.

ಶ್ರೀ ಪಿ. ಪಿ. ಹಗರಿ (ಚಿಕ್ಕೋಡಿ) :— ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ನಮ್ಮ ಮುಖ್ಯಮಂತ್ರಿಗಳು ಮಂಡಿಸಿದ ಡಿಮ್ಯಾಂಡುಗಳಿಗೆ ನನ್ನ ಬೆಂಬಲ ಉಂಟು. ನಮ್ಮ ದೇಶಕ್ಕೆ ಸ್ವಾತಂತ್ರ್ಯ ದೊರೆತಾಗ ದೇಶದ ಮುಂದೆ ದೊಡ್ಡ ಸಮಸ್ಯೆಗಳು ಇದ್ದುವು. ನಮ್ಮ ದೇಶದಲ್ಲಿ ಆರ್ಥಿಕ ವಿಷಮತೆ ಇತ್ತು, ಸಾಮಾಜಿಕ ವಿಷಮತೆ ಇತ್ತು. ಹಾಗಿದ್ದರೂ ನಮ್ಮ ಸಂವಿಧಾನ ಕಾರ್ಯಕರ್ತರು ನಮ್ಮ ದೇಶ ಸಾರ್ವಭೌಮ ಪ್ರಜಾರಾಜ್ಯ ಎಂದು ಘೋಷಣೆ ಮಾಡಿದರು. ಆ ಕಾಲಕ್ಕೆ ಈ ಪ್ರಶ್ನೆಗಳು ಅವರ ಜ್ಞಾಪಕಕ್ಕೆ ಬರಲಿಲ್ಲ ಎಂದು ಅಲ್ಲ. ಈ ಸಮಸ್ಯೆಗಳನ್ನು ಆರ್ಥಿಕ ವಿಷಮತೆ, ಸಾಮಾಜಿಕ ವಿಷಮತೆಯನ್ನು ಸರಿಪಡಿಸುವುದರ ಸಲುವಾಗಿ, ದುರ್ಬಲ ವರ್ಗದ ಬಗ್ಗೆ, ಸಾಮಾಜಿಕ ಆರ್ಥಿಕ ದೃಷ್ಟಿಯಿಂದ ಮತ್ತು ಶಿಕ್ಷಣ ಕ್ಷೇತ್ರದಲ್ಲಿ, ರಾಷ್ಟ್ರಕ್ಷೇತ್ರದಲ್ಲಿ ಅವರಿಗೆ ಸಾಕಷ್ಟು ಸವಲತ್ತುಗಳನ್ನು ಕೊಡಬೇಕು ಎಂದು ಸಂವಿಧಾನದಲ್ಲಿ ಬರೆದಿಟ್ಟು ಹೋದರು. ಆದರೆ ಇವತ್ತು ನಾವು ದುರ್ದೈವದಿಂದ ಹೇಳಬೇಕಾಗಿದೆ, ಸಂವಿಧಾನದೊಳಗೆ ದುರ್ಬಲ ವರ್ಗಗಳಿಗೆ ಸವಲತ್ತುಗಳನ್ನು ಕೊಡಬೇಕೆಂದು ಏನು ಹೇಳಿದ್ದರೋ ಅದನ್ನು ನಮ್ಮ ಸರ್ಕಾರ ಪೂರ್ಣಗೊಳಿಸುವ ಮನಸ್ಸು ಮಾಡಿಲ್ಲ ಎಂದು ಹೇಳಬೇಕಾಗುತ್ತದೆ.

ಇವತ್ತಿನ ಕಾಲದಲ್ಲಿ ಸಮಾಜದಲ್ಲಿ ಆಗುವ ಅನ್ಯಾಯಗಳ ಬಗ್ಗೆ ದಿನ ಬೆಳಗಾದರೆ ಒಂದೊಂದು ಸಂಗತಿಯನ್ನು ಕೇಳುತ್ತಿದ್ದೇವೆ. ಒಂದೆರಡು ತಿಂಗಳುಗಳಲ್ಲಿ ನಡೆದ ಘಟನೆಗಳನ್ನು ತಮ್ಮ ದೃಷ್ಟಿಗೆ ತರಬಯಸುತ್ತೇನೆ. ಒಂದು ಕಡೆ ಒಬ್ಬ ಕಾಲೇಜು ಹರಿಜನ ವಿದ್ಯಾರ್ಥಿಯನ್ನು ಕಂಬಕ್ಕೆ ಕಟ್ಟಿ ಕಂಡಕಂಡಂತೆ ಬಡಿದರು. ಇಂದು ನಮ್ಮ ಸ್ವಾತಂತ್ರ್ಯ ಬಂದು 25 ವರ್ಷಗಳು ಆದರೂ ಬೆಂಗಳೂರು ನಗರದಲ್ಲಿ ನಡೆಯುವ ಘಟನೆ ಇದು. ಇದು ನಮ್ಮ ಜನರಲ್ ಅಡ್ಮಿನಿಸ್ಟ್ರೇಷನ್ನಿನ ರೀತಿನೀತಿ. ಮತ್ತೊಂದು ಪ್ರಸಂಗದಲ್ಲಿ 7 ವರ್ಷದ ಒಬ್ಬ ಅಸ್ವಸ್ಥ ಬಾಲಕ ಪ್ರಾರ್ಥನೆ ಮಾಡುವ ಸಲುವಾಗಿ ಚಾಮರಾಜ ನಗರದ ಶನಿದೇವರ ಮಂದಿರ ಗುಡಿಗೆ ತನ್ನ ತಂದೆಯೊಡನೆ ಹೋಗಿದ್ದ. ಒಬ್ಬ ಸನಾತನ ಹಿಂದು ಬಂದು ಹರಿಜನ ಬಾಲಕನು ಗುಡಿಗೆ ಬಂದದ್ದನ್ನು ಸಹಿಸದೆ ಅವನ ಕುತ್ತಿಗೆಗೆ ಕೈ ಹಾಕಿ ತಿರುಗಿಸಿ ಬಿಸಾಕಿದ, ಆ ಹುಡುಗ ಪ್ರಾಣ ಬಿಟ್ಟ. 7 ವರ್ಷದ ಬಾಲಕ ಇದನ್ನು ನೋಡಿ ಹಿಂದುಗಳು ನಾಚಿಕೆಪಡಬೇಕಾಗಿದೆ. ಈ ರೀತಿ ಸಮಾಜದಲ್ಲಿ ಇನ್ನು ಎಷ್ಟು ದಿವಸ ನಡೆದುಕೊಂಡು ಹೋಗಬೇಕು ? ಇಂಥ ಪ್ರಸಂಗಗಳು ಆಗದಂತೆ ಸರ್ಕಾರದವರು ಅತ್ಯಂತ ಜಾಗರೂಕತೆಯಿಂದ ನೋಡಿಕೊಳ್ಳಬೇಕು. ಕಾಯಿದೆ ಕಾನೂನು ಪ್ರಕಾರ ಕೊಲೆ ಮಾಡಿದವನಿಗೆ ಎರಡು ವರ್ಷ ಶಿಕ್ಷೆ ಕೊಡಬಹುದು. ಸಾವಿರ ರೂಪಾಯಿ ದಂಡ ಹಾಕಬಹುದು. ಆದರೆ ಇಂತಹ ರಾಕ್ಷಸೀ ಕೃತ್ಯ ಕೊಲೆ ಮಾಡಿದವನಿಗೆ he must be shot dead, or he should be hanged, ಇಂಥ ಕಾಯಿದೆ ದೇಶದಲ್ಲಿ ಬರಬೇಕು. ನಮ್ಮ ಭಾರತೀಯ ಸಂಸ್ಕೃತಿಯು ಉಚ್ಚತಮವಾದುದೆಂದು ಹೇಳುವ ಹಿಂದೂ ಸಮಾಜದಲ್ಲಿ ಈ ತರಹ ಅನ್ಯಾಯವಾಗುತ್ತಿದೆ. ಇದನ್ನು ಸರ್ಕಾರದವರು ತೀವ್ರವಾಗಿ ಯೋಚಿಸಬೇಕು. ಸಮಾಜದೊಳಗೆ ಹೆಚ್ಚಿಗೆ ದಿವಸ ಇದನ್ನು ಸಹನೆ ಮಾಡುವುದಕ್ಕೆ ಆಗುವುದಿಲ್ಲ. ಸರ್ಕಾರದವರು ಧೈರ್ಯ ಮಾಡಿ ಸಮಾಜದಲ್ಲಿ ಕ್ರಾಂತಿ ಕಾರಕ ಬದಲಾವಣೆ ತರಬೇಕು. ಈ ವಿಷಯವನ್ನು ಬಿಟ್ಟು ಮತ್ತೊಂದು ವಿಷಯಕ್ಕೆ ಹೋಗುತ್ತೇನೆ. ಅದರ ಬಗ್ಗೆ ಇದೇ ಸದನದಲ್ಲಿ ಒಂದೆರಡು ಸಲ ಮಾತನಾಡಿದ್ದೇನೆ. ಶೆಡ್ಯೂಲ್ಡ್ ಕ್ಯಾಸ್ಟಿನವರಿಗೆ ಅನ್ಯಾಯಗಳು ಆಗದೆ ಇರಬೇಕಾಗಿದ್ದರೆ ಅವರಿಗೆ ಉಚ್ಚಸ್ಥಾನ ಸರ್ಕಾರದ ನೌಕರಿಯಲ್ಲಿ ಕೊಡಬೇಕು. ಜಾತಿಯ ಮೇಲೆ ನಿಂತ ನಮ್ಮ ಹಿಂದೂ ಸಮಾಜದಲ್ಲಿ ಸ್ವಜನ ಪಕ್ಷಪಾತ ಇದ್ದೇ ಇರುತ್ತದೆ. ಯಾವುದೇ ಅಧಿಕಾರಿ ನೋಡಿದರೂ ಅವನು ಶೆಡ್ಯೂಲ್ಡ್ ಕ್ಯಾಸ್ಟ್, ಶೆಡ್ಯೂಲ್ಡ್ ಟ್ರೈಬ್ಸ್ ಮತ್ತು ಹಿಂದುಳಿದ ವರ್ಗದ ಜನರಿಗೆ ಯೋಗ್ಯ ಬೆಲೆ ಕೊಡುವುದಿಲ್ಲ. ಅವರ ದುಃಖ ಮತ್ತೆ ಅವರ ಕಷ್ಟವನ್ನು ಯಾರೂ ನಿವಾರಣೆ ಮಾಡುವುದಿಲ್ಲ,

ದುಃಖ ನಿವಾರಣೆ ಮಾಡಬೇಕಾದರೆ ಅವರು ಉನ್ನತ ಸ್ಥಾನದಲ್ಲಿದ್ದರೆ ಮಾತ್ರ ನಿವಾರಣೆ ಮಾಡಲು ಸಾಧ್ಯವಾಗುತ್ತದೆ. ಆದುದರಿಂದ ಬಡ ಜನರ ಮತ್ತು ಹಿಂದುಳಿದ ಜನಾಂಗದವರಿಗೆ ಮೇಲಿನ ಮುಖ್ಯ ಹುದ್ದೆಗಳನ್ನು ಸರ್ಕಾರ ಕೊಡಿಸುವ ಪ್ರಯತ್ನ ಮಾಡಬೇಕು. ನಮ್ಮ ನೆಚ್ಚಿನ ನಾಯಕರಾದ ಪ್ರಧಾನ ಮಂತ್ರಿಗಳು ಮೈನಾರಿಟೀಸ್ ಮತ್ತು ಹರಿಜನರಿಗೆ ನೌಕರಿಯಲ್ಲಿ ಉಚ್ಚಸ್ಥಾನ ಕೊಡಬೇಕೆಂದು, ಖಾಸಗೀ ಸಂಸ್ಥೆಗಳಲ್ಲಿಯೂ ಅವರಿಗೆ ಯೋಗ್ಯ ನೌಕರಿ ಕೆಲಸ ಕೊಡಬೇಕೆಂದೂ ಮೊನ್ನೆ ಹೇಳಿದ್ದಾರೆ. ಅವರು We are trying to put minority people in key positions. This does not solve the problem, but at least the prejudices that exists in the administration will go, if these people are there in key positions ಎಂದು ಹಿಂದುಳಿದವರಿಗೆ ನೌಕರಿಯಲ್ಲಿ ಉಚ್ಚಸ್ಥಾನ ಕೊಡುವ ವಿಷಯದಲ್ಲಿ ಇಂದಿರಾಗಾಂಧಿಯವರು ಒಪ್ಪುತ್ತಾರೆ. ಅವರಿಗೆ ಗೊತ್ತಾಗಿದೆ, ನಮ್ಮ ಶೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಟ್ರೈಬ್ಸ್ ಜನರ ಮುಖ್ಯ ಸ್ಥಾನದಲ್ಲಿದ್ದ ಹೊರತಾಗಿ ಅವರ ದುಃಖ ನಿವಾರಣೆ ಮಾಡುವುದಕ್ಕೆ ಸಾಧ್ಯ ಇಲ್ಲ ಎನ್ನುವುದು. ಅವರನ್ನು ಮೇಲಿನ ಸ್ಥಾನಗಳಿಗೆ ಹಾಕುವುದಕ್ಕೆ ಯೋಗ್ಯ ಶಿಕ್ಷಣ ಕೊಟ್ಟು ಅವರಿಗೆ ಕೆಲಸಗಳನ್ನು ಕೊಡಬೇಕು. ಇನ್ನೊಂದು ಸಂವಿಧಾನದಲ್ಲಿ ಇರುವ ರೀತಿ ಅವರಿಗೆ reservation of seats in Govt. services ದೊರೆಯುತ್ತಿಲ್ಲ. ಇದಕ್ಕೆ ಕಾರಣ ರಿಸರ್ವೇಷನ್ ಪರ್ಸೆಂಟೇಜ್ ಇಲ್ಲದೆ ಲೋಕಲ್ ಕ್ಯಾಂಡಿಡೇಟ್ಸ್ ತೆಗೆದುಕೊಳ್ಳುವುದು. ಆ ರೀತಿ ಸಾವಿರಾರು ಜನ ಲೋಕಲ್ ಕ್ಯಾಂಡಿಡೇಟ್ಸ್ ತೆಗೆದುಕೊಂಡಿದ್ದಾರೆ. ಅದರಲ್ಲಿ ಶೆಡ್ಯೂಲ್ಡ್ ಕ್ಯಾಸ್ಟ್—ಟ್ರಯಬ್ಸ್ ಜನರಿಗೆ ರಿಜರ್ವೇಷನ್ ಕೊಟ್ಟಿಲ್ಲ. ರಿಸರ್ವೇಷನ್ ಕಡಿಮೆ ಬಿದ್ದಿರುವುದರಿಂದ ಶೆಡ್ಯೂಲ್ಡ್ ಕ್ಯಾಸ್ಟ್—ಟ್ರೈಬ್ಸ್‌ಗೆ 18 ಪರ್‌ಸೆಂಟ್ ಆಗುವ ತನಕ ಅವರನ್ನು ಹುದ್ದೆಗಳಿಗೆ 25 ಪರ್‌ಸೆಂಟ್ ತುಂಬಬೇಕು. ಅದು ಆದನಂತರ ಹುದ್ದೆಗಳಿಗೆ 18 ಪರ್‌ಸೆಂಟ್ ತುಂಬಿಕೊಂಡು ಹೋಗುತ್ತಾ ಇರಬಹುದು ಎಂದು ಸೂಚನೆ ಮಾಡುತ್ತೇನೆ.

ಇನ್ನು ನೌಕರರ ವರ್ಗಾವರ್ಗಿ ಈ ವಿಷಯದಲ್ಲಿ ಶೆಡ್ಯೂಲ್ಡ್ ಕ್ಯಾಸ್ಟ್—ಟ್ರೈಬ್ಸ್‌ಗೆ ಅನ್ಯಾಯ ವಾಗುತ್ತಿದೆ, ಉದಾಹರಣೆಗೆ ಹೇಳಬಹುದು. ರಾಜಕಾರಣಿಗಳು ಎಂ. ಎಲ್. ಎ. ಗಳು ವರ್ಗಾವರ್ಗಿ ಬಗ್ಗೆ ಆಸಕ್ತಿ ತೆಗೆದುಕೊಳ್ಳಬಾರದೆಂದು ಸರ್ಕಾರದ ಆದೇಶ ಇದೆ. ಅದೇ ರೀತಿ ನಮ್ಮ ನೌಕರರ ಕಷ್ಟ ವಿಚಾರ ಮಾಡಿ ಅದನ್ನು ಪರಿಹರಿಸಲಿಕ್ಕೆ ಮೇಲಧಿಕಾರಿಗಳು ಪ್ರಯತ್ನ ಮಾಡಬೇಕು ಎಂದು ಸರ್ಕಾರಿ ಪರಿಪತ್ರವಿದೆ. ಆ ರೀತಿ ಆದೇಶ ಕೊಟ್ಟರೂ ಸಹ ಶೆಡ್ಯೂಲ್ಡ್ ಕ್ಯಾಸ್ಟ್—ಟ್ರೈಬ್ಸ್ ಮತ್ತು ಹಿಂದುಳಿದ ಜನರ ಕಷ್ಟ ನೋಡುವವರು ಯಾರೂ ಇಲ್ಲ ಎಂದು ಸ್ಪಷ್ಟವಾಗಿ ಹೇಳುತ್ತೇನೆ. ಅವರ ವಿಷಯವನ್ನು ಯಾವಾಗಲೂ ತಿರಸ್ಕಾರ ಬುದ್ಧಿಯಿಂದ ನೋಡುತ್ತಾರೆ. ನೌಕರಿ ಮಾಡುವಂಥ ಇಂಥ ಜನ ಎಷ್ಟು ದಿವಸ ಈ ರೀತಿ ನೌಕರಿ ಮಾಡಬೇಕು ? ನಮ್ಮ ನೆಂಟರು ಮತ್ತು ಸಂಬಂಧಿಕರು ಒಬ್ಬರಿಗೆ ತೊಂದರೆಯಾಗಿದೆ ಅವರು ಬೇರೆ ಕಡೆ ಕೆಲಸ ಮಾಡುವುದು ಅವರ ಹೆಂಡತಿ ಇನ್ನೊಂದು ಕಡೆ ಕೆಲಸ ಮಾಡುವುದು ಬೆಳಗಾವಿಯಲ್ಲಿ ಹೆಂಡತಿ ಕೆಲಸ ಮಾಡುತ್ತಿದ್ದರೆ ಬಿಜಾಪುರದಲ್ಲಿ ಗಂಡ ಕೆಲಸ ಮಾಡುತ್ತಿದ್ದಾನೆ. ನನ್ನ ಸಂಬಂಧಿಕನ ಕಷ್ಟನಿವಾರಣೆ ಮಾಡಬೇಕೆಂದು ಮಂತ್ರಿಗಳಿಗೆ ಹೇಳಿದೆ. ಮಂತ್ರಿಗಳು this is a genuine case and he should be transferred ಎಂದು ಹೇಳಿದರು. ಮಂತ್ರಿಗಳು ಈ ವಿಚಾರದಲ್ಲಿ ಏನು ಮಾಡಿದ್ದಾರೆ ಎಂಬುದು ನನಗೆ ಗೊತ್ತಿಲ್ಲ. ಮಂತ್ರಿಗಳು ನನ್ನ ಪತ್ರದ ಮೇಲೆ ಎಂಡಾರ್ಸ್‌ಮೆಂಟ್ ಮಾಡಿ ಕಳುಹಿಸಿರಬಹುದು. ಆದರೆ ಇನ್ನು ಟ್ರಾನ್ಸ್‌ಫರ್ ಆಗಿಲ್ಲ, ಕೊನೆಗೆ ಪರಿಣಾಮ ಏನು ಆಯಿತು ? ಎರಡು ವರ್ಷ ಸರ್ವಿಸ್ ಆಗಿಲ್ಲ, ನಿನ್ನನ್ನು ಟ್ರಾನ್ಸ್‌ಫರ್ ಮಾಡುವುದಕ್ಕೆ ಬರುವುದಿಲ್ಲ ಇದಕ್ಕೆ ಮುಂದೆ ಹೋಗಿ ಆ ಅಧಿಕಾರಿಯು you are warned for approaching a politician for your transfer ಎಂದು ವಾರ್ನಿಂಗ್ ಕೊಟ್ಟಿದ್ದಾರೆ, ಆ ಅಧಿಕಾರಿಗಳು ಆದುದರಿಂದ ಇಂಥ ಆಫೀಸರನ

ಕೈಯೊಳಗೆ ಆ ನೌಕರನ ಜೀವನ ಸುರಕ್ಷಿತ ಇಲ್ಲ ಇದು ಸ್ಪಷ್ಟವಾಗಿದೆ. ಇನ್ನು ಮುಂದೆ ಏನು ಕ್ರಮ ತೆಗೆದುಕೊಳ್ಳಬೇಕೋ ಯಾವ ರೀತಿ ಸಹನೆಯಿಂದ ಇರಬೇಕೋ ಗೊತ್ತಾಗುವುದಿಲ್ಲ. ಇಂಥ ಪ್ರಸಂಗದಲ್ಲಿ ಈ ನೌಕರನಿಗೆ ಈ ಅಧಿಕಾರಿಯಿಂದ ಎಂಥ ತೊಂದರೆ ಸಂಕಟಗಳನ್ನು ಅನುಭವಿಸ ಬೇಕಾದೀತೋ ಹೇಳಲಿಕ್ಕೆ ಬರುವಂತಿಲ್ಲ. ಆ ನೌಕರನಿಗೆ ಈ ಅಧಿಕಾರಿಯಿಂದ ಏನಾದರೂ ಅಪಾಯ ಸಂಭವಿಸಿದರೆ ಸಂಬಂಧಿಸಿದ ಮಂತ್ರಿಗಳು ಜವಾಬ್ದಾರರಾಗಬೇಕಾದೀತೆಂದು ನಾನು ಈ ಪ್ರಸಂಗದಲ್ಲಿ ಸರಕಾರದ ಗಮನಕ್ಕೆ ತರಬಯಸುತ್ತೇನೆ. ಇಂಥ ಪ್ರಸಂಗಗಳನ್ನು ತಪ್ಪಿಸಲು ಸರ್ಕಾರದವರು ಕಟ್ಟುನಿಟ್ಟಾಗಿ ಸಂವಿಧಾನದಲ್ಲಿ ಕಾಣಿಸಿದ ಸವಲತ್ತುಗಳನ್ನು ಶೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಟ್ರೈಬ್ಸ್‌ಗೆ ಒದಗಿಸಿಕೊಡಬೇಕು ಎಂದು ಸರ್ಕಾರಕ್ಕೆ ಪ್ರಾರ್ಥಿಸಿ ಅಧ್ಯಕ್ಷರು ಇಷ್ಟು ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯುಡು (ಶಾಂತಿನಗರ) :—ಮಾನ್ಯ ಅಧ್ಯಕ್ಷರೇ. ಮಾನ್ಯ ಮಂತ್ರಿಗಳು ತಂದಿರತಕ್ಕ ಬೇಡಿಕೆಗಳನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತ ಈ ಸಂದರ್ಭದಲ್ಲಿ ಕೆಲವು ಸೂಕ್ತ ಸಲಹೆಗಳನ್ನು ಕೊಡಲು ಇಚ್ಛಿಸುತ್ತೇನೆ. ನಮ್ಮ ಅಧಿಕಾರಿಗಳಲ್ಲಿ ಯೋಗ್ಯತೆ ಮತ್ತು ದಕ್ಷತೆ ಇರಬೇಕು, ನಿಷ್ಠಾವಂತ ಅಧಿಕಾರಿಗಳು ಇರಬೇಕು ಎಂದು ಹೇಳಿದರೆ ಅಂತಹ ವರನ್ನು ನಾವು ಎಲ್ಲಿಂದ ತರೋಣ ? ಸರ್ಕಾರ ಮತ್ತು ಸಾರ್ವಜನಿಕ ಕ್ಷೇತ್ರದಲ್ಲಿ ಇರುವ ಅವರೆಲ್ಲ ನಮ್ಮ ಅಣ್ಣ ತಮ್ಮಂದಿರಲ್ಲವೆ ? ಅದರ ತಮಗೆಲ್ಲ ಗೊತ್ತಿರುವ ಹಾಗೆ ಪ್ರಜಾಪ್ರಭುತ್ವಕ್ಕೆ ಮೂರು ಕಂಬಗಳು ಇವೆ—ಅವು ಯಾವುವೆಂದರೆ : (1) ಜುಡಿಷಿಯರಿ (2) ಎಗ್ಸಿಕ್ಯೂಟಿವ್ ಮತ್ತು (3) ಲೆಜಿಸ್ಲೇಚರ್. ಜುಡಿಷಿಯರಿ ಬೇಕಾದಷ್ಟು ತೀರ್ಮಾನಗಳನ್ನು ಕೊಡಬಹುದು ; ಲೆಜಿಸ್ಲೇಚರ್‌ನಲ್ಲಿ ನಾವು ಬೇಕಾದಷ್ಟು ಕಾನೂನುಗಳನ್ನು ಮಾಡಬಹುದು. ಆದರೆ ಕಾನೂನು ಗಳನ್ನು ಜಾರಿಗೆ ತರತಕ್ಕವರು ನಿಷ್ಠಾವಂತ ಅಧಿಕಾರಿಗಳೇ ಆಗಿರಬೇಕು. ಸಾರ್ವಜನಿಕ ಜೀವನ ದಲ್ಲಿ ಲೆಜಿಸ್ಲೇಚರ್ 5 ವರ್ಷ ಇರುತ್ತದೆ, ಆದರೆ ನಾವು 30 ವರ್ಷಗಳ ಕಾಲ ಸದಾ ಸೇವೆ ಮಾಡುತ್ತೇವೆ ಎನ್ನುವ ಭಾವನೆ ಈ ಅಧಿಕಾರಿಗಳಲ್ಲಿ ಪೂರ್ತಿ ಇರುತ್ತದೆ. ಅವರೂ ಸಹ ಪಬ್ಲಿಕ್ ಸರ್ವೆಂಟ್ಸ್, ದೇಶದ ಸೇವಕರು. ಎನ್ನುವ ಮನೋಭಾವನೆ ಅವರಲ್ಲಿ ಉದ್ಭವಿಸಬೇಕು ಎಂದು ಒತ್ತಿ ಹೇಳುತ್ತೇನೆ. ಜೊತೆಗೆ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್ ಕೇವಲ 80 ಇಲಾಖೆಗಳಲ್ಲಿ ಮಾತ್ರ ಇವೆ. ಇನ್ನು ಎಷ್ಟೋ ಇಲಾಖೆಗಳಲ್ಲಿ ಕೇಡರ್ ಅಂಡ್ ರೆಕ್ರೂಟ್ ಮೆಂಟ್ ರೂಲ್ಸ್ ಇನ್ನೂ ಪೂರ್ತಿ ಆಗಿಲ್ಲ. ಆದಷ್ಟು ಜಾಗ್ರತೆ ಉಳಿದ ಇಲಾಖೆಗಳಲ್ಲಿ ಕೂಡ ಕೇಡರ್ ಮತ್ತು ರೆಕ್ರೂಟ್‌ಮೆಂಟ್ ರೂಲ್ಸ್‌ನ್ನು ಮಾಡಿ ಮುಗಿಸಬೇಕು. ಇನ್ನು ರೆಗ್ಯುಲರೈಸೇಷನ್ ಆಫ್ ಸರ್ವಿಸ್ ಆಫ್ ಲೋಕಲ್ ಕ್ಯಾಂಡಿಡೇಟ್ಸ್ ಬಗ್ಗೆ ಹೇಳುವುದಾದರೆ, ಅವರ ಸರ್ವೀಸ್ ರೆಗ್ಯುಲರೈಸ್ ಮಾಡಬೇಕು. ಹದೇ ಹದೇ ಲೋಕಲ್ ಕ್ಯಾಂಡಿಡೇಟ್ಸನ್ನು ತೆಗೆದುಕೊಂಡು ಸಕಾಲದಲ್ಲಿ ಅವರ ಸರ್ವೀಸನ್ನು ರೆಗ್ಯುಲರೈಸ್ ಮಾಡದೇ ಇದ್ದರೆ ಅವರ ಸೀನಿಯಾರಿಟಿಗೆ ತೊಂದರೆಯಾಗುತ್ತಿದೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಅಧಿಕಾರ ವರ್ಗದವರು ಮಾತೆತ್ತಿದರೆ ರೂಲ್ಸ್ ಮತ್ತು ರೆಗ್ಯುಲರೈಸೇಷನ್ ಬಗ್ಗೆ ಹೇಳುತ್ತೆ ಎಂದು ಹೇಳುತ್ತಾರೆ. ಸಾಧ್ಯವಾದಷ್ಟುಗೂ ಅದನ್ನು ಶೀಘ್ರವೇ ಮಾಡಬೇಕು ಎಂದು ಸೂಚಿಸುತ್ತೇನೆ.

ಇನ್ನು ಇಂಟರ್‌ಸ್ಟೇಟ್ ಸೀನಿಯಾರಿಟಿ ಲಿಸ್ಟ್ ಬಗ್ಗೆ ಅದು ಇದುವರೆಗೆ ಸರಿಯಾಗಿ ಪೂರ್ತಿ ಆಗಿಲ್ಲ. ಅಧಿಕಾರಿಗಳಲ್ಲಿ ಒಬ್ಬರಿಗೊಬ್ಬರಿಗೆ ಕೋ-ಆಪರೇಷನ್ ಇರುವುದಿಲ್ಲ. ಆಫೀಸಿನಲ್ಲಿ ಸರಿಯಾಗಿ ಕೆಲಸ ನಡೆಯುವುದಿಲ್ಲ. ಸೀನಿಯಾರಿಟಿ "ಬಿ-ಗ್ರೂಪ್" ಮಾಡಿದರೆ ಆಫೀಸು ಗಳಲ್ಲಿ ಕೆಲಸ ಸರಿಯಾಗಿ ಆಗುವುದಿಲ್ಲ. ಆದ್ದರಿಂದ ಸೀನಿಯಾರಿಟಿ ಲಿಸ್ಟ್ ಜಾಗ್ರತೆ ಮಾಡಿ ಮುಗಿಸಬೇಕು.

ಇನ್ನುಮೇಲಾದರೂ ಕನ್ನಡಕ್ಕೂ ತೆಲುಗಿಗೂ ಒಂದು "ಕಾಮನ್ ಟೈಪ್‌ರೈಟರ್" ಮಾಡಬೇಕು. ಇದರಿಂದ ನ್ಯಾಷನಲ್ ಇಂಟಿಗ್ರೇಷನ್ ಮತ್ತು ಎಮೋಷನಲ್ ಇಂಟಿಗ್ರೇಷನ್ ಆಗುತ್ತದೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಮೊದಲು ಐ.ಸಿ.ಎಸ್., ಐ.ಎ.ಎಸ್., ಐ.ಪಿ.ಎಸ್. ಆಫೀಸರು ಇರುತ್ತಿದ್ದರು. ಎಂ.ಎ.ಎಸ್. ಆಫೀಸರ್ ಏಸಿದ್ದಾರೆ ಅವರಿಗೆ ಹೆಚ್ಚಿನ ರೀತಿಯಲ್ಲಿ ಉತ್ತೇಜನ ಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಎಂ.ಎಲ್.ಎಸ್., ಎಂ.ಎಲ್.ಸೀಸ್. ಮತ್ತು ಎಂ. ಪೀಸ್. ಸಂಬಂಧಪಟ ಅಧಿಕಾರಿಗಳ ಹತ್ತಿರ ಹೋಗಬಾರದೆಂದು ಈ ಸಂದರ್ಭದಲ್ಲಿ ಸಲಹೆ ಮಾಡುತ್ತೇನೆ. ಮಂತ್ರಿಗಳು ಬೇಕಾದರೆ ಒಬ್ಬ ಸಪರೇಟ್ ಕ್ಲಾರ್ಕ್‌ನ್ನು ಇಟ್ಟುಕೊಂಡು ಎಂ.ಎಲ್.ಎಸ್., ಎಂ ಎಲ್.ಸೀಸ್ ಮತ್ತು ಎಂ. ಪೀಸ್ ತಮ್ಮ ಹತ್ತಿರ ಬರುವ ಹಾಗೆ ಮಾಡಬೇಕು. ನಾವು ಅಧಿಕಾರಿಗಳ ಹತ್ತಿರ ಹೋದರೆ ಎಫಿಶಿಯನ್ಸಿ ಆಫ್ ಆಡ್ಮಿನಿಸ್ಟ್ರೇಷನ್ ಕಡಿಮೆಯಾಗುತ್ತದೆ. ನನ್ನ ಅಭಿಪ್ರಾಯದಲ್ಲಿ ಎಂ.ಎಲ್.ಏಸ್.. ಎಂ.ಎಲ್. ಸೀಸ್. ಮತ್ತು ಎಂ. ಪೀಸ್ ಮಂತ್ರಿಗಳ ಹತ್ತಿರ ಹೋಗಿ ಅವರ ಮುಖಾಂತರ ಮಾತ್ರ ಕೆಲಸ ಮಾಡಿಸಬೇಕು ಎಂದು ಮತ್ತೊಮ್ಮೆ ಒತ್ತಿ ಹೇಳುತ್ತೇನೆ.

ಇನ್ನು ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್, ಡಿಸ್ಟ್ರಿಕ್ಟ್ ರೆಕ್ರೂಟ್‌ಮೆಂಟ್ ಕಮಿಟೀಸ್ ಮತ್ತು ಪಬ್ಲಿಕ್ ಸರ್ವೀಸ್ ಕಮಿಷನ್ ಈ ಮೂರಕ್ಕೂ ಒಂದು ಕೋಆರ್ಡಿನೇಷನ್ ಇರಬೇಕು. ಕೆಲವು ಸಂದರ್ಭದಲ್ಲಿ ಕೋಆರ್ಡಿನೇಷನ್ ಇಲ್ಲದೆ ಅನೇಕ ಜನರು ತೊಂದರೆಗಳನ್ನು ಅನುಭವಿಸಿ ನಿರುದ್ಯೋಗಿಗಳಾಗಿದ್ದಾರೆ.

ಇನ್ನು ಅಬ್ಕಾರಿ ಇಲಾಖೆ ಬಗ್ಗೆ ಹೇಳುವುದಾದರೆ, ರೆಸಿಡೆನ್‌ಷಿಯಲ್ ಏರಿಯಾಸ್‌ನಲ್ಲಿ ಟ್ಯಾಡಿ ಶಾಪನ್ನು ಓಪನ್ ಮಾಡಿದ್ದಾರೆ. ನನ್ನ ಕ್ಷೇತ್ರದಲ್ಲಿಯೇ ಹೇಳುವುದಾದರೆ ಕಾಲೇಜು ಮಧ್ಯದಲ್ಲಿ ಇಟ್ಟಿದ್ದಾರೆ. ಸಾಧ್ಯವಾದಮಟ್ಟಿಗೂ ಅವುಗಳನ್ನು ಊರಿನ ಹೊರಗೆ ಇಡಬೇಕು. ಇನ್ನು ಟೆಂಪರೆನ್ಸ್ ಕಮಿಟಿ ಬಗ್ಗೆ ಹೇಳುತ್ತೇನೆ. ದೇಶದಲ್ಲಿ ಅದರ ಬಗ್ಗೆ ಶಾಸನ ಇಲ್ಲದೆ ಇರುವಾಗ ಅದರ ಬಗ್ಗೆ ಏನು ಮಾಡುವುದಕ್ಕೂ ಆಗುವುದಿಲ್ಲ. ಆದುದರಿಂದ ಟೆಂಪರೆನ್ಸ್ ಕಮಿಟಿ ಓಪನ್ ಮಾಡಿ ಅಬ್ಕಾರಿಯಿಂದ ಬರತಕ್ಕ ಹಣದಿಂದ 20 ಪರ್ಸೆಂಟನ್ನು ಇದಕ್ಕಾಗಿಯೇ ಉಪಯೋಗಿಸಬೇಕು. ಪೂಜ್ಯ ಗಾಂಧೀಜಿಯವರು ಏತಕ್ಕೋಸ್ಕರ ದುಡಿದಿದ್ದಾರೆ ಎನ್ನುವುದನ್ನು ಮರೆತ್ತಿದ್ದೇವೆ. ಆದುದರಿಂದ ಗಾಂಧೀಜಿಯವರ ಉದ್ದೇಶವನ್ನು ನೆರವೇರಿಸುವ ಸಲುವಾಗಿ ಈಗ ಟೆಂಪರೆನ್ಸ್ ಕಮಿಟಿ ಮಾಡಬೇಕು ಎಂದು ಇಚ್ಛಿಸುತ್ತೇನೆ.

ಇನ್ನು ವಾರ್ತಾ ಇಲಾಖೆಯನ್ನು ಇಂಡಿಪೆಂಡೆಂಟ್ ಇಲಾಖೆ ಮಾಡಬೇಕು. ಟೂರಿಸ್ಟ್ ವಂಟರ್‌ಗಳಲ್ಲಿ ಸಾಕಷ್ಟು ಅನುಕೂಲತೆಗಳನ್ನು ಒದಗಿಸುವುದರ ಜೊತೆಗೆ ಅವುಗಳಿಗೆ ಸಂಬಂಧಪಟ್ಟ ಬಾಹಿತ್ಯ ಅಥವಾ ಲಿಟರೇಚರ್ ಪಬ್ಲಿಷ್ ಮಾಡಬೇಕು. ಅಲ್ಲದೆ ನಮ್ಮ ಬೆಂಗಳೂರಿಗೆ ಮಾಡರ್ನ್ ವೆಲ್ ಎಕ್ವಿಪ್‌ಡ್ (Modren well equipped) ರೇಡಿಯೋ ಸ್ಟೇಷನ್ ರೇಕು ಎಂದು ಹೇಳುತ್ತೇನೆ. ಈಗ ಅದು ಒಂದು ಹಳೇ ಕಟ್ಟಡದಲ್ಲಿ ಇದೆ. ಇಲ್ಲಿ ಟೀಾಡರ್ನ್ ರೇಡಿಯೋ ಸ್ಟೇಷನ್ ಇಲ್ಲ. ಆದುದರಿಂದ ಮಾಡರ್ನ್ ವೆಲ್ ಎಕ್ವಿಪ್‌ಡ್ ವಿಾಡಿಯೋ ಸ್ಟೇಷನ್‌ಬೇಕು ಎಂದು ಈ ಸಂದರ್ಭದಲ್ಲಿ ಒತ್ತಿ ಹೇಳುತ್ತೇನೆ. ಜೊತೆಗೆ ಟ್ರಿನ್ಸ್‌ಪೋರ್ಟೇಷನ್ ಫೆಸಿಲಿಟಿ ಟೂರಿಸ್ಟ್‌ಗಳಿಗೆ ಹೆಚ್ಚಿನ ರೀತಿ ಕೊಡಬೇಕು. ಅದರಿಂದ ಇದೇಶೀ ವಿನಿಮಯ ಬೇಕಾದಷ್ಟು ಬರುತ್ತದೆ. ಕಾಂಟ್ರಾಕ್ಟ್ ಕ್ಯಾರೇಜಸ್ ಮತ್ತು ಪ್ರೈವೇಟ್ ಸೆಜನ್ಸೀಸ್ ಬೇಕಾದಷ್ಟು ಹಣ ಸಂಪಾದನೆ ಮಾಡುತ್ತಿದ್ದಾರೆ. ಫೈವ್ ಸ್ಟಾರ್ ಹೋಟೆಲ್ ಎದ ಹಾಗೆ ಮಾಡರ್ನ್ ಲಕ್ಸುರಿ ಬಸಸ್ ಏರ್ಪಾಡು ಮಾಡಿದರೆ, ಅದರಿಂದ ಫಾರಿನ್ ತಿಕ್ಸ್‌ಚೇಂಜ್ ಅರ್ನ್ ಮಾಡಬಹುದು. ಆಯಾಯ ಸ್ಥಳಗಳ ಚರಿತ್ರೆಯನ್ನು ಫಾರಿನರ್ಸ್‌ಗೆ ವಳಿಸುವುದಕ್ಕೂ ಮತ್ತು ಹೇಳುವುದಕ್ಕೋಸ್ಕರ ರೆಕಗ್‌ನೈಸ್ ಗೈಡ್ಸನ್ನು ಅಪಾಯಿಂಟ್ ಮಾಡಬೇಕು ಎಂದು ಈ ಸಂದರ್ಭದಲ್ಲಿ ಸಲಹೆ ಮಾಡುತ್ತೇನೆ.

ಹಾಗೇ ಫಿಲಂ ಕಾರ್ಪೊರೇಷನ್ ಇದೆ. ಫಿಲಂ ಕಾರ್ಪೊರೇಷನ್‌ನ್ನು ಚೆನ್ನಾಗಿ ನುರಿತಂಥ ಮತ್ತು ಅರಿತಂಥವರ ಕೈಯಲ್ಲಿ ಕೊಡಬೇಕು. ಅಲ್ಲಿ ಸಾಧ್ಯವಾದಮಟ್ಟಿಗೂ ಮೈಸೂರಿನವರಿಗೆ ಉತ್ತೇಜನ ಕೊಡಬೇಕು ಎಂದು ಹೇಳುತ್ತೇನೆ. ಔಟ್ ಡೋರ್ ಮಿನಿ ಥಿಯೇಟರ್ಸ್‌ಗೆ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ನಮ್ಮಲ್ಲಿ ಈಗ 32 ಪರ್ಸೆಂಟ್ ಲಿಟರೆಸಿ ಇದೆ. ಆಡಿಯೋ ವಿಜುವಲ್ ಎಜುಕೇಷನ್ ಜನರಿಗೆ ಅಫೀಲ್ ಆಗುತ್ತದೆ. ಆದುದರಿಂದ ಸಾಧ್ಯವಾದ ಮಟ್ಟಿಗೂ ಮಿನಿ ಥಿಯೇಟರ್ಸ್ ಜಾಗ್ರತೆ ಕಟ್ಟಿಕೊಡಬೇಕು ಎಂದು ಸಲಹೆ ಮಾಡುತ್ತೇನೆ. ಹಾಗೆಯೇ ಫಿಲಂ ಟ್ರೈನಿಂಗ್ ಅಂಡ್ ಟೆಕ್ನಿಕಲ್ ಇನ್‌ಸ್ಟಿಟ್ಯೂಟ್ (Poona) ಪೂನಾದಲ್ಲಿದ್ದ ಹಾಗೆ, ಮಾಡರ್ನ್ ವೆಲ್ ಎಕ್ವಿಪ್ಡ್ ಇನ್‌ಸ್ಟಿಟ್ಯೂಟ್ ಇಲ್ಲಿ ಒಂದನ್ನು ಮಾಡಬೇಕು. ಈಗ ಅನೇಕ ಜನ ಕನ್ನಡಿಗರು ನೆರೆ ಪ್ರಾಂತಗಳಿಗೆ ಹೋಗಿ ಫಿಲಂಗಳನ್ನು ತೆಗೆಯಬೇಕಾಗಿದೆ. ನಮ್ಮ ಸಂಸ್ಥಾನದಲ್ಲೇ ಮಾಡರ್ನ್ ವೆಲ್ ಎಕ್ವಿಪ್ಡ್ ಥಿಯೇಟರ್ ಇರಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಹಾಗೆಯೇ ಪೊಲೀಸ್ ಇಲಾಖೆ ಬಗ್ಗೆ ನಾಲ್ಕು ಮಾತುಗಳನ್ನು ಹೇಳುತ್ತೇನೆ. ತಮ್ಮೆಲ್ಲರಿಗೂ ಗೊತ್ತಿರುವ ಹಾಗೆ ನಮ್ಮ ದೇಶದಲ್ಲಿ ಮೂರು ಕೋಟಿ ಜನ ಇದ್ದೇವೆ. ಆದರೆ ಕೇವಲ 28,000 ಸಹಸ್ರ ಮಂದಿ ಕಾನ್‌ಸ್ಟೇಬಲ್ಸ್ ಮಾತ್ರ ಇದ್ದಾರೆ, ಇದು ಸಾಲದು. ಇನ್ನೂ ಹೆಚ್ಚಿನ ರೀತಿಯಲ್ಲಿ ಆಗಬೇಕು. ಈಗ ಮೇಲೆ ಇರತಕ್ಕ ಐ. ಜಿ. ಪಿ., ಡಿ. ಐ. ಜಿ. ಮುಂತಾದ ಮೇಲಿನ ಅಧಿಕಾರಿಗಳಿಗೆ ಹೆಚ್ಚಿನ ಸ್ಥಾನಮಾನವಿದೆ. ಆದರೆ ಕಾನ್‌ಸ್ಟೇಬಲ್‌ಗಳಿಗೆ ಬಹಳ ಕಡಿಮೆ ಸ್ಥಾನಮಾನವಿದೆ ಮತ್ತು ಸಂಬಳವೂ ಸಾಲದು. ಕಾನ್‌ಸ್ಟೇಬಲರಿಯನ್ನು ಹೆಚ್ಚಿನ ರೀತಿಯಲ್ಲಿ ಇನ್‌ಕ್ರೀಸ್ ಮಾಡಬೇಕೆಂದು ಸಲಹೆ ಮಾಡುತ್ತೇನೆ. ಜೊತೆಗೆ ಈಗಿರತಕ್ಕ ಮಿನಿಸ್ಟೀರಿಯಲ್ ಸ್ಟಾಫ್ (Ministerial staff) ಸಾಲದು. ಅವರಿಗೆ ಕೆಲಸ ಜಾಸ್ತಿ ಇದೆ. ಆದುದರಿಂದ ಮಿನಿಸ್ಟೀರಿಯಲ್ ಸ್ಟಾಫ್‌ನ್ನು ಹೆಚ್ಚಿಸಬೇಕು ಎಂದು ಹೇಳುತ್ತೇನೆ. ಕಾನ್‌ಸ್ಟೇಬಲ್‌ಗಳನ್ನು ರೆಕ್ರೂಟ್ ಮಾಡುವ ಕಾಲದಲ್ಲಿ ಹಿಂದೆ ಫಿಸಿಕಲಿ ಫಿಟ್ ಆಗಿರುವವರನ್ನು ತೆಗೆದುಕೊಳ್ಳುತ್ತಿದ್ದರು. ಇನ್ನು ಮುಂದೆ ಎಸ್. ಎಸ್. ಎಲ್. ಸಿ. ಮಿನಿಮಂ ಕ್ವಾಲಿಫಿಕೇಷನ್ ಇದ್ದವರನ್ನು ಮಾತ್ರ ರೆಕ್ರೂಟ್ ಮಾಡಬೇಕು ಎಂದು ಸಲಹೆ ಮಾಡುತ್ತೇನೆ. 1971 ರಿಂದೀಚೆಗೆ ಹೈಯ್ಯರ್ ಆಫೀಸರ್ಸ್‌ಗಳಿಗೆ ಮಾತ್ರ ಯೂನಿಫಾರಮ್ಸ್ ಅಲೋಯನ್ಸ್ ಕೊಡುತ್ತಿದ್ದಾರೆ. ಆದರೆ ಬಡ ಪೊಲೀಸ್ ಅಧಿಕಾರಿಗಳಿಗೆ ಅದನ್ನು ಕೊಡುತ್ತಾ ಇಲ್ಲ. ಇವರಿಗೆ ಎರಡು ಜೊತೆ ಬಟ್ಟೆಗಳನ್ನು ಮಾತ್ರ ಕೊಡುತ್ತಾರೆ. ಅದು ಸಾಲದು. ಬ್ರಿಟಿಷರ ಕಾಲದಲ್ಲಿ ಯೂನಿಫಾರ್ಂಗೆ ಬಹಳ ಪ್ರಾಮುಖ್ಯತೆ ಕೊಡುತ್ತಿದ್ದರು. ಪರೇಡಿಗೆ ಪ್ರಾಮುಖ್ಯತೆ ಕೊಡುತ್ತಿದ್ದರು. ಆದುದರಿಂದ ಯೂನಿಫಾರಂನ್ನು ತಾವು ಎರಡಕ್ಕೆ ಬದಲು ನಾಲ್ಕು ಕೊಡಬೇಕು ಎಂದು ಮತ್ತೊಮ್ಮೆ ಹೇಳುತ್ತೇನೆ. ಡೈರೆಕ್ಟ್ ರೆಕ್ರೂಟ್‌ಮೆಂಟ್ ಹಿಂದಿನಿಂದಲೂ ಮಾಡುತ್ತಿದ್ದಾರೆ. ಸಬ್ ಇನ್‌ಸ್ಪೆಕ್ಟರ್ಸ್ ಪೋಸ್ಟ್ 66½ ಪರ್ಸೆಂಟ್, ದಫೇದಾರ್ಸ್ ಪೋಸ್ಟ್ 33½ ಪರ್ಸೆಂಟ್ ಪ್ರಮೋಷನ್ ಕೊಡಬೇಕು ಎಂದು 1958 ರಲ್ಲಿ ರೂಲ್ಸ್ ಮಾಡಿದ್ದಾರೆ. ಆದರೂ ಸಹ ಕೇವಲ 5 ಪರ್ಸೆಂಟ್ ಕೊಡುತ್ತಿದ್ದಾರೆ. ಇದು ಅನ್ಯಾಯ ಎಂದು ಹೇಳಲು ಇಚ್ಛೆಪಡುತ್ತೇನೆ. ಇದನ್ನು ಸರಿಪಡಿಸಬೇಕು. ಪೊಲೀಸ್ ಡಾಗ್ ಸ್ಕ್ವೇಡ್ ಬೆಂಗಳೂರಿನಲ್ಲಿದೆ. ಗ್ರಾಮಾಂತರ ಪ್ರದೇಶದಲ್ಲಿ ಇಲ್ಲ. ಮರ್ಡರ್ಸ್, ಕ್ರೈಮ್ಸ್ ಡಿಟೆಕ್ಟ್ ಮಾಡಬೇಕಾದರೆ ಇದು ಪ್ರತಿಯೊಂದು ಜಿಲ್ಲೆಯಲ್ಲೂ ಒಂದೊಂದು Squad ಇರಬೇಕು ಎಂದು ಹೇಳುತ್ತೇನೆ. ಮದ್ರಾಸ್ ಪ್ರಾಂತದ ವೆಲ್ಲೂರಿನಲ್ಲಿರುವ ಪೊಲೀಸ್ ಟ್ರೈನಿಂಗ್ ಸ್ಕೂಲು ಬಹಳ ಎಫಿಶಿಯಂಟಾಗಿ ಕೆಲಸಮಾಡುತ್ತಾ ಇದೆ. ಅದರಂತೆ ನಮ್ಮಲ್ಲಿರುವ Mandya ಪೊಲೀಸ್ ಟ್ರೈನಿಂಗ್ ಸ್ಕೂಲು ಇನ್ನೂ ಹೆಚ್ಚಿನ ರೀತಿಯಲ್ಲಿ ಕೆಲಸಮಾಡಿ ನಮ್ಮ ಪೊಲೀಸರ ಸ್ಟಾಂಡರ್ಡ್ ಇನ್‌ಕ್ರೀಸ್ ಮಾಡಬೇಕು ಎಂದು ಹೇಳುತ್ತೇನೆ. ವಿ ರೆಸ್ಪೆಕ್ಟ್ ದೋಸ್ ಹು ಒಬೇ ಲಾ ಎಂದು ಬೋರ್ಡ್ ಹಾಕಿರುತ್ತಾರೆ.

"We respect those who obey law and we protect those who obey law" ಎಂದು ಕೂಡ ಬೋರ್ಡ್ ಹಾಕಬೇಕು. ಇಲ್ಲಿ (fleet of vehicles) ಫ್ಲೀಟ್ ಆಫ್ ವೆಹಿಕಲ್ಸ್ ಇದೆ. ಅದಕ್ಕಾಗಿ ಒಂದು ಸೆಂಟ್ರಲ್ ಇಂಡಸ್ಟ್ರಿಯಲ್ repair ವರ್ಕ್‌ಶಾಪ್ ಇರಬೇಕು ಎಂದು ಹೇಳುತ್ತೇನೆ.

ಇದರ ಜೊತೆಗೆ ಆಲ್ ಇಂಡಿಯಾ ಪೊಲೀಸ್ ಗೇಮ್ಸ್ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ಅಂದರೆ ಆಲ್ ವರ್ಕ್ ಅಂಡ್ ನೊ ಪ್ಲೇ, ಮೇಕ್ಸ್‌ಜಾಕ್ ಎ ಡಲ್ ಬಾಯ್ ಎಂದು ಒಂದು English ಗಾದೆ ಇದೆ. All work and no play makes Jack a dull boy. ಒಟ್ಟಿನಲ್ಲಿ ಹಿಂದೆ ಮೈಸೂರಿನ ಪೊಲೀಸರಿಗೆ ಗೇಮ್ಸ್‌ನಲ್ಲಿ ಒಳ್ಳೆಯ ಹೆಸರು ಇತ್ತು. I had the privilege of training one or two All India Champions in Games also. ಆದುದರಿಂದ ಈ ಗೇಮ್ಸ್‌ಗೆ, ಹೆಚ್ಚಿನ ರೀತಿಯಲ್ಲಿ ಉತ್ತೇಜನ ಕೊಡಬೇಕೆಂದು ಹೇಳುತ್ತೇನೆ. (Scotlandyard) ಸ್ಕಾಟ್‌ಲೆಂಡ್ ಮುಂತಾದ ಪರದೇಶಗಳಿಗೆ ಪೊಲೀಸರನ್ನು ಹೆಚ್ಚಿನ ರೀತಿಯಲ್ಲಿ ಡೆಪ್ಯುಟೇಷನ್ ಕಳಿಸಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಪಬ್ಲಿಕ್ ಡ್ಯೂಟಿ ಮಾಡುವಾಗ ಆತನು ಸತ್ತುಹೋದರೆ ಆತನ ಮಕ್ಕಳಿಗೆ ಸ್ಕಾಲರ್‌ಶಿಪ್ ಮತ್ತು ಜಮೀನು ಕೊಡಬೇಕು ಎಂದು ಸಲಹೆ ಮಾಡುತ್ತೇನೆ. ಗಲಾಟೆಯ ಕಾಲದಲ್ಲಿ ಮೊದಲು ಆತ ಸಾಯುತ್ತಾನೆ. ಮುಖ್ಯವಾಗಿ ಏಟು ತಿನ್ನುವವನು ಪೊಲೀಸ್‌ನವ. ಆದುದರಿಂದ ಆತನ ಕುಟುಂಬದವರಿಗೆ ಹಣ, ಜಮೀನು ಮತ್ತು ಆತನ ಮಕ್ಕಳಿಗೆ ಸ್ಕಾಲರ್‌ಶಿಪ್ ಕೊಡಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. (Reserve) ರಿಜರ್ವ್ ಪೊಲೀಸ್‌ನಲ್ಲಿ ಎಂ. ಎ. ಆರ್. ಪಿ, ಸಿ. ಎ. ಆರ್, ಮತ್ತು ಸಿಟಿ ಪೊಲೀಸ್ ಎಂದು 3 ತರಹ ಇದೆ. ಇವರಿಗೆಲ್ಲರಿಗೂ ಯೂನಿಫಾರಂ ಸ್ಕೇಲ್ ಇರಬೇಕು. ಹೋಂ ಗಾರ್ಡ್ಸ್‌ಗೆ ಹೊರಗಿನವರನ್ನು ತೆಗೆದುಕೊಂಡು ಬರುತ್ತಾರೆ. ಅದು ಕೂಡದು. ನಮ್ಮ ಇಲಾಖೆಯಲ್ಲಿರತಕ್ಕ ಅಧಿಕಾರಿಗಳಿಗೆ ಎನ್‌ಕರೇಜ್ ಮಾಡಬೇಕು ಎಂದು ಹೇಳುತ್ತೇನೆ. ಇನ್ನೂ ಹೆಚ್ಚು ವಿಷಯಗಳನ್ನು ಹೇಳಬೇಕೆಂದು ಇದ್ದೆ, ಆದರೆ ಕಾಲಾವಕಾಶವಿಲ್ಲದೇ ಇರುವುದರಿಂದ ಅಧ್ಯಕ್ಷರ ಆಜ್ಞೆಮೇರೆಗೆ ಈ ನಾಲ್ಕು ಮಾತುಗಳನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಜೈ ಕರ್ನಾಟಕ.

ಶ್ರೀ ಎಸ್. ಬಂಗಾರಪ್ಪ (ಸೊರಬ) :—ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳು ಮಂಡಿಸಿರತಕ್ಕಂಥ ಸಾಮಾನ್ಯ ಆಡಳಿತ, ಅಬ್ಕಾರಿ, ಪೊಲೀಸು, ಜೈಲು, ಇನ್‌ಫರ್ಮೇಷನ್ ಡಿಪಾರ್ಟ್‌ಮೆಂಟ್ ಈ ವಿಷಯಗಳನ್ನು ಕುರಿತು ನಾನು ವಿರೋಧ ಮಾಡಿ ಮಾತನಾಡುವುದಕ್ಕೆ ಇಚ್ಛೆಪಡುತ್ತೇನೆ. ನಾನು ನನ್ನ ಭಾಷಣದಲ್ಲಿ ಎರಡು ಪ್ರಾಮುಖ್ಯವಾದ ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕೆ ಇಚ್ಛೆಪಡುತ್ತೇನೆ.

ಮೊಟ್ಟಮೊದಲನೆಯದಾಗಿ ಎಕ್ಸೈಜ್ ಮತ್ತು ಅಬ್ಕಾರಿ ವಿಷಯದಲ್ಲಿ ಹೇಳುತ್ತೇನೆ. ಮಾನ್ಯ ಉಪಾಧ್ಯಕ್ಷರೇ, ತಮಗೆ ಗೊತ್ತಿರುವ ಹಾಗೆ ಮಾನ್ಯ ಮುಖ್ಯಮಂತ್ರಿಗಳಾದಿಯಾಗಿ ಅವರು ಪಕ್ಷದ ಸದಸ್ಯರನ್ನೂ ಸೇರಿಸಿಕೊಂಡು ಹೇಳಬೇಕಾದರೆ ಹಿಂದೆ ಅವರು ಈ ಕಡೆ ಕೂತಿದ್ದಾಗ ಹಿಂದಿನ ಸರ್ಕಾರದ ಮೇಲೆ ಏನು ಆಪಾದನೆ ಮಾಡುತ್ತಾ ಇದ್ದರು ಎಂದರೆ ಪ್ರೈವೇಟ್ ಸೆಕ್ಟಾರ್‌ನಲ್ಲಿರತಕ್ಕಂಥ ಕೆಲವು ಡಿಸ್ಟಲರೀಸ್ ಅಂಡ್ ಬ್ರೆವರೀಸ್ ವಿಷಯದಲ್ಲಿ ನೀವು ಪಬ್ಲಿಕ್ ಸೆಕ್ಟಾರ್ಸ್‌ನ್ನು ಮರೆತು ಪ್ರೈವೇಟ್ ಸೆಕ್ಟಾರ್ಸ್‌ಗೆ ಲೈಸೆನ್ಸನ್ನು ಕೊಡುತ್ತಾ ಇದ್ದೀರಿ ಎಂದು ಆಪಾದನೆ ಮಾಡುತ್ತಾ ಇದ್ದರು. ಈ ವಿಷಯದಲ್ಲಿ ತಮ್ಮನ್ನು ಕೇಳಬೇಕಾದರೆ ತಾವು ಹಿಂದಿನ ಸರ್ಕಾರದ ನೀತಿ ನಿಯಮಗಳನ್ನು ಬಿಟ್ಟು ಬೇರೆ ಯಾವ ನೀತಿ ನಿಯಮಗಳನ್ನು ತಂದಿದ್ದೀರಿ, ಎಂದು ಕೇಳುತ್ತೇನೆ. ಖೋಡೇಸ್ ಡಿಸ್ಟಲರೀಸ್ ಅಂಡ್ ಬ್ರೆವರೀಸ್‌ಗೆ ಲೈಸೆನ್ಸ್ ಕೊಟ್ಟಿರುವುದು ಅದು ಯಾವ ರೀತಿ ಬೆಳವಣಿಗೆಯಾಗಿದೆ, ಅದು ಯಾವ ಕಾನೂನಿನ ಚೌಕಟ್ಟಿನ ಅಡಿಯಲ್ಲಿ

ಇದೆ ಮತ್ತು ಅದು ಯಾವ ರಕ್ಷಣೆಯಲ್ಲಿದೆ ಮತ್ತು ಯಾವ ಸರ್ಕಾರದ ರಕ್ಷಣೆಯಲ್ಲಿದೆ ಇದು ಎಲ್ಲರಿಗೂ ಗೊತ್ತಿರತಕ್ಕಂಥ ವಿಚಾರ. ನಾನು ತಮ್ಮಲ್ಲಿ ಇನ್ನೊಂದು ವಿಷಯವನ್ನು ಪ್ರಶ್ನೆ ಮೂಲಕ ಕೇಳುತ್ತೇನೆ. ಪ್ರೈವೇಟ್ ಸೆಕ್ಟಾರ್‌ನಲ್ಲಿರತಕ್ಕಂಥ ಡಿಸ್ಟಲರೀಸ್ ಅಂಡ್ ಬ್ರೆವರೀಸ್‌ಗೆ ಮಾನ್ಯತೆ ಮಾಡಬಾರದು, ಪಬ್ಲಿಕ್ ಸೆಕ್ಟಾರ್‌ನಲ್ಲಿರುವಂಥಾದ್ದಕ್ಕೆ ಹೆಚ್ಚು ಗಮನ ಕೊಡಬೇಕು ಎಂದು ತಮ್ಮ ಬಾಯಿನಿಂದಲೇ ಕೇಳಿರುವುದು ನನಗೆ ನೆನಪು ಇದೆ. ಈ ಬಗ್ಗೆ ಖೋಡೇಸ್ ಡಿಸ್ಟಲರೀಸ್ ಅಂಡ್ ಬ್ರೆವರೀಸ್‌ಗೆ ಲೈಸೆನ್ಸ್ ಕೊಟ್ಟಿರುವುದಲ್ಲದೆ ನಂದಿ ಡಿಸ್ಟಲರೀಸ್ ಅಂಡ್ ಬ್ರೆವರೀಸ್‌ಗೆ ಲೈಸೆನ್ಸ್ ಕೊಟ್ಟಿದ್ದೀರಿ. ಇದನ್ನು ಯಾವ ಆಧಾರದ ಮೇಲೆ ಕೊಟ್ಟಿದ್ದೀರಿ ಎಂದರೆ ಆ ಬಗ್ಗೆ ಹೇಳುತ್ತೇನೆ. ಇದಕ್ಕೆ ಲೈಸೆನ್ಸ್ ತೆಗೆದುಕೊಳ್ಳಬೇಕಾದರೆ 7,500 ರೂಪಾಯಿ ಕಟ್ಟಿ ಒಂದು ಅಪ್ಲಿಕೇಷನ್ ಹಾಕುತ್ತಾರೆ. ಅದನ್ನು ಏನು ಮಾಡಿದ್ದೀರಿ ಎಂದರೆ ಅಪ್ಲಿಕೇಷನ್ ನಮೂನೆಯನ್ನು 25,000 ರೂಪಾಯಿಗೆ ಏರಿಸಿ ಬೇರೆಯವರು ಅಪ್ಲಿಕೇಷನ್ ಏನು ಹಾಕಿದ್ದರೋ ಅವರು ವಿತ್‌ಡ್ರಾ ಮಾಡಿಕೊಳ್ಳುವ ಹಾಗೆ ಮಾಡಿ ಇವರಿಗೆ ಕೊಟ್ಟಿದ್ದೀರಿ. ಈ ರೀತಿ ಯಾಗಿ ನಿಮ್ಮ ಇಲಾಖೆಯವರು ಮಾಡಿದ್ದು ದಾಖಲೆಯಲ್ಲಿ ಇದೆ. ಖೋಡೇಸ್ ಡಿಸ್ಟಲರೀಸ್ ಮತ್ತು ಬ್ರೆವರೀಸ್ ಬಗ್ಗೆ ಹೇಳುವುದಿಲ್ಲ. ಆ ಬಗ್ಗೆ ತಮಗೆಲ್ಲಾ ಗೊತ್ತಿದೆ. ಆದರೆ ನಾನು ಈ ನಂದಿ ಡಿಸ್ಟಲರೀಸ್ ಅಂಡ್ ಬ್ರೆವರೀಸ್ ಬಗ್ಗೆ ಹೇಳುತ್ತೇನೆ. ಇದರಲ್ಲಿ ಯಾರು ಯಾರು ಸೇರಿದ್ದಾರೆ ಎನ್ನುವುದನ್ನು ಹೇಳುತ್ತೇನೆ. ಶ್ರೀ ಎಂ.ಡಿ. ಶಿವಸಂಜಪ್ಪ, ಅವರು ಹಿಂದೆ ಕಾಮರ್ಸ್ ಅಂಡ್ ಇಂಡ್ರಸ್ಟ್ರೀಸ್‌ನಲ್ಲಿ ಎಕ್ಸ್‌ಸೆಕ್ರೆಟರಿ ಆಗಿದ್ದರು, ಅವರ ಹೆಸರು ಇದೆ. ಇನ್ನೊಬ್ಬರು ಶ್ರೀ ಟಿ. ಶಾಮಣ್ಣ ಅವರು ಒಬ್ಬರು ರಿಟೈರ್ಡ್ ಅಫಿಷಿಯಲ್, ಅವರುಗಳು ಇದರಲ್ಲಿ ಸೇರಿದ್ದಾರೆ. ಈ ನಂದಿ ಡಿಸ್ಟಲರೀಸ್ ಅಂಡ್ ಬ್ರೆವರೀಸ್‌ಗೆ ಹಿಂದೆ ಎಕ್ಸೈಜ್ ಕಮೀಷನರ್ ಆಗಿದ್ದ ಈಗ ಡಿವಿಷನಲ್ ಕಮೀಷನರ್ ಆಗಿರುವ ಡಿ. ಬಾಲರಾಜ್ ಅವರು ಇದರಲ್ಲಿ ಷೇರು ಹಾಕಿದ್ದಾರೆ. ಎಂದು ತಿಳಿದುಬಂದಿದೆ. ಇದಕ್ಕೆ ಲೈಸೆನ್ಸ್ ಕೊಟ್ಟಿದ್ದು ಶ್ರೀ ಬಾಲರಾಜ್ ಅವರೇ. ಅವರು ಪ್ರೊಬೇಷನರಿ ಆಫೀಸರಾಗಿ 200 ರೂಪಾಯಿ ಸಂಬಳದ ಮೇಲೆ ಸೇರಿದ್ದರು. ಅವರು ಸಾಮಾನ್ಯ ಅಧಿಕಾರಿ ಎಂದು ತಿಳಿದಿದ್ದೇನೆ, ಅವರ ಚರಿತ್ರೆ ಬಹಳ ದೊಡ್ಡ ಚರಿತ್ರೆ. ಈವೊತ್ತಿನ ದಿವಸ ಅವರ ಹತ್ತಿರ ಎಷ್ಟೊಂದು ಪ್ರಾಪರ್ಟೀಸ್ ಇದೆ ಎಂದರೆ ಸಾಕಷ್ಟು ಪ್ರಾಪರ್ಟೀಸ್‌ನ್ನು ಮಾಡಿಕೊಂಡಿದ್ದಾರೆ. ಅವರು ಮೈಸೂರು, ಬೆಂಗಳೂರು ಮತ್ತು ಪಾಂಡಿಚೆರಿಯಲ್ಲಿ ಬೇಕಾದಷ್ಟು ಪ್ರಾಪರ್ಟೀಸ್‌ನ್ನು ಕೊಂಡುಕೊಂಡಿದ್ದಾರೆ. ಅದು ಅವರ ಒಬ್ಬರ ಹೆಸರಿನಲ್ಲೇ ಇಲ್ಲ. ಅವರ ಮಕ್ಕಳು, ಅವರ ಹೆಂಡತಿ. ಅವರ ಮಾವ ಇವರುಗಳ ಹೆಸರಿನಲ್ಲಿ ಇದೆ. ಅವರು ಈ ಪ್ರಾಪರ್ಟೀಸನ್ನು ಲೀಸ್‌ಗೆ ಕೊಡುತ್ತಿದ್ದಾರೆ. ಇದನ್ನು ಪರಿಶೀಲನೆ ಮಾಡ ಬೇಕು. ಈವೊತ್ತು ಅವರ ಪ್ರಾಪರ್ಟಿ ಸುಮಾರು 50 ಲಕ್ಷದ ಮೇಲೆ ಇದೆ. ಈವೊತ್ತಿನ ದಿವಸ ನಾನು ಛಾಲೇಂಜ್ ಮಾಡುತ್ತೇನೆ. ಈ ಬಗ್ಗೆ ಎನ್‌ಕ್ವೈರಿ ಮಾಡಿ. ನಾನು ಆ ಬಗ್ಗೆ ಡಾಕ್ಯುಮೆಂಟ್ಸ್ ಕೊಟ್ಟು ಪ್ರೂವ್ ಮಾಡುತ್ತೇನೆ. ಆದುದರಿಂದ ಇದಕ್ಕೆ ಒಂದು ಎನ್‌ಕ್ವೈರಿ ಕಮೀಷನ್ ನೇಮಕ ಮಾಡಬೇಕು ಎಂದು ಹೇಳುತ್ತೇನೆ. ಒಬ್ಬ ಅಫಿಷಿಯಲ್ ಹಿಂದೆ ಎಕ್ಸೈಜ್ ಕಮೀಷನರ್ ಆಗಿದ್ದವರು ಸುಮಾರು 50 ಲಕ್ಷದ ಮೇಲೆ ಪ್ರಾಪರ್ಟಿ ಮಾಡಿಕೊಂಡಿರಬೇಕಾದರೆ ಈ ಬಗ್ಗೆ ಎನ್‌ಕ್ವೈರಿ ಆಗಲೇಬೇಕು. ಅವರು ಪ್ರಾಪರ್ಟಿ ಮಾಡಿಕೊಂಡಿರುವುದನ್ನು ಹೇಳುತ್ತೇನೆ :—

(1) ಬೆಂಗಳೂರಿನ ಪ್ಯಾಲೇಸ್ ರೋಡಿನಲ್ಲಿ ಎರಡು ಮಲ್ಟಿ ಸ್ಟೋರೇಡ್ ಬಿಲ್ಡಿಂಗ್ ಇದೆ. ಒಂದು ದೊಡ್ಡ ಸೈಟಿನಲ್ಲಿ ಕಟ್ಟಿದ್ದಾರೆ.

(2) ಇನ್ನೊಂದು ಕುಕ್ಸ್ ಟೌನ್‌ನಲ್ಲಿ ಒಂದು ಡ್ವೆಲಿಂಗ್ ಹೌಸ್, ಮತ್ತೊಂದು ಮನೆ ಇದೆ.

(3) ಮೈಸೂರಿನಲ್ಲಿ ಲಲಿತಮಹಲ್‌ನಲ್ಲಿ ಎರಡು ಎಕರೆ ಅರ್ಬನ್ ಸೈಟ್ಸ್ ಲ್ಯಾಂಡ್ ಇದೆ.

(4) ಪಾಂಡಿಚೆರಿಯಲ್ಲಿ ವಿಪರೀತ ಪ್ರಾಪರ್ಟೀಸ್ ಇದೆ. ಮತ್ತು

(5) ನಂದಿ ಡಿಸ್ಟಲರೀಸ್ ಅಂಡ್ ಬ್ರಿವರೀಸ್‌ನಲ್ಲಿ ಷೇರ್ಸ್ ಇದೆ.

ಅವರ ಪ್ರಾಪರ್ಟಿಯನ್ನು ಈಗ ಲೆಕ್ಕಿ ಹಾಕಿದರೆ ಸುಮಾರು ಮುಕ್ಕಾಲು ಕೋಟಿ ರೂಪಾಯಿ ಗಿಂತಲೂ ಜಾಸ್ತಿ ಇದೆ. ಆದುದರಿಂದ ಈ ಬಗ್ಗೆ ವಿಚಾರಣೆ ಆಗಬೇಕು. ಈವೊತ್ತಿನ ದಿವಸ ಷ್ಯಾಂಕಿ ರೋಡಿನಲ್ಲಿರತಕ್ಕಂಥ ಪ್ರಾಪರ್ಟೀಯನ್ನು 8 ಲಕ್ಷಕ್ಕೆ ಕೊಂಡುಕೊಂಡಿದ್ದಾರೆ. ಆದರೆ ಸೇಲ್‌ಡೀಡ್‌ನ್ನು 45 ಸಾವಿರಕ್ಕೆ ಬರೆಸಿದ್ದಾರೆ ಎಂದು ಕೇಳಿದ್ದೇನೆ. ಇದನ್ನು ವೆರಿಫೈ ಮಾಡಿ ಎನ್‌ಕ್ವೈರಿ ಮಾಡುವುದು ಒಳ್ಳೆಯದು ಎಂದು ಹೇಳುತ್ತೇನೆ. ಈ ಸಮಾಜವಾದದಲ್ಲಿ ಮುಖ್ಯಮಂತ್ರಿಗಳಿಗೆ ನಂಬಿಕೆ ಇದ್ದರೆ ಈ ಆಫೀಸರನ್ನು ಹಿಡಿತದಲ್ಲಿಡಬೇಕು. ಮತ್ತು ಈ ಬಗ್ಗೆ ಯಾವ ರೀತಿ ವಿಚಾರ ಮಾಡುತ್ತೀರಿ ಎನ್ನುವುದನ್ನು ತಮ್ಮ ಉತ್ತರದಲ್ಲಿ ಹೇಳಬೇಕು ಎಂದು ಹೇಳುತ್ತೇನೆ.

ಇನ್ನು ಸೇಂದಿಯಲ್ಲಿ ಕ್ಲೋರಲ್ ಹೈಡ್ರೇಟ್ ಉಪಯೋಗಿಸಿ ಮಾರುತ್ತಿದ್ದಾರೆ ಎಂದು ಕೇಳಿದ್ದೇನೆ. ಇದರ ಬಗ್ಗೆ ಪತ್ರಿಕೆಯಲ್ಲೂ ಕೂಡ ಬಂದಿದೆ. ಅದು ಇಂಡಿಯಾಕ್ಕೆ ಒಂದು ತಿಂಗಳಿಗೆ ಒಂದು ಟನ್ ಬೇಕಾಗುತ್ತದೆ ಎಂದು ಅಂದಾಜು ಮಾಡಿದ್ದಾರೆ. ಹಾಗಿದ್ದರೂ ಕೂಡ ಶ್ರೀ ಬಾಲ ರಾಜ್ ಅವರು ಎಕ್ಸೈಜ್ ಕಮೀಷನರ್ ಆಗಿದ್ದಾರೆ, ಎಷ್ಟು ಬೇಕಾದರೂ ತರಿಸಿಕೊಂಡು ಮಾರು ವುದಕ್ಕೆ ಪರ್ಮಿಟ್ಸ್ ಕೊಟ್ಟಿದ್ದಾರೆ. ಈ ಬಗ್ಗೆ ಡಾಕ್ಟರ್ ಅಡ್ವೈಸ್ ಮಾಡಿದ್ದಾರೆ. ಇದನ್ನು ಅದರಲ್ಲಿ ಎಷ್ಟುಮಟ್ಟಿಗೆ ಉಪಯೋಗಿಸಬೇಕೋ ಅಷ್ಟರಮಟ್ಟಿಗೆ ಉಪಯೋಗಿಸಬೇಕು. ಜಾಸ್ತಿ ಹಾಕಬಾರದು, ಜಾಸ್ತಿ ಹಾಕಿದರೆ ಹಾನಿಯಾಗುತ್ತದೆ ಎಂದು. ಆದರೂ ಕೂಡ ಇವರು ಡಾಕ್ಟರ್ ಅಡ್ವೈಸ್‌ನ್ನು ಬದಿಗೊತ್ತಿ ಸಾವಿರಾರು ಟನ್‌ಗಳನ್ನು ಸೇಂದಿಗೆ ಸೇರಿಸಿ ಮಾರಾಟ ಮಾಡುತ್ತಿದ್ದಾರೆ.

ಇಷ್ಟು ಮಾಡಿದಮೇಲೆ ಏನಾಯಿತು ಎಂದರೆ ಜನರ ಆರೋಗ್ಯ ಹಾಳಾಯಿತು, ಸೇಲ್ಸ್ ಜಾಸ್ತಿಯಾಯಿತು. ಕ್ಲೋರಲ್ ಹೈಡ್ರೇಟ್ ವಿಷಯ ಏಕೆ ಹೇಳುತ್ತಿದ್ದೇನೆಂದರೆ ಬೆಂಗಳೂರಿ ನಲ್ಲಿರುವ ಎಕ್ಸೈಜ್ ಕಂಟ್ರಾಕ್ಟರುಗಳು ಮತ್ತು ದೊಡ್ಡ ಕಂಟ್ರಾಕ್ಟರುಗಳಿಗೆ ಶ್ರೀ ಬಾಲರಾಜ್ ಅವರೇ ಇದಕ್ಕೆ ಪರ್ಮಿಟ್‌ಗಳನ್ನು ಕೊಟ್ಟಿದ್ದಾರೆ. ಅವರೂ ಇವರೂ ಸೇರಿಕೊಂಡು ಕಂಪೆನಿ ಗಳನ್ನು ನಡೆಸುತ್ತಿದ್ದಾರೆ. ಇದರ ಬಗ್ಗೆ ಕೂಡ ಕೂಲಂಕಷವಾಗಿ ವಿಚಾರಣೆ ಮಾಡಬೇಕು.

ಬಾಲರಾಜ್ ಅವರ ಪ್ರಾಪರ್ಟಿ ಕಥೆ ಇಷ್ಟಕ್ಕೇ ಮುಗಿಯಲಿಲ್ಲ. ಅವರು ಫಾರಿನ್ ಕಂಟ್ರೀಸ್‌ಗೆ ಪ್ರತಿ ವರ್ಷ ಹೋಗುತ್ತಿದ್ದಾರೆ. ಅವರು ಕ್ರಿಶ್ಚಿಯನ್ ಕಾನ್‌ಫರೆನ್ಸ್‌ಗಳಿಗೆ ಹೋಗುವ ನೆಪದಲ್ಲಿ ಫಾರಿನ್ ಟೂರ್ ಮಾಡಿದ್ದಾರೆ. ಅವರು ಸ್ಪೆಷಲ್ಲಾಗಿ ಸ್ವಿಟ್ಜರ್‌ಲೆಂಡ್‌ಗೆ ಹೋಗಿದ್ದಾರೆ. ಅವರು ಅಲ್ಲಿನ ಬ್ಯಾಂಕಿನಲ್ಲಿ ಹಣವನ್ನು ಇಟ್ಟಿದ್ದಾರೆಂದು ಕೇಳಿದ್ದೇನೆ. ಅವರು ಇಲ್ಲಿಂದ ಹೋಗಬೇಕಾದರೆ ಅವರ ಹೆಂಡತಿ ಮೈಮೇಲೆ ಎಲ್ಲ ಆಭರಣಗಳನ್ನೂ ಹಾಕಿಕೊಂಡು ಹೋಗಿ, ಹಣವನ್ನು ಮತ್ತು ಒಡವೆಯನ್ನು ಸ್ವಿಟ್ಜರ್‌ಲೆಂಡಿನ ಬ್ಯಾಂಕಿನಲ್ಲಿಟ್ಟು, ವಾಪಸು ಬಂದಾಗ ಕಸ್ಟಮ್ಸ್ ಅಧಿಕಾರಿಗಳಲ್ಲಿ ಆಭರಣಗಳೆಲ್ಲ ಕಳುವಾಯಿತು ಎಂದು ಕೊಟ್ಟಿರುವ ಹೇಳಿಕೆ ಗಳು ರಿಕಾರ್ಡ್ ಆಗಿವೆ. ಅವರು ಎಷ್ಟು ಸಾರಿ ರಾಷ್ಟ್ರದಿಂದ ಹೊರಗೆ ಹೋಗಿದ್ದಾರೆ, ಇದಕ್ಕೆಲ್ಲ ವಿದೇಶೀ ವಿನಿಮಯವನ್ನು ಯಾರು ಕೊಟ್ಟರು, ಎಷ್ಟು ಕೊಟ್ಟರು ಎನ್ನುವುದರ ಬಗ್ಗೆ ಸಂಪೂರ್ಣವಾಗಿ ತನಿಖೆಯಾಗಬೇಕು ಎನ್ನುವ ವಿಷಯವನ್ನು ನಾನು ತಮ್ಮ ಮೂಲಕ ಹೇಳುತ್ತಿದ್ದೇನೆ.

ನಂದಿ ಬ್ರೂಯರಿಸಿಸ್ ವಿಷಯದಲ್ಲಿ ಹೇಳಬೇಕಾದರೆ ಮೊಲ್ಯಾಸಸ್ ಷಾರ್ಟೇಜ್ ಇದ್ದರೂ ಕೂಡ, ಅದು ಗೊತ್ತಿದ್ದರೂ ಕೂಡ ನಂದಿ ಬ್ರೂಯರೀಸ್ ಮತ್ತು ಖೋಡೆ ಬ್ರೂಯರೀಸ್ ಇವರಿಗೆ ಹೆಚ್ಚು ಕೊಟ್ಟಿದ್ದಾರೆ. ಪ್ರೈವೇಟ್ ಕಂಪೆನಿಗಳವರಿಗೆ ಜಾಸ್ತಿ ಕೊಟ್ಟಿದ್ದಾರೆ. ನಂದಿ

ಬ್ರೂಯರೀಸ್ ಲೈಸೆನ್ಸಿಗೆ ಅಪ್ಲೈ ಮಾಡಿದ್ದಾರೆ. ಅರಕ್ ತಯಾರು ಮಾಡಿ ಸಪ್ಲೈ ಮಾಡುವುದಕ್ಕಾಗಿ ಲೈಸೆನ್ಸ್ ಬೇಕು ಎಂದು ಕೇಳಿದ್ದಾರೆ. ಅದು ಮುಖ್ಯಮಂತ್ರಿಗಳ ಮುಂದೆ ಇದೆ ಎಂದು ಕೇಳಿದ್ದೇನೆ. ಪ್ರೈವೇಟ್ ಸೆಕ್ಟಾರಿನವರಿಗೆ ಅರಕ್ ಮತ್ತು ಇತರ ಪಾನೀಯಗಳನ್ನು ತಯಾರು ಮಾಡಿ ಸರಬರಾಜು ಮಾಡುವುದಕ್ಕೆ ಲೈಸೆನ್ಸ್ ಕೊಡಲು ಕೇಳಿದ್ದಾರೆ ಮತ್ತು ಇನ್ನು ಮೂರು ನಾಲ್ಕು ದಿವಸಗಳಲ್ಲಿ ಆ ಬಗ್ಗೆ ಒಂದು ತೀರ್ಮಾನ ತೆಗೆದುಕೊಳ್ಳುತ್ತಾರೆಂದು ಕೇಳಿದ್ದೇನೆ. ಮುಖ್ಯಮಂತ್ರಿಗಳಲ್ಲಿ ಈ ಪೋರ್ಟ್‌ಪೋಲಿಯೋ ಇರುವುದರಿಂದ ಅವರನ್ನು ನಾನು ಕೇಳಿಕೊಳ್ಳುತ್ತೇನೆ, ಪ್ರೈವೇಟ್ ಸೆಕ್ಟಾರೀದಲ್ಲಿರುವ ಕಂಪೆನಿಗಳಿಗೆ. ನಂದಿ ಬ್ರೂಯರೀಸ್‌ಗೆ ಅರಕ್ ತಯಾರು ಮಾಡುವುದಕ್ಕೆ ಏಕೆ ಲೈಸೆನ್ಸ್ ಕೊಡುತ್ತೀರಿ? ತಾವೇ ಏಕೆ ಪಬ್ಲಿಕ್ ಸೆಕ್ಟಾರಿನಿಂದ ತಯಾರು ಮಾಡುವುದಕ್ಕೆ ಪ್ರಯತ್ನ ಮಾಡಬಾರದು ಎಂದು ಕೇಳುತ್ತಿದ್ದೇನೆ.

ಈಗ ಖೋಡೆ ಮತ್ತು ನಂದಿ ಬ್ರೂಯರೀಸ್‌ನವರು ತಯಾರು ಮಾಡತಕ್ಕ ಲಿಕರ್ಸ್ ಬಗ್ಗೆ ಆಕ್ಷೇಪಣೆಗಳು ಬಂದಿವೆ. ನಂದಿ ಬ್ರೂಯರೀಸ್‌ನವರು ತಯಾರು ಮಾಡಿದ್ದ ಲಿಕರ್ಸ್ ವಾಪಸ್ಸು ಬಂದಿದ್ದು ಅದಕ್ಕೆ ಬೇರೆ ಲೇಬಲ್ ಹಾಕಿ ಮಾರಾಟ ಮಾಡಿದ್ದಾರೆನ್ನುವ ಅಪಾದನೆಗಳಿವೆ. ಇವರುಗಳು ತಯಾರು ಮಾಡುವ ಲಿಕರ್ಸ್ ಟೆಸ್ಟ್ ಮಾಡುವುದಕ್ಕೆ ಯಾವ ವಿಧಾನವನ್ನು ಅನುಸರಿಸುತ್ತಿದ್ದೀರಿ ? ಅದನ್ನು ಚೆಕ್‌ಮಾಡಿ, ಅದರಿಂದ ಆಗುವ ಕೆಟ್ಟ ಪರಿಣಾಮಗಳನ್ನು ನಿಲ್ಲಿಸುವುದಕ್ಕೆ ಏನು ಮಾಡಿದ್ದೀರಿ ಎಂದು ಕೇಳುತ್ತಿದ್ದೇನೆ. ಅಡಲ್ಟರೇಷನ್ ನಿಲ್ಲಿಸುವುದು ಬಹಳ ಮುಖ್ಯವಾದುದು, ಇದನ್ನು ಮಾಡಬೇಕೆಂದು ಹೇಳುತ್ತಿದ್ದೇನೆ.

ಶ್ರೀ ಬಾಲರಾಜ್ ಅವರಿಂದ ಆಗಿರತಕ್ಕ ಅನ್ಯಾಯಗಳ ಪಟ್ಟಿಗೆ ಇನ್ನೊಂದನ್ನು ಸೇರಿಸಿ ಕೊಳ್ಳಬೇಕು. ಅವರು ಈಗ ಡಿವಿಜನಲ್ ಕಮಿಷನರಾಗಿದ್ದಾರೆ. ಅವರು ಏನು ಮಾಡುತ್ತಿದ್ದಾರೆಂದರೆ ಥಿಯೇಟರುಗಳನ್ನು ಕಟ್ಟಲು ನೋ ಅಬ್ಜೆಕ್ಷನ್ ಸರ್ಟಿಫಿಕೇಟು ಬೇಕು. ಡಿವಿಜನಲ್ ಕಮಿಷನರು ಪ್ರತಿಯೊಬ್ಬ ಡೆಪ್ಯುಟಿ ಕಮಿಷನರಿಗೂ ಸೂಚನೆಯನ್ನು ಕೊಟ್ಟು, ಫಿಲಂ ಡೆವಲಪ್‌ಮೆಂಟ್ ಕಾರ್ಪೊರೇಷನ್ನಿಗೆ ಯಾರು ಹತ್ತು ಸಾವಿರ ರೂಪಾಯಿ ಕೊಟ್ಟು ಅಲ್ಲಿ ಷೇರು ತೆಗೆದುಕೊಳ್ಳುತ್ತಾರೆ ಅವರಿಗೆ ಮಾತ್ರ ಎನ್. ಒ. ಸಿ. ಕೊಡಿ, ಇಲ್ಲದೆ ಇದ್ದರೆ ಕೊಡಬೇಡಿ ಎಂದು ಹೇಳಿದ್ದಾರೆ. ಎನ್. ಒ. ಸಿ. ಪಡೆಯುವುದಕ್ಕಾಗಿ ಹತ್ತು ಸಾವಿರ ರೂಪಾಯಿ ಕೊಟ್ಟು ಫಿಲಂ ಡೆವಲಪ್‌ಮೆಂಟ್ ಕಾರ್ಪೊರೇಷನ್ನಿನಲ್ಲಿ ಷೇರುಗಳನ್ನು ಕೊಂಡು ಕೊಂಡವರಿದ್ದಾರೆ. ಶ್ರೀ ಬಾಲರಾಜ್ ಅವರು ಸಂಪೂರ್ಣವಾಗಿ ಡೆಪ್ಯುಟಿ ಕಮಿಷನರುಗಳ ಮೇಲೆ ಇಂಥ ನಿರ್ಬಂಧವನ್ನು ಹಾಕಿದ್ದಾರೆ. ಶ್ರೀ ಕೆ. ಕೆ. ಮೂರ್ತಿ ಅವರ ಆಡಳಿತದಲ್ಲಿರುವ ಫಿಲಂ ಕಾರ್ಪೊರೇಷನ್ನಿಗೆ ಈ ರೀತಿ ಹಣವನ್ನು ಕೊಡಿಸಿಕೊಟ್ಟರೆ, ಅವರ ಮೂಲಕ ಮುಖ್ಯ ಮಂತ್ರಿಗಳಿಂದ ತಮಗೆ ಒಳ್ಳೆಯ ಹೆಸರು ಬರುತ್ತದೆ ಎಂದು ಮಾಡಿರಬಹುದು. ಇದರ ಬಗ್ಗೆ ಕೂಡ ಮಾನ್ಯ ಮುಖ್ಯಮಂತ್ರಿಗಳು ನೋಡಬೇಕು.

ಶ್ರೀ ಬಾಲರಾಜ್ ಅವರು ಎಕ್ಸೈಜ್ ಕಮಿಷನರಾಗಿದ್ದಾಗ ಅವರ ಬಂಧುಗಳ ಹೆಸರಿಗೆ ಸುಮಾರು 50 ಸಾವಿರ ಲೀಟರ್ ಡೀನೇಚರ್ಡ್ ಸ್ಪಿರಿಟ್‌ಗಾಗಿ ಫ್ರೆಂಚ್ ಪಾಲಿಷ್ ತಯಾರು ಮಾಡಲು ಪರ್ಮಿಟ್ ಕೊಟ್ಟಿದ್ದಾರೆ. ಸರ್ಕಾರಕ್ಕೆ ಒಂದು ಲೀಟರ್ ಡೀನೇಚರ್ಡ್ ಸ್ಪಿರಿಟ್ಟಿಗೆ ಅವರು ಕೊಡತಕ್ಕದ್ದು 75 ಪೈಸೆ, ಆದರೆ ಅವರು ಮಾರಾಟ ಮಾಡುವುದು 10 ರೂಪಾಯಿಗಳ ಪ್ರಕಾರ. ಇದರಿಂದ ಸರ್ಕಾರಕ್ಕೆ ಬರತಕ್ಕ ಆದಾಯ ಹಾಳಾಗುವುದಕ್ಕೆ ಅವಕಾಶವಾಗಿದೆ.

ಖೋಡೆ ಬ್ರೂಯರಿ ಬಗ್ಗೆ ಇನ್ನೂ ಒಂದು ಮಾತು ಹೇಳಬೇಕಾಗುತ್ತದೆ. ತಮಗೆ ಗೊತ್ತಿರುವ ಹಾಗೆ ಎಕ್ಸೈಜ್ ಡಿಪಾರ್ಟ್‌ಮೆಂಟಿನಲ್ಲಿನ ರೂಲ್ಸ್ ಪ್ರಕಾರ ಇವರಿಗೆ ಸಂಪೂರ್ಣವಾಗಿ ಮಂಡ್ಯ ಡಿಸ್ಟಿಲರಿಯಿಂದ ಎಷ್ಟು ಬೇಕೋ ಅಷ್ಟು ರೆಕ್ಟಿಫೈಡ್ ಸ್ಪಿರಿಟ್ ತರುವುದಕ್ಕೆ ಅಧಿಕಾರವನ್ನು

ಕೊಟ್ಟಿದ್ದಾರೆ. ಇದರಿಂದ ಮಂಡ್ಯ ಡಿಸ್ಟಿಲರಿಗೆ ಭಾರಿ ಪ್ರಮಾಣದಲ್ಲಿ ನಷ್ಟವಾಗಿದೆ. ಮತ್ತು ಸರ್ಕಾರಕ್ಕೆ ಕೂಡ ಅನ್ಯಾಯವಾಗುತ್ತಿದೆ ಎಂದು ಹೇಳುತ್ತಿದ್ದೇನೆ.

ಎಕ್ಸೈಜ್ ಇಲಾಖೆಯಲ್ಲಿ ಅಧಿಕಾರಿಗಳು ಯಾರಿದ್ದಾರೆ ಅವರೆಲ್ಲರೂ ಖೋಡೆ ಅವರ ಕೃಪಾಕಟಾಕ್ಷದಿಂದ ಬೆಳೆಯುತ್ತಿದ್ದಾರೆ. ಇಲ್ಲದೆ ಹೋದರೆ ಅವರು ಉಳಿಯುವುದೇ ಕಷ್ಟ. ಖೋಡೆ ಅವರ ಕೃಪಾಕಟಾಕ್ಷ ಯಾರಿಗೆ ಇಲ್ಲ ಅವರು ಎಕ್ಸೈಜ್ ಕಮಿಷನರಾದರೂ ಉಳಿಯುವ ಹಾಗೆ ಇಲ್ಲ. ಅವರಿಗೆ ವಿರೋಧವಾಗಿ ಯಾರೂ ನಡೆಯುವ ಹಾಗೆಯೇ ಇಲ್ಲ. ನಮ್ಮ ಸರ್ಕಾರ ಅವರನ್ನು ಇಟ್ಟುಕೊಳ್ಳುತ್ತೇನೆಂದರೂ ಕೂಡ ಇಟ್ಟುಕೊಳ್ಳುವ ಹಾಗೆ ಇಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಏನೂ ಮಾಡುವುದಕ್ಕಾಗುವುದಿಲ್ಲ. ಕಾನೂನು ಪ್ರಕಾರ ಹತೋಟಿಗೆ ತರುವುದಕ್ಕೆ ಪ್ರಯತ್ನ ಮಾಡಿದರೆ ನಿಮ್ಮ ಸರ್ಕಾರವನ್ನೇ ತಲೆಕೆಳಗು ಮಾಡುವಂಥ ಶಕ್ತಿ ಖೋಡೆ ಮತ್ತು ನಂದಿ ಬ್ರೂಯರೀಸ್‌ನವರು ಇಟ್ಟುಕೊಂಡಿದ್ದಾರೆ. ಪ್ರೈವೇಟ್ ಸೆಕ್ಟಾರಿನಲ್ಲಿ ಕೋಟ್ಯಾಧೀಶರನ್ನು ಸಾಕತಕ್ಕ ಕಾನೂನು ಮಾಡಿದ್ದೀರಿ. ನಿಮಗೆ ಸಮಾಜವಾದದಲ್ಲಿ ನಂಬಿಕೆ ಇದ್ದರೆ ಕಾನೂನು ಬದಲಾವಣೆ ಮಾಡಿ ಪಬ್ಲಿಕ್ ಸೆಕ್ಟಾರಿನಲ್ಲಿ ಡಿಸ್ಟಿಲರಿ ಮತ್ತು ಬ್ರೂಯರೀಸ್ ಪ್ರಾರಂಭ ಮಾಡಿ.

ಟಾಡಿ ,ಮಾರಾಟವನ್ನು ಜಿಲ್ಲಾ ಮಟ್ಟದಲ್ಲಿ ಹರಾಜು ಮಾಡುತ್ತಿದ್ದೀರಿ. ಅದನ್ನು ತಪ್ಪಿಸಿ ಅರಕ್ ಹರಾಜು ಮಾಡುವಂತೆ ತಾಲ್ಲೂಕು ಮಟ್ಟದಲ್ಲಿ ಮಾಡಬೇಕು. ಟಾಡಿ ನಮ್ಮ ರಾಜ್ಯದಲ್ಲಿ ಸಿಕ್ಕುವುದಿಲ್ಲ, ಆಂಧ್ರದಿಂದ, ಮತ್ತೊಂದು ಕಡೆಯಿಂದ ತರಬೇಕು ಎಂದು ಹೇಳುತ್ತಾರೆ. ಆದರೆ ಕ್ಲೋರಲ್ ಹೈಡ್ರೇಟ್ ಸೇರಿಸಿ ಜನರಿಗೆ ಮಾರಾಟ ಮಾಡಿ ಅವರ ಆರೋಗ್ಯವನ್ನು ಹಾಳು ಮಾಡುತ್ತಿದ್ದಾರೆ. ಇದರ ಬಗ್ಗೆ ಕೂಡ ಗಮನ ಕೊಡಬೇಕೆಂದು ಹೇಳುತ್ತಿದ್ದೇನೆ.

ಕೊನೆಯದಾಗಿ ಪೋಲೀಸು ಡಿಪಾರ್ಟ್‌ಮೆಂಟು ಬಗ್ಗೆ ಒಂದು ಮಾತನ್ನು ಹೇಳಿ ನನ್ನ ಭಾಷಣ ವನ್ನು ಮುಗಿಸುತ್ತೇನೆ. ಪೋಲೀಸು ಇಲಾಖೆ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಸಂತೋಷ ಪಡುತ್ತಿರಬಹುದು ನಿಜ, ಏಕೆಂದರೆ ಎಲ್ಲ ಆಫೀಸರುಗಳು ಇವರಿಗೆ ಸಲಾಂ ಹಾಕುತ್ತಾರೆ ಮತ್ತು ಪೋಲೀಸು ಇಲಾಖೆಯ ಬಗ್ಗೆ ಇಲ್ಲಿ ಯಾವ ರೀತಿ ಹೇಳಿಕೆಗಳನ್ನು ಕೊಟ್ಟಿದ್ದಾರೆ ಅದನ್ನು ನಾನು ಇನ್ನೂ ಮರೆತಿಲ್ಲ. ಪೋಲೀಸು ಸ್ಟೇಷನ್‌ಗೆ ಕಂಪ್ಲೇಂಟು ಕೊಡಲು ಬಂದವರನ್ನು ಪೋಲೀಸು ಸ್ಟೇಷನ್‌ಗೆ ಒಳಗೇನೆ ಕೂರಿಸಿ ಹೊಡೆಯುವುದು, ಇಂತಹ ನಿಲುವನ್ನು ನೀವು ಬಿಡಬೇಕು. ಪೋಲೀಸು ಸ್ಟೇಷನ್‌ಗೆ ದೂರು ಕೊಡಲು ಬಂದವರನ್ನು ಹೊಡೆಯಬೇಕು ಎಂದು ಬೇಕಾದರೆ ನಿಮ್ಮ ಪೋಲೀಸು ಕೋಡಿನಲ್ಲಿ ಮಾಡಿಬಿಡಿ. ಕೆಲವು ದಿನಗಳ ಹಿಂದೆ ನಾಗಮಂಗಲದಲ್ಲಿ ಕರೀಗೌಡ ಎನ್ನುವವರ ಕೊಲೆಯಾದಾಗ ಇಲ್ಲಿ ಪೋಲೀಸರಿಂದ ಬಂದ ಹೇಳಿಕೆಯನ್ನು ಚಾಚೂ ತಪ್ಪದೆ ಓದಿರುವುದನ್ನು ನಾವು ಕೇಳಿದ್ದೇವೆ, ಇದನ್ನು ನೋಡಿ ನಮಗೂ ಆಶ್ಚರ್ಯವಾಗಿದೆ. ಇದನ್ನು ಒಪ್ಪಬಹುದು, ಇಲ್ಲವೆ ಬಿಡಬಹುದು. ಆದರೆ ಇಂದು ಪೋಲೀಸು ಸ್ಟೇಷನ್ನಿಗೆ ದೂರು ಕೊಡಲು ಬಂದವರು ಇಲ್ಲಿನ ಸಬ್‌ಇನ್ಸ್‌ಪೆಕ್ಟರಿಗೆ ಹಣ ಕೊಟ್ಟರೆ ಅವರನ್ನೇನೂ ಮಾಡುವುದಿಲ್ಲ. ಅವರು ಹೇಗೆ ಬೇಕಾದರೆ ಹಾಗೆ ಮಾಡಿಕೊಂಡು ಹೋಗಬಹುದು. ಆದರೆ ಕಂಪ್ಲೇಂಟು ಕೊಡುವವ ರನ್ನು ಪೋಲೀಸು ಸ್ಟೇಷನ್‌ನಲ್ಲಿ ಹೊಡೆಯುವುದು ಎಂದರೆ ಇದು ಸರಿಯಲ್ಲ. ಇಂತಹ ಒಂದು ಪೋಲೀಸು ಡಿಪಾರ್ಟ್‌ಮೆಂಟು ನಿಮ್ಮಲ್ಲಿದೆ. ಇತ್ತೀಚೆಗೆ ಎಂದರೆ ಐದಾರು ದಿನಗಳ ಹಿಂದೆ ಇದೇ ಊರಿನಲ್ಲಿ ನಡೆದ ಮಹಾಲಕ್ಷ್ಮಿ ಲೇ ಔಟು ಪ್ರಕರಣದಲ್ಲಿ ಕೋರ್ಟ್ ಕೊಟ್ಟಿರುವ ಜಡ್ಜ್‌ಮೆಂಟು ಕಾಪಿ ನನ್ನಲ್ಲಿದೆ. ಇದರಲ್ಲಿರುವ ಕೆಲವು ವಿಚಾರಗಳನ್ನು ಸಭೆಯ ಅವಗಾಹನೆಗಾಗಿ ಓದುತ್ತೇನೆ. ಇದರಲ್ಲಿ ಮಾನ್ಯ ನ್ಯಾಯಾಧೀಶರು Though fingerprints were available they were not sent to the Expert for examination. If finger prints are available, then it would be a best evidence ಎಂದು

ಕರೆಕ್ಟ್ ಆಗಿ ಹೇಳಿದ್ದಾರೆ. ಇದರಲ್ಲಿ ಫಿಂಗರ್‌ಪ್ರಿಂಟುಗಳನ್ನು ಫಿಂಗರ್‌ಪ್ರಿಂಟ್ ಎಕ್ಸ್‌ಪರ್ಟ್‌ಗೆ ಕಳುಹಿಸಿ ಪರೀಕ್ಷೆ ಮಾಡಿಸಿದ್ದರೆ ನಿಜವಾದ ಅಪರಾಧಿಗಳನ್ನು ಪತ್ತೆಮಾಡಲು ಸಹಾಯವಾಗುತ್ತಿತ್ತು ಎಂದು ಹೇಳಿದ್ದಾರೆ. ಇನ್ನು ಇದರಲ್ಲಿರುವ ಎರಡು ಮೂರು ಪದಗಳನ್ನು ಮಾತ್ರ ಇಲ್ಲಿ ಓದುತ್ತೇನೆ.

I have got a copy of the judgement of the Mahalaxmi Lay out case. This case is a concocted one. Though fingerprints were available but they were not sent to the Fingerprints Expert for examination. If fingerprints are available, than it would be a best evidence. This opinion has been expressed by so many courts including the Supreme Court. I shall read out some portions of the judgement for the information of the House.

At page 28 it is said : " The entire story in this behalf appears to be too artificial..." Then at page 29 it is said as " untrue." Then at page 46—last para, it has been stated as follows.—

" Some useful material was available for the prosecution to pursue their investigation to arrive at the truth of the matter like the fingerprints as obtained by the Police photographer P.W. 24 Lakshman Singh in this case Strangely, however, the Police have thought it not necessary. Fingerprint science, as we all know, is more accurate than any other science. It would have been certainly, in the interest of justice, for the police to pursue investigation on this basis also to arrive at the truth of the matter. It is unfortunate that the Police rejected this important piece of evidence as not necessary even when it was available to them."

According to this judgement, Sri Krishnaswamy is not an accused.

ಇಷ್ಟು ಅನ್ಯಾಯಗಳು ಪೋಲೀಸು ಇಲಾಖೆಯ ಅಧಿಕಾರಿಗಳಿಂದ ಆಗುತ್ತಿದೆ. ಇಂತಹ ಪೋಲೀಸು ಅಧಿಕಾರಿಗಳ ಮೇಲೆ ಏತಕ್ಕೆ ತಕ್ಕ ಕ್ರಮಗಳನ್ನು ತೆಗೆದುಕೊಳ್ಳಬಾರದು ಎಂದು ನಾನು ಕೇಳುತ್ತೇನೆ. ಯಾವ ಅಧಿಕಾರಿಗಳು ಸರಕಾರದ ನೀತಿಗೆ ವಿರೋಧವಾಗಿ ಕೆಲಸ ಮಾಡುತ್ತಾರೋ ಅಂತಹವರನ್ನು ತೀವ್ರವಾದ ಶಿಕ್ಷೆಗೆ ಗುರಿಪಡಿಸಬೇಕು. ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ತನಿಖೆ ಮಾಡುವ ಬಗ್ಗೆ ವಿಚಾರ ಮಾಡಬೇಕೆಂದು ಹೇಳಿ ಅಧ್ಯಕ್ಷರನ್ನು ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಶ್ರೀರಾಮುಲು (ಗಾಂಧಿನಗರ) :—ಮಾನ್ಯ ಅಧ್ಯಕ್ಷರೇ, ನಮ್ಮ ಮುಂದೆ ಇಟ್ಟಿರತಕ್ಕ ಬೇಡಿಕೆಗಳನ್ನು ಒಪ್ಪಿಕೊಂಡು ಮೂರು ವಿಷಯಗಳ ಬಗ್ಗೆ ಮಾತ್ರ ನಾನು ಇಲ್ಲಿ ಪ್ರಸ್ತಾಪ ಮಾಡಬೇಕಾಗಿದೆ.

ಒಂದನೇದು, ನಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಯೋಧರು ಇಂದು ಬೀದಿ ಭಿಕಾರಿಗಳಾಗಿದ್ದಾರೆ ಎಂದು ಹೇಳಿದರೆ ಅದು ತಪ್ಪಾಗಲಾರದು. ಇವರಲ್ಲಿ ಎಷ್ಟೋ ಜನಕ್ಕೆ ಕಣ್ಣು ಕಾಣಿಸುತ್ತಿಲ್ಲ. ಇವರ ಮನೆಯಲ್ಲಿ ಕೆಲಸ ಮಾಡತಕ್ಕ ಯುವಕರುಗಳಿಗೆ ಸರಕಾರ ಉದ್ಯೋಗಗಳನ್ನು ಕೊಡಲು ನಮ್ಮ ಸರಕಾರ ಇನ್ನೂ ವ್ಯವಸ್ಥೆ ಮಾಡಲಿಲ್ಲ ಎಂದು ಇಲ್ಲಿ ವಿಷಾದದಿಂದ ಹೇಳಬೇಕಾಗಿದೆ. ಇಂದು ನಮ್ಮ ರಾಜ್ಯದ ಸ್ವಾತಂತ್ರ್ಯಕ್ಕಾಗಿ ರಾಷ್ಟ್ರಕ್ಕೋಸ್ಕರ ದುಡಿದಂತಹವರಿಗೋಸ್ಕರ ಸರಕಾರ ಇಂದು ತೋರಿಸುತ್ತಿರುವ ಗೌರವ ಇದೇನೇ ಎಂದು ಕೇಳಬೇಕಾಗಿದೆ. ಇಂದು ಇವರು ಬೀದಿಪಾಲಾಗಿದ್ದಾರೆ. ಇದಕ್ಕಾಗಿ ಸರಕಾರದಲ್ಲಿ ನಾನು ಕಳಕಳಿಯಿಂದ ವಿನಂತಿ ಮಾಡಿಕೊಳ್ಳುವುದು. ದೇಶದ ಸ್ವಾತಂತ್ರ್ಯಕ್ಕಾಗಿ ಯಾರು ಹೋರಾಡಿದರೋ ಅಂತಹವರಿಗೆ ಎಲ್ಲ ಸೌಕರ್ಯಗಳನ್ನೂ ಒದಗಿಸಿ ಕೊಡಬೇಕು ಎನ್ನುವ ತತ್ವವನ್ನು ನಾವು ಒಪ್ಪಿಕೊಂಡಿದ್ದೇವೆ. ಆದರೆ ಇನ್ನೂ ಇದಕ್ಕೆ ತಕ್ಕ ಯೋಜನೆ ಮಾಡಿ ಇವರಿಗೆ ಯಾವ ತರಹದ ಸೌಕರ್ಯಗಳೂ ಸಿಗಲಿಲ್ಲ. ಇದರ ಬಗ್ಗೆ ಕಾಲವೇನೋ ಕಳೆಯುತ್ತಿದೆ, ಕಾಲಕಳೆದಂತೆಲ್ಲಾ ಇದನ್ನು ಮುಂದುವರಿಸಿಕೊಂಡು ಹೋಗುವುದು ಸರಿಯಲ್ಲ. ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಯಾರಿದ್ದಾರೋ ಅವರು ಇಂತಹ ಯೋಧರ ಮಕ್ಕಳಿಗೆ ಸರಿಯಾಗಿ ಕೆಲಸಗಳನ್ನು ಒದಗಿಸಿಕೊಟ್ಟು ಸಹಾಯ ಮಾಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಇನ್ನು ಪೋಲೀಸು ಇಲಾಖೆಯಲ್ಲಿರುವ ಅಧಿಕಾರಿಗಳು ಪೋಲೀಸಿನವರಿಂದಲೇ ಲಂಚ ಪಡೆಯುತ್ತಾರೆ, ಇದು ಹೇಗೆಂದರೆ ಪೋಲೀಸು ಸ್ಟೇಷನ್‌ನಲ್ಲಿರುವ ದಫೇದಾರ್‌ರವರು ಬೇರೆ ಕಡೆಗೆ ವರ್ಗ ಮಾಡಬೇಕಾದರೆ ಮೇಲಿನ ಅಧಿಕಾರಿಗಳಿಗೆ ಲಂಚ ಕೊಡಬೇಕು, ಅವರ ಪ್ರಮೋಷನ್ ಫೈಲು ಮೇಲಕ್ಕೆ ಹೋಗಬೇಕಾದರೆ ಲಂಚ ಕೊಡಬೇಕು, ಅವರಿಗೆ ಬೇರೆ ಜಾಗಕ್ಕೆ ವರ್ಗ ಮಾಡಬೇಕಾದರೆ ಅದಕ್ಕೆ ಲಂಚ ಕೊಡಬೇಕು. ಮತ್ತು ಅವರಿಗೆ ಲಾಭ ಬರುವಂತಹ ಪೋಲೀಸು ಸ್ಟೇಷನ್‌ಗೆ ವರ್ಗ ಮಾಡಬೇಕಾದರೆ ಲಂಚ ಕೊಡಬೇಕು. ಇದರ ಬಗ್ಗೆ ನನ್ನ ಅಭಿಪ್ರಾಯದಲ್ಲಿ ಖಚಿತವಾಗಿ ನಾನು ಸಲಹೆ ಮಾಡುವುದು ಯಾರಿಗೆ ಸೀನಿಯಾರಿಟಿ ಪ್ರಕಾರ ಏನೇನು ಸೌಲಭ್ಯಗಳು ದೊರಕಬೇಕೋ ಅವನ್ನೆಲ್ಲಾ ದೊರಕಿಸಿಕೊಡಲು ಸರಿಯಾದ ರೂಲ್ಸುಗಳನ್ನು ಮಾಡಬೇಕು. ಈಗಾಗಲೇ ಇದರ ಬಗ್ಗೆ ರೂಲ್ಸುಗಳಿದ್ದರೆ ಆ ರೂಲ್ಸುಗಳನ್ನು ಸರಿಯಾಗಿ ಪಾಲನೆ ಮಾಡುವಂತೆ ವ್ಯವಸ್ಥೆ ಮಾಡಬೇಕು. ಇನ್ನು ಇದೇ ಇಲಾಖೆಯಲ್ಲಿರುವ ಪಿ.ಸಿ.ಗಳು ಎಂದರೆ 150 ರೂಪಾಯಿಗಳಿಗಿಂತಲೂ ಕಮ್ಮಿ ಸಂಬಳ ಬರುವವರು ಸಾರ್ವಜನಿಕರಿಂದ ಲಂಚ ಪಡೆಯುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಇದನ್ನು ತಪ್ಪಿಸಬೇಕು. ಹಿಂದೆ ಎಂದರೆ ಕಳೆದ ವರ್ಷ ಮಾನ್ಯ ಮುಖ್ಯಮಂತ್ರಿಗಳು ಪೋಲೀಸು ಇಲಾಖೆಯವರಿಗೆ ಸಂಬಳವನ್ನು ಜಾಸ್ತಿ ಕೊಟ್ಟು ಇವರ ರಕ್ಷಣೆ ಮಾಡುತ್ತೇವೆಂದು ಹೇಳಿದರೂ, ಇದುವರೆಗೂ ಇವರಿಗೆ ಯಾವ ರೀತಿಯಾದ ಸೌಕರ್ಯಗಳೂ ಸಿಗಲಿಲ್ಲ, ಈಗಲಾದರೂ ಇದನ್ನು ಮಾಡಬೇಕೆಂದು ಅವರಲ್ಲಿ ಕೇಳಿಕೊಳ್ಳುತ್ತೇನೆ. ಕೊನೆಯ ಪಕ್ಷ 250 ರೂಪಾಯಿಗಳಷ್ಟು ಸಂಬಳ ಬರುವ ಹಾಗೆ ಮಾಡಿದರೆ ಇವರಲ್ಲಿ ಲಂಚದ ಹಾವಳಿ ಕಡಿಮೆಯಾಗಬಹುದು, ಇದರ ಕಡೆಗೆ ಸರಕಾರ ಹೆಚ್ಚು ಗಮನ ಕೊಡಬೇಕು. ಇನ್ನೊಂದು ವಿಚಾರದ ಬಗ್ಗೆ ಸರಕಾರದಲ್ಲಿ ನಾನು ಇಲ್ಲಿ ಹೇಳದೇಹೋದರೆ ಅದು ಕರ್ತವ್ಯಲೋಪ ಮಾಡಿದಂತಾಗುತ್ತದೆ, ಇದು ಬಹು ಮುಖ್ಯವಾದ ವಿಷಯ. ಸರಕಾರದ ಮೇಲೆ ಇದೇನು ಪರಿಣಾಮವಾಗಿದೆ ಎನ್ನುವುದನ್ನು ಇಲ್ಲಿ ಹೇಳಬೇಕು. ಎಲ್ಲ ಸದಸ್ಯರೂ ಈ ಸದನಕ್ಕೆ ಬರುವ ಮುನ್ನ ಇಲ್ಲಿ ಪ್ರಮಾಣವನ್ನು ಸ್ವೀಕರಿಸಿ ಇಲ್ಲಿಗೆ ಸದಸ್ಯರಾಗಿ ಬರುತ್ತೇವೆ. ಇದರಲ್ಲಿ ಪ್ರತಿಯೊಬ್ಬರೂ ಪರಮಾತ್ಮನ ಮೇಲೆ ನಾವು ಸತ್ಯದಿಂದ, ನಿಷ್ಠೆಯಿಂದ ಇಲ್ಲಿ ಜನತೆಗೆ ಸೇವೆ ಮಾಡಲು ಬರುತ್ತೇವೆಂದು ಪ್ರಮಾಣಮಾಡಿ ಬರುತ್ತೇವೆ, ಇವೊತ್ತು ಅನೇಕ ಪತ್ರಿಕೆಗಳಲ್ಲಿ ಬರುವ ಹೇಳಿಕೆಯನ್ನು ನೋಡಿದರೆ ದೇವರ ಪಟಗಳನ್ನು ಪೂಜಿಸುವುದನ್ನು ಬಿಟ್ಟು ಅದನ್ನು ಚರಂಡಿಗಳಲ್ಲಿ

ಕಿತ್ತು ಬಿಸಾಡಿ ಎನ್ನುವಂತೆ ಹೇಳಿದರೆ ಯಾರು ಇಲ್ಲಿ ಪ್ರಮಾಣವಚನ ತೆಗೆದುಕೊಂಡು ಬಂದರೋ ಅಂತಹ ಪ್ರಮಾಣಕ್ಕೆ ಇದು ವಿರೋಧವಾಗುವುದಿಲ್ಲವೇ ?

ಶ್ರೀ ಕಾಗೋಡು ತಿಮ್ಮಪ್ಪ :—ನಾವು ದೇವರ ಹೆಸರಿನಲ್ಲಿ ಪ್ರಮಾಣವಚನ ತೆಗೆದುಕೊಳ್ಳಲಿಲ್ಲ ; ಸತ್ಯದ ಹೆಸರಿನಲ್ಲಿ ಪ್ರಮಾಣವಚನ ತೆಗೆದುಕೊಂಡಿದ್ದೇವೆ.

ಶ್ರೀ ಕೆ. ಶ್ರೀರಾಮುಲು :—ಅದು ನಿಮ್ಮ ವಾದ ಇರಬಹುದು. ತಾವು ದೇವರ ಹೆಸರನ್ನು ಒಪ್ಪದಿದ್ದರೆ ಭಾರತದ ರಾಜ್ಯಾಂಗ ಘಟನೆಯನ್ನು ನೀವು ಒಪ್ಪುವುದಿಲ್ಲವೇನು ? ಇಂದು ಪ್ರತಿಯೊಂದು ಮತದವರಿಗೂ ಸಹ ಅವರವರ ಮತಗಳನ್ನು ಬೆಳೆಸುವುದಕ್ಕೆ ಅವಕಾಶವಿರುವಾಗ, ಈ ರೀತಿ ದೇವರ ಫೋಟೋಗಳನ್ನು ಕಟ್ಟಿ ಬಚ್ಚಲಿಗೆ ಎಸೆಯಿರಿ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ಈ ರೀತಿ ಹೇಳಿರುವುದರಿಂದ ಅದು ಜನಸಾಮಾನ್ಯರ ಮನಸ್ಸಿನ ಮೇಲೆ ಏನು ಪರಿಣಾಮ ಉಂಟುಮಾಡಿದೆ, ಎಂತಹ ಪ್ರಸಂಗ ತಂದೊಡ್ಡಿದೆ ಎಂಬುದನ್ನು ಮುಖ್ಯಮಂತ್ರಿಗಳು ವಿಚಾರ ಮಾಡಿ ನೋಡಬೇಕು. ಈ ಬಗ್ಗೆ ವೈಯುಕ್ತಿಕವಾಗಿ ನನ್ನ ಅಭಿಪ್ರಾಯ ಹೇಳಬೇಕೆಂದರೆ. ಈ ಸಭೆಯ ಸದಸ್ಯರಾಗಿ ಆ ರೀತಿ ಯಾರೂ ಹೇಳಬಾರದು, ಮತ್ತು ಇಂಥಾದ್ದಕ್ಕೆ ತಾವು ಮುಖ್ಯಮಂತ್ರಿಗಳಾಗಿರುವವರೆಗೆ ಅವಕಾಶ ಕೊಡಬೇಡಿ ಎಂದು ಹೇಳುತ್ತೇನೆ. ಈ ರೀತಿ ಹೇಳಿರುವುದರ ಪರಿಣಾಮವಾಗಿ ಇಂದು ನಮ್ಮ ಸರಕಾರಕ್ಕೇ ಕೆಡಕು ಉಂಟಾಗುತ್ತಿರುವುದಲ್ಲದೆ. ವಿರೋಧಿಗಳು ಸಹ ಉಂಟಾಗುತ್ತಿದ್ದಾರೆ. ಆದ್ದರಿಂದ ಈ ರೀತಿಯೆಲ್ಲಾ ಹೇಳುವುದಕ್ಕೆ ಅವಕಾಶ ಕೊಡಬಾರದೆಂದು ಮುಖ್ಯಮಂತ್ರಿಗಳನ್ನು ಕೇಳಿಕೊಂಡು, ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ, ಈ ಬೇಡಿಕೆಗಳನ್ನು ಒಪ್ಪುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜಪೇಟೆ) :—ಸನ್ಮಾನ್ಯ ಅಧ್ಯಕ್ಷರೇ, ಮುಖ್ಯಮಂತ್ರಿಗಳಿಗೆ ಸೇರಿರತಕ್ಕಂಥ ಸುಮಾರು 5–6 ಬೇಡಿಕೆಗಳನ್ನು ಸಭೆಯ ಮುಂದೆ ಏನು ಮಂಡಿಸಲಾಗಿದೆ. ಅದನ್ನು ಸಂಪೂರ್ಣವಾಗಿ ಒಂದು ಸ್ವಲ್ಪ ಕೂಡ ಒಪ್ಪದೆ ವಿರೋಧ ಮಾಡುತ್ತೇನೆ. ಇವೊತ್ತು ಮಾನ್ಯ ಮುಖ್ಯಮಂತ್ರಿಗಳಾಗಿರತಕ್ಕಂಥ ಶ್ರೀಮಾನ್ ದೇವರಾಜ ಅರಸ್ ಅವರ ಬಗ್ಗೆ ವೈಯಕ್ತಿಕವಾಗಿ ನಾನು ಗೌರವ ಇಟ್ಟುಕೊಂಡಿದ್ದೇನೆ.

ಶ್ರೀ ಬಿ. ಪುಟ್ಟಸ್ವಾಮಯ್ಯ :—ಅವರಿಗೂ ನಿಮಗೂ ಒಂದು ರೀತಿಯ ಪ್ರೇಮ ಇದೆ ಎಂದು ಕೇಳಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ :—ಕುರುಡು ಪ್ರೇಮ ;

ಶ್ರೀ ಎಚ್. ಎಸ್. ಸಿದ್ದಪ್ಪ :—ಕರಡಿ ಪ್ರೇಮ ;

ಶ್ರೀ ವಾಟಾಳ್ ನಾಗರಾಜ್ :—ಹಿಂದುಳಿದ ವರ್ಗದವರು ಈ ರಾಜ್ಯದಲ್ಲಿ ಮುಖ್ಯಮಂತ್ರಿಗಳಾಗಿರುವುದು ಒಂದು ಆದರ್ಶ ಎಂಬುದನ್ನು ನಾನು ಒಪ್ಪುತ್ತೇನೆ. ಇವರು ಅಧಿಕಾರ ವಹಿಸಿಕೊಂಡು ಒಂದು ವರ್ಷದ ಮೇಲೆ ಒಂದೆರಡು ತಿಂಗಳುಗಳು ಆಗಿರಬಹುದು. ಈ ಅವಧಿಯಲ್ಲಿ ಹಿಂದುಳಿದಿರತಕ್ಕಂಥ ಯಾವ ಯಾವ ಕೋಮಿನವರಿಗೆ ಅಧಿಕಾರ ವರ್ಗದಲ್ಲಿಯೋ ಆಗಲಿ, ಅಧಿಕಾರೇತರ ವರ್ಗದಲ್ಲಿಯೋ ಆಗಲಿ, ಖಾಸಗೀ ವರ್ಗದಲ್ಲಿಯೋ ಆಗಲಿ ಎಷ್ಟೆಷ್ಟು ಪುರಸ್ಕಾರ ಕೊಟ್ಟಿದ್ದೀರಿ ಎಂದು ಕೇಳುತ್ತೇನೆ. ಇಂದು ನಮ್ಮ ರಾಜ್ಯದಲ್ಲಿ ಹಿಂದುಳಿದಿರತಕ್ಕಂಥ ಅನೇಕ ಜಾತಿಗಳು ಇವೆ. ನಾನು ಶಾಸಕನಾದ ಮೇಲೆ ಇದೇ ಮೊದಲ ಸಲ ಜಾತಿಯ ಪ್ರಶ್ನೆಯನ್ನು ಇಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆ. ಇಲ್ಲಿಯವರೆಗೆ ನಾನು ಜಾತಿಯ ಪ್ರಶ್ನೆ ಬಗ್ಗೆ ಮಾತನಾಡಿರಲಿಲ್ಲ. ಮುಖ್ಯವಾಗಿ ಹಿಂದುಳಿದಿರುವವರ ಕಲ್ಯಾಣವಾಗಬೇಕಾಗಿದೆ. ಅದಕ್ಕಾಗಿ ದೊಡ್ಡ ಕ್ರಾಂತಿ

ಯಾಗಬೇಕು. ಇಲ್ಲಿಯವರೆಗೆ ಯಾರು ಯಾರು ಎಲ್ಲ ಸೌಲಭ್ಯಗಳನ್ನು ಹೊಂದಿದ್ದಾರೆ, ಆ ಸೌಲಭ್ಯಗಳನ್ನು ನಿಲ್ಲಿಸಿಬಿಡೋಣ. ಅದೇ ಸೌಲಭ್ಯಗಳನ್ನು ಹಿಂದುಳಿದಿರುವ ಜಾತಿಯವರಿಗೆ ಕಲ್ಪಿಸಿ ಕೊಡುವುದಕ್ಕೆ ಹೋರಾಟ ಮಾಡಬೇಕಾಗಿದೆ. ನನ್ನ ಹತ್ತಿರ ಹಿಂದುಳಿದಿರತಕ್ಕ ಜಾತಿಯವರ ಬಗ್ಗೆ ಒಂದು ಪಟ್ಟಿಯೇ ಇದೆ. ಕೊರಚ, ಕೊರಮ, ಉಪ್ಪಾರ, ಭಜಂತ್ರಿ, ಅಗಸ, ಬೆಸ್ತ, ಕುಂಬಾರ, ಕಂಚಗಾರ, ಅಕ್ಕಸಾಲಿಗ ಇನ್ನೂ ಮುಂತಾದ ಜಾತಿಯವರು ಹಿಂದುಳಿದಿದ್ದಾರೆ. ಹಿಂದುಳಿದಿರತಕ್ಕ ಜನರಿಗೆ ರಕ್ಷಣೆ ಕೊಡುತ್ತೇವೆ, ಅವರ ಅಭಿವೃದ್ಧಿಗಾಗಿ ತಮ್ಮ ಅಧಿಕಾರಾವಧಿಯಲ್ಲಿ ದುಡಿಯುತ್ತೇವೆಂದು ನೀವು ಘೋಷಣೆ ಮಾಡಿರುವ ಕಾರಣ, ಇಲ್ಲಿಯವರೆಗೆ ಅಂದರೆ ತಾವು ಅಧಿಕಾರ ವಹಿಸಿಕೊಂಡ ಮೇಲೆ ಈ ಹಿಂದುಳಿದ ಜನಾಂಗದವರ ಪೈಕಿ ಎಷ್ಟೆಷ್ಟು ಜನರನ್ನು ಐ.ಎ.ಎಸ್. ಅಧಿಕಾರಿಗಳನ್ನಾಗಿ ಮಾಡಿದ್ದೀರಿ, ಎಷ್ಟೆಷ್ಟು ಜನರನ್ನು ಐ.ಪಿ.ಎಸ್. ಅಧಿಕಾರಿಗಳನ್ನಾಗಿ ಮಾಡಿದ್ದೀರಿ, ಎಷ್ಟು ಜನರನ್ನು ಗೆಜೆಟೆಡ್ ಅಧಿಕಾರಿಗಳನ್ನಾಗಿ ಮಾಡಿದ್ದೀರಿ, ಎಷ್ಟು ಜನರನ್ನು ಚೀಫ್ ಇಂಜಿನಿಯರ್‌ಗಳನ್ನಾಗಿ ಮಾಡಿದ್ದೀರಿ ಮತ್ತು ಈ ದೊಡ್ಡ ದೊಡ್ಡ ಹುದ್ದೆಗಳನ್ನು ನಿರ್ದಾಕ್ಷಿಣ್ಯವಾಗಿ ಹರಿಜನರಿಗೆ ಎಷ್ಟು ಕೊಟ್ಟಿದ್ದೀರಿ ಎಂಬ ಬಗ್ಗೆ ಅಂಕಿಅಂಶಗಳನ್ನು ತಮ್ಮ ಉತ್ತರದಲ್ಲಿ ಕೊಡಬೇಕು. ಮತ್ತು ಈ ಜಾತಿಗಳ ಪೈಕಿ ನಿಮ್ಮ ಪಾರ್ಟಿಯಲ್ಲಿ ಎಷ್ಟು ಜನರನ್ನು ಶಾಸಕರನ್ನಾಗಿ ಆರಿಸಿದ್ದೀರಿ, ಎಷ್ಟು ಜನರನ್ನು ಮಂತ್ರಿಗಳನ್ನಾಗಿ ಮಾಡಿದ್ದೀರಿ ಎಂಬುದನ್ನು ಸಹ ತಿಳಿಸಬೇಕು. ಹಿಂದುಳಿದವರ ರಕ್ಷಣೆ ಮಾಡುವುದಾಗಿ ಮುಖ್ಯಮಂತ್ರಿಗಳು ಮುಖವಾಡ ಧರಿಸುವುದೇ ಅಲ್ಲದೆ, ಆ ಒಂದು ಕೀರ್ತಿಗೆ ಒಳಗಾಗಿದ್ದೇನೆಂದು ಸಹ ಹೇಳಿಕೊಳ್ಳುತ್ತಿದ್ದಾರೆ. ಇಂದು ವಿಧಾನಸೌಧದಲ್ಲಿ ಸೂಪರ್‌ಟೈಮ್ ಸ್ಕೇಲಿನ ಅಧಿಕಾರಿಗಳು ಇದ್ದಾರೆ. ಇವರುಗಳ ಪೈಕಿ ಹಿಂದುಳಿದ ಜನಾಂಗದವರು ಎಷ್ಟಿದ್ದಾರೆಂಬುದನ್ನು ತಿಳಿಸಬೇಕು. ಈ ಅಧಿಕಾರಿಗಳು ಇಂದು ದೊರೆಗಳ ಹಾಗೆ ಇದ್ದಾರೆ. ನಾವಾದರೂ 5 ವರ್ಷ ಇದ್ದು ಹೋಗುವವರು; ಆದರೆ ಈ ಅಧಿಕಾರಿಗಳು ತಮ್ಮ ನಿವೃತ್ತಿ ವಯಸ್ಸು ಮುಗಿಯುವವರೆಗೂ ಸಹ ದೊರೆಗಳ ಹಾಗೆಯೇ ಇರುತ್ತಾರೆ. ಇನ್ನೂ ಮುಂದೆ ಹೋಗಿ ಹೇಳಬೇಕೆಂದರೆ, ಶ್ರೀ ದೇವರಾಜ ಅರಸ್ ಅವರ ಮೇಲೆಯೇ ಇವರು ದೊರೆಗಳಾಗಿದ್ದಾರೆ. ನೂರಾರು ಜಾತಿಯವರು ಇಂದು ಹಿಂದುಳಿದ ವರ್ಗಕ್ಕೆ ಸೇರಿದ್ದಾರೆ. ಅವರೆಲ್ಲರ ಅಭಿವೃದ್ಧಿ ಬಗ್ಗೆ ಹೋರಾಟ ನಡೆಯಬೇಕಾಗಿದೆ. ಇಲ್ಲಿಯವರೆಗೆ ತಮ್ಮ ಅಧಿಕಾರಾವಧಿಯಲ್ಲಿ ಈ ಜಾತಿಯವರ ಪೈಕಿ ಎಷ್ಟೆಷ್ಟು ಜನರಿಗೆ ಕೆಳದರ್ಜೆಯ ನೌಕರಿಗಳನ್ನು ಕೊಟ್ಟಿದ್ದೀರಿ ಎಂಬುದನ್ನು ಹೇಳಬೇಕು. ಶ್ರೀಮಾನ್ ನಿಜಲಿಂಗಪ್ಪನವರು, ಶ್ರೀಮಾನ್ ವೀರೇಂದ್ರಪಾಟೀಲರು ಅನ್ಯಾಯ ಮಾಡಿದ್ದಾರೆಂದು ಹೇಳಿಕೊಳ್ಳೋಣ. ಅವರು ಒಳ್ಳೆಯವರಲ್ಲ ಎಂದು ಇವರು ಹೇಳುತ್ತಾರೆ. ಆದರೆ ಶ್ರೀಮಾನ್ ಚೆನ್ನಿಗರಾಮಯ್ಯನವರು ಪಬ್ಲಿಕ್ ಸರ್ವಿಸ್ ಕಮಿಷನ್ ಚೇರ್‌ಮನ್ ಆಗಿದ್ದಾಗ, ಶ್ರೀ ಟಿ. ಚೆನ್ನಯ್ಯನವರು ಟ್ರಸ್ಟ್ ಬೋರ್ಡ್ ಚೇರ್‌ಮನ್ ಆಗಿದ್ದಾಗ ಮತ್ತು ವಿದ್ಯುಚ್ಛಕ್ತಿ ಮಂಡಲಿಯ ಚೇರ್‌ಮನ್ ಆಗಿದ್ದಾಗ ಅವರುಗಳಿಗೆ ಫುಲ್ ಫ್ರೀಡಮ್ ಕೊಟ್ಟಿದ್ದರೂ ಸಹ ಅವರು ಈ ಜನಾಂಗದವರ ಏಳಿಗೆಯ ಬಗ್ಗೆ ಏನನ್ನೂ ಮಾಡಲಿಲ್ಲ. ಈಗ ತಾವು ಹಾವನೂರ್ ಅವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯನ್ನು ರಚನೆ ಮಾಡಿದ್ದೀರಿ; ಆದರೆ ಹಿಂದಿನ ಸರ್ಕಾರದವರು ಬಿ. ಬಸವಯ್ಯನವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯನ್ನು ರಚನೆ ಮಾಡಿದ್ದರು.

ಶ್ರೀ ಎಚ್. ಡಿ. ದೇವೇಗೌಡ :—ಆ ಕಮಿಟಿಯಲ್ಲಿ ನಾನು ಸಹ ಮೆಂಬರ್ ಆಗಿದ್ದೆ.

ಶ್ರೀ ವಾಟಾಳ್ ನಾಗರಾಜ್ :—ಅವರು ಕೊಟ್ಟ ವರದಿ ಅಲ್ಲಿಯೇ ಸತ್ತು ಹೋಯಿತು ?

ಶ್ರೀ ಎಚ್. ಡಿ. ದೇವೇಗೌಡ :—ಅಸೆಂಬ್ಲಿ ಡಿಸಾಲ್ವ್ ಆದ್ದರಿಂದ ಆ ಕಮಿಟಿಯವರು ವರದಿ ಕೊಡುವುದಕ್ಕಾಗಲಿಲ್ಲ.

ಶ್ರೀ ವಾಟಾಳ್ ನಾಗರಾಜ್ :—ಮುಖ್ಯವಾಗಿ ನಾನು ಹೇಳುತ್ತಿರುವುದೇನೆಂದರೆ, ಈ ಹಿಂದುಳಿದವರ ಶೋಷಣೆಯನ್ನು ಮಾಡುವುದು ಬೇಡ. ಇವೊತ್ತು ಸೆಕ್ರೆಟೇರಿಯಟ್‌ನಲ್ಲಿ ಎರಡು ವರ್ಗವಾಗಿದೆ. ಒಂದು ಚೀಫ್ ಸೆಕ್ರೆಟರಿಯವರ ಗುಂಪು, ಇನ್ನೊಂದು ಅವರ ವಿರೋಧಿ ಗುಂಪು. ಹೋಂ ಡಿಪಾರ್ಟ್‌ಮೆಂಟ್ ಸೆಕ್ರೆಟರಿ ಆಗಿರುವ ಶ್ರೀ ಫರ್ನಾಂಡಿಸ್ ಅವರನ್ನು ದೆಹಲಿಗೆ ಕಳಿಸಿ ಕೊಡುವುದಕ್ಕೆ ಕಾರಣವೇನು ? ಇಂತಹ ಒಳ್ಳೆಯ ಅಧಿಕಾರಿಗಳು ನಮ್ಮ ರಾಜ್ಯದಲ್ಲಿಯೇ ಇದ್ದರೆ ಒಳ್ಳೆಯದು. ಶ್ರೀ ಮಾನ್ ಲೀಸ್ ಅವರು ಮುಖ್ಯಮಂತ್ರಿಗಳ ಆಪ್ತಕಾರ್ಯದರ್ಶಿಯಾಗಿರುವುದಕ್ಕಿಂತ ಜಿಲ್ಲಾಧಿಕಾರಿಯನ್ನಾಗಿ ಮಾಡಿದರೆ, ಅವರು ಜನರಿಗೆ ಒಳ್ಳೆಯದನ್ನು ಮಾಡುತ್ತಾರೆ. ಮುಖ್ಯವಾಗಿ ಒಳ್ಳೆಯ ಅಧಿಕಾರಿಗಳಿಗೆ ರಕ್ಷಣೆ ಕೊಡಬೇಕೇ ಹೊರತು ಕೆಲವರ ಒತ್ತಡದ ಕಾರಣ ಬೇರೆ ಕಡೆಗೆ ಹಾಕುವುದು ಸರಿಯಲ್ಲ ಎಂಬ ಮಾತನ್ನು ಮುಖ್ಯ ಮಂತ್ರಿಗಳ ಕಿವಿಗೆ ಹೇಳುತ್ತಿದ್ದೇನೆ.

ಪೋಲೀಸ್ ಇಲಾಖೆಯ ಬಗ್ಗೆ ಹೇಳಬೇಕೆಂದರೆ ತಾವು ಅಧಿಕಾರಕ್ಕೆ ಬಂದಮೇಲೆ ಇಡೀ ಪೋಲೀಸ್ ಇಲಾಖೆಯನ್ನೇ ಸಂಪೂರ್ಣವಾಗಿ ಬದಲಾವಣೆ ಮಾಡಿದ್ದೀರಿ. ಐ. ಜಿ. ಪಿ. ಹೊಸಬರು ಬಂದರು. ಅವರು ಆ ಸ್ಥಾನಕ್ಕೆ ಯೋಗ್ಯರಾಗಿದ್ದಾರೆ. ಅವರು ಗೋವು ಇದ್ದ ಹಾಗಿದ್ದಾರೆ. ಹಿಂದೆ ಬಂದರೆ ಒದೆಯುವುದಿಲ್ಲ, ಮುಂದೆ ಬಂದರೆ ಹಾಯುವುದಿಲ್ಲ ;

ಐ.ಜಿ.ಪಿ. ಗಳು ಗೋವು ಇದ್ದಂತೆ ಪೋಲೀಸ್ ಕಮೀಷನರ್ ಶ್ರೀ ಮಾನ್ ಕೆ. ಜಿ. ರಾಮಣ್ಣನವರು ಗೋಮುಖವ್ಯಾಘ್ರದಂತೆ. ಚಾಮರಾಜಪೇಟೆಯಲ್ಲಿ ಟ್ರಾಫಿಕ್ ಜಾಸ್ತಿ, ಮಕ್ಕಳುಮರಿಗಳಿಗೆ ತೊಂದರೆಯಾಗುತ್ತದೆ ಎಂದು ಹೇಳಿದರೆ ಈ ಕಾಲದಲ್ಲಿ ಏತಕ್ಕೆ ಹೆಚ್ಚು ಮಕ್ಕಳನ್ನು ಹುಟ್ಟಿಸಬೇಕು? ಈ ವಿಷಯವನ್ನು ಶ್ರೀ ಮಾನ್ ಸಿದ್ಧವೀರಪ್ಪನವರಿಗೆ(ಕುಟುಂಬ ಯೋಜನೆಖಾತೆ ಸಚಿವರಿಗೆ) ಹೇಳಿ ಎಂದು ಕಮೀಷನರು ಹೇಳಿದರು. ಈ ಪೊಲೀಸ್ ಕಮೀಷನರು ಬೇಜವಾಬ್ದಾರಿಯ ವರ್ತನೆಯನ್ನು ನಡೆಸಿದ್ದಾರೆ. ಇವೊತ್ತು ಅವರು ಪೋಲೀಸ್ ಕಮೀಷನರಾಗಿ ಏತಕ್ಕೆ ಇರಬೇಕು ? ಇವರ ವರ್ತನೆ ಕೆಟ್ಟ ವರ್ತನೆ. ಎಂ. ಎಲ್. ಎ. ಹತ್ತಿರ ಸರಿಯಾಗಿ ಮಾತನಾಡುವ ಸೌಜನ್ಯವಿಲ್ಲ. ಇಂಥವರು ಬೆಂಗಳೂರು ನಗರದಲ್ಲಿ ಏತಕ್ಕೆ ಪೋಲೀಸ್ ಕಮೀಷನರಾಗಿರಬೇಕು ? ಈ ಕಮೀಷನರು ಪಟ್ಟಭದ್ರ ಹಿತಾಸಕ್ತಿಗಳನ್ನು ಜೊತೆಗೆ ಹಾಕಿಕೊಂಡು ಒಂದು ದೊಡ್ಡ ಪಿತೂರಿಯನ್ನು ನಡೆಸಿದ್ದಾರೆ. ಇದು ಒಳ್ಳೆಯದಲ್ಲ ಯಾವುದೋ ಒಂದು ಒತ್ತಡಕ್ಕೆ ಮಣಿದು ನೀವು ಕೆಲಸ ಮಾಡುವುದಾದರೆ ಈ ಇಲಾಖೆಯನ್ನೇ ಕೊಲೆ ಮಾಡಿದಹಾಗಾಗುತ್ತದೆ. ಇವರು ಅಧಿಕಾರಕ್ಕೆ ಬಂದಮೇಲೆ ಒಬ್ಬರು ಸ್ಪೆಷಲ್ ಐ. ಜಿ. ಪಿ. ಯನ್ನು ನೇಮಕ ಮಾಡಿದ್ದಾರೆ. ಇವರು ಏತಕ್ಕೆ ಬೇಕಾಗಿತ್ತು ? ಈ ಇಲಾಖೆಯ ಕೆಲಸ ಚೆನ್ನಾಗಿ ನಡೆದಿದೆಯೇ ? ಬೆಲೂರು ಶ್ರೀನಿವಾಸ ಐಯ್ಯಂಗಾರ್ ಅವರ ಕೊಲೆಯಾದದ್ದನ್ನು ಹಿಡಿದದ್ದು ಬಿಟ್ಟರೆ ನಂತರ ಇಲ್ಲಿಯವರೆಗೂ ಬೆಂಗಳೂರು ನಗರದಲ್ಲಿ ಆದ ಯಾವ ಕೊಲೆಯನ್ನು ಪತ್ತೆ ಮಾಡಲಿಲ್ಲ. ಕಲಾಸಿ ಪಾಳ್ಯದಲ್ಲಿ ಒಂದು ಕೊಲೆ ಆಯಿತು. ಅದನ್ನು ಪತ್ತೆ ಮಾಡಲಿಲ್ಲ. ಮಹಾಲಕ್ಷ್ಮಿ ಲೇ ಔಟ್ ಕೊಲೆಯ ಮೊಕದ್ದಮೆಯೂ ಬಿದ್ದು ಹೋಯಿತು. ಚಾಮರಾಜಪೇಟೆಯಲ್ಲಿ ಒಬ್ಬರು ಇಂಜಿನಿಯರ ಮನೆಯಲ್ಲಿ ಅವರ ಹೆಂಡತಿ ಕೊಲೆ ಆಯಿತು. ಅದು ಇವೊತ್ತಿನವರೆಗೂ ಪತ್ತೆ ಆಗಿಲ್ಲ. ಇದು ಪೋಲೀಸ್ ಇಲಾಖೆಯ ದಕ್ಷತೆಯ ಪ್ರತೀಕ. ಮಹಾಲಕ್ಷ್ಮಿ ಲೇ ಔಟ್‌ನ ಕೇಸು ಕೋರ್ಟಿನಲ್ಲಿ ಬಿದ್ದುಹೋಗಿ ಕೃಷ್ಣಸ್ವಾಮಿಯನ್ನು ಬಿಡುಗಡೆ ಮಾಡಿದರು.

ಶ್ರೀ ಎಚ್. ಸಿದ್ಧವೀರಪ್ಪ :—ಇಲಾಖೆಯದೇನಿದೆ ? ಜನ ಸಾಕ್ಷ್ಯ ಹೇಳಲು ಮುಂದೆ ಬರುವುದಿಲ್ಲ.

ಶ್ರೀ ಎಚ್. ಡಿ. ದೇವೇಗೌಡ :—ಕೃಷ್ಣಸ್ವಾಮಿ ಅಪ್ಪ ಮಾವ ಇಬ್ಬರೂ ಪೋಲೀಸ್ ಅಧಿಕಾರಿಗಳು ಏನುಮಾಡಬೇಕೋ ಅದನ್ನು ಮಾಡಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ :—ಬ್ಯಾಂಕಿನಲ್ಲಿ ದರೋಡೆ ಕಳ್ಳತನ ಮಾಡಿದವರನ್ನು ಹಿಡಿಯು ವುದಕ್ಕೆ ಇವರ ಕೈಯಲ್ಲಿ ಆಗಲಿಲ್ಲ.

ಶ್ರೀ ಬಿ. ಪುಟ್ಟಸ್ವಾಮಯ್ಯ :—ಎಂ. ಪಿ. ಸಿ. ಸಿ. ಮೀಟಿಂಗ್‌ನಲ್ಲಿ ಮಂತ್ರಿಗಳ ಪಾಕೆಟ್ ಕಳವಾದದ್ದನ್ನು ಪತ್ತೆ ಮಾಡಲಿಲ್ಲ. ಶ್ರೀಮಾನ್ ಕಿತ್ತೂರ್ ಅವರು ಪೋಲೀಸ್ ಶಾಖೆಯ ಮಂತ್ರಿಗಳು ಅವರ ಮನೆಯಲ್ಲಿ ಕಳವಾದದ್ದನ್ನು ಪತ್ತೆ ಮಾಡಲಿಲ್ಲ. ಇದು ಪೋಲೀಸ್ ಇಲಾಖೆಯ ದಕ್ಷತೆಯ ಪ್ರತೀಕ. ಪೊಲೀಸ್ ಇಲಾಖೆಗೆ ಜೀಪು ಬೇಕು, ಸ್ಕ್ವಾಡ್ ಬೇಕು, ಐ. ಜಿ. ಪಿ. ಕಮೀಷನರ್, ಇತ್ಯಾದಿ ಎಲ್ಲಾ ಸಿಬ್ಬಂದಿ ವರ್ಗದವರೂ ಬೇಕು. ಆದರೆ ದಕ್ಷತೆ ಮಾತ್ರ ಬೇಡ. ಚಳುವಳಿ ಮಾಡುವವರ ಮೇಲೆ ಲಾಠಿ ಚಾರ್ಜ್ ಮಾಡಿ ಕೇಸ್ ಹಾಕಿ ಕೋರ್ಟಿಗೆ ಅಲೆಸುವುದನ್ನು ಪೊಲೀಸಿನವರು ಕಲಿತಿದ್ದಾರೆ.

ಶ್ರೀ ಡಿ. ದೇವರಾಜ ಅರಸ್ :—ಇಲ್ಲ ಸ್ವಾಮಿ, ನೀವು ಏನು ಮಾಡಿದರೂ ಸುಮ್ಮನಿರೋಣ.

ಶ್ರೀ ವಾಟಾಳ್ ನಾಗರಾಜ್ :—ಪೊಲೀಸ್ ಇಲಾಖೆಗೆ ದಕ್ಷತೆ ಇಲ್ಲ ಎಂದು ನಾನು ಹೇಳು ತ್ತೇನೆ. ದೇಶಕ್ಕೆ ಸ್ವಾತಂತ್ರ್ಯ ಬಂದಮೇಲೆ ಇಲ್ಲಿಯವರೆಗೂ ಪೊಲೀಸ್ ಇಲಾಖೆಗೆ ಬೇಕಾದಷ್ಟು ಹಣವನ್ನು ಖರ್ಚು ಮಾಡಿದ್ದಾರೆ. ಆದರೆ ಈ ಪೊಲೀಸ್ ಇಲಾಖೆಯಲ್ಲಿ ಸಂಪೂರ್ಣ ಬದಲಾವಣೆ ಆಗಬೇಕು. ಅದಕ್ಕೆ ಒಂದು ಹೊಸ ರೂಪರೇಖೆಯನ್ನು ಕೊಡಬೇಕು. ಸರ್ಕಾರದವರು ಮನಸ್ಸು ಮಾಡಿದರೆ ಯಾರನ್ನು ಬೇಕಾದರೂ ಹಿಡಿಯಬಹುದು. ನನ್ನ ಮೇಲೆ ಸಿ. ಐ. ಡಿ., ಡಿ. ವೈಎಸ್. ಪಿ ಚಂದ್ರಶೇಖರ್ ಎನ್ನುವವರನ್ನು ಬಿಟ್ಟಿದ್ದಾರೆ. ಯಾವ ಕಾರಣದಿಂದ ನನ್ನ ಮೇಲೆ ಸಿ. ಐ. ಡಿ ಯನ್ನು ಹಾಕಿದ್ದಾರೆ. ನನ್ನ ಮೇಲೆ ಏನು ಮಾಡುತ್ತಾರೆ ? ನಮ್ಮ ಹತ್ತಿರ ಏನೂ ಅವರಿಗೆ ಸಿಕ್ಕುವುದಿಲ್ಲ. ಮುಖ್ಯ ಮಂತ್ರಿಗಳಿಗೆ ನನ್ನ ಮೇಲಿನ ರಿಪೋರ್ಟಿನಲ್ಲಿ ಏನೂ ಸಿಕ್ಕಿಲ್ಲ. ನನಗೆ ಗೊತ್ತು. ನೀವು ಈ ಸಣ್ಣ ಇಳಿದಿರುವುದು ಸರಿಯಲ್ಲ. ಯಾವ ಕಾರಣಕ್ಕಾಗಿ ನನ್ನ ಮೇಲೆ ಸಿ. ಐ. ಡಿ. ಯನ್ನು ಹಾಕಿದ್ದೀರಿ.

ಬಾಗಿಲತಾಯ ಅವರನ್ನು ಫುಡ್ ಸೆಲ್ಲಿಗೆ ಹಾಕಿದ್ದೀರಿ. ಅವರ ನಡತೆ ಮತ್ತು ಭ್ರಷ್ಟಾಚಾರದ ಬಗ್ಗೆ 15 ಜನ ನಿಮ್ಮ ಪಕ್ಷದವರೇ ಅರ್ಜಿ ಸಲ್ಲಿಸಿ ಅವರನ್ನು ಬೇರೆ ಕಡೆಗೆ ವರ್ಗ ಮಾಡಿ ಎಂದು ಹೇಳಿದ್ದಾರೆ. ಅವರು ದೊಡ್ಡ ದೊಡ್ಡ ರಾಜಕಾರಣಿಗಳನ್ನು ಹಿಡಿದು ಫುಡ್ ಸೆಲ್ಲಿಗೆ ಹಾಕಿಸಿ ಕೊಂಡರು ಒಬ್ಬರು ಸಬ್ ಇನ್‌ಸ್ಪೆಕ್ಟರು ಏನಾದರೂ ತಪ್ಪು ಮಾಡಿದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಿ. ಈಗ ಶ್ರೀಮಾನ್ ಬಾಗಿಲತಾಯ ಅವರು ಸುಮಾರು 50 ಲಕ್ಷ ರೂಪಾಯಿ ಗಳ ಆಸ್ತಿಯನ್ನು ಮಾಡಿಕೊಂಡಿದ್ದಾರೆ. ಅವರ ಮೇಲೆ ಜುಡಿಷಿಯಲ್ ಎನ್‌ಕ್ವೈರಿ ಮಾಡಿ.

ಶ್ರೀ ಬಿ. ಪುಟ್ಟಸ್ವಾಮಯ್ಯ :—ಚಿನ್ನ, ರತ್ನ, ಮುತ್ತು ಸೇರಿ ಒಂದು ಕೋಟಿ ರೂಪಾಯಿಗಿಂತ ಮೇಲಿದೆ.

ಮಾನ್ಯ ಶ್ರೀ ಕೆ. ಕೆ. ಮೂರ್ತಿಯವರು ಏನು ಹೇಳಿದ್ದಾರೆಂದರೆ, ಒಬ್ಬ ಆಫೀಸರ್ ಆಗಲೀ ಅಥವಾ ಸಬ್ ಇನ್‌ಸ್ಪೆಕ್ಟರ್ ಆಗಲೀ ನನ್ನ ಹತ್ತಿರ ಬಂದು ಹೇಳುವುದಕ್ಕೆ ಹೆದರುತ್ತಾರೆಂದು ಹೇಳಿದ್ದಾರೆ. ಮಾನ್ಯ ಶ್ರೀ ವಾಟಾಳ್ ನಾಗರಾಜ್ ಅವರಿಗೆ ಬೇಕಾದರೆ ಹೇಳಿ, ನನ್ನ ವಿಷಯ ಅವರಲ್ಲಿ ಮಾತನಾಡಿ, ಏನೂ ಪರವಾಇಲ್ಲವೆಂದು ಕೆಲವು ಸಂದರ್ಭಗಳಲ್ಲಿ ಹೇಳಿದ್ದಾರೆ. ಒಂದು ಸಂದರ್ಭದಲ್ಲಿ ಮಾನ್ಯ ಶ್ರೀ ಕೆ. ಕೆ. ಮೂರ್ತಿಯವರ ವಿಷಯದ ಬಗ್ಗೆ ಪೊಲೀಸ್ ಸ್ಟೇಷನ್ನಿನಲ್ಲಿ ಚರ್ಚೆಗೆ ಬಂದಾಗ ಅಲ್ಲಿನ ಸಬ್ ಇನ್‌ಸ್ಪೆಕ್ಟರ್ ಮಾತು ನಡೆಯಲ್ಲಿಲ್ಲ. ಕೂಡಲೇ ಆಗ ಒಂದು ವಾರದೊಳಗೆ ಅವನನ್ನು ಅಲ್ಲಿಂದ ಕಿತ್ತುಹಾಕಿ ಅಲ್ಲಿನ ಸಿ.ಐ.ಡಿ. ಬ್ರಾಂಚಿಗೆ ಹಾಕಿದರು. ಅಂದ ಮೇಲೆ ಅವರಿಗೇನು ರಕ್ಷಣೆ ಇದೆ ? ಇವತ್ತು ನಾವು ಇಲ್ಲಿ ಅಸೆಂಬ್ಲಿಯಲ್ಲಿ ಮಾತನಾಡಿದ್ದು ನಿಮ್ಮ

ಕಮಿಷನರ್ ಅವರಿಗೆ ಗೊತ್ತಾಗುತ್ತದೆ. ಪೋಲೀಸ್ ಕಮಿಷನರ್‌ಗಳಲ್ಲಿ ಕೆಲವರು ಒಳ್ಳೆಯವರು ಇದ್ದಾರೆ. ಮಾನ್ಯ ಶ್ರೀ ಗರುಡಾಚಾರ್ ಅವರು ಬೆಂಗಳೂರಿನಲ್ಲಿಯೇ ಇದ್ದಾರೆ. ಅವರು ಬಹಳ ಚೆನ್ನಾಗಿ ಕೆಲಸ ಮಾಡಿದ್ದಾರೆ. ಮಾನ್ಯ ಶ್ರೀಮಾಧವರಾವ್ ಅವರು ಎಕ್ಸೈಜ್ ಡಿಪಾರ್ಟ್‌ಮೆಂಟಿನಲ್ಲಿದ್ದಾರೆ. ಅವರನ್ನು ಈಗ ಫಾರೆಸ್ಟ್ ಡಿಪಾರ್ಟ್‌ಮೆಂಟಿಗೆ ಹಾಕಿದ್ದಾರೆ. ಇನ್ನೂ ಮಾನ್ಯ ಶ್ರೀ ಚಂದ್ರಶೇಖರ್ ಅವರೂ, ಮಾನ್ಯ ಶ್ರೀ ವಿಜಯ ದೇವರಾಜೆಅರಸ್‌ಅವರೂ,—ಹೀಗೆ ಇನ್ನೂ ಅನೇಕ ಜನ ಒಳ್ಳೆಯ ಅಧಿಕಾರಿಗಳು ಇದ್ದಾರೆ. ಇನ್ನು ಮಾನ್ಯ ಶ್ರೀ ವೀರಭದ್ರಯ್ಯನವರನ್ನು ಸಂಸ್ಥಾಕಾಂಗ್ರೆಸ್ ಏಜೆಂಟ್‌ರಾಗಿರುವಂತೆ ಹಿಂದೆ ಮಾಡಿದ್ದರು. ಅದು ಹಿಂದೆ ಸಂಸ್ಥಾಕಾಂಗ್ರೆಸ್ ಸರ್ಕಾರದಲ್ಲಿ ಅವರು ಕಮಿಷನರ್ ಆಗಿದ್ದಾಗ ಮಾಡಿದ ಕೆಲಸದಿಂದ ಗೊತ್ತಾಯಿತು. ಆದರೆ ಯಾವ ಜಾತಿಯವರೇ ಆಗಲಿ, ಅವರು ಎಲ್ಲಿಯೇ ಅಧಿಕಾರಿಗಳಾಗಿರಲಿ, ಜಾತೀಯ ಮನೋಭಾವನೆಯನ್ನು ಮೊದಲು ಬಿಡಬೇಕು. ಏಕೆಂದರೆ ಇತ್ತೀಚೆಗೆ ಬಹಳವಾಗಿ ಒಬ್ಬರ ಮೇಲೆ ಇನ್ನೊಬ್ಬರು ಅಧಿಕಾರಿಗಳು ಎತ್ತಿಕಟ್ಟುತ್ತಿದ್ದಾರೆ. ಇದು ತಪ್ಪಬೇಕು. ನಿಮ್ಮ ಒಂದು ಅಧಿಕಾರದ ಗದ್ದುಗೆಯಲ್ಲಿ ಇಂತಹ ಕೆಲಸಗಳಿಗೆ ಹೆಚ್ಚಿಗೆ ಅವಕಾಶವಾಗುತ್ತದೆ. ಇನ್ನು ಕೇವಲ 6 ತಿಂಗಳುಗಳಲ್ಲಿ ನಿಮ್ಮ ಅಧಿಕಾರ ನಿಜವಾಗಿಯೂ ನುಚ್ಚುನೂರಾಗಿ ನಿರ್ನಾಮವಾಗಿ ಹೋಗುತ್ತದೆ. ಆದರೆ ನಾವು ಅಧಿಕಾರಕ್ಕೆ ಬರುವುದಿಲ್ಲ. ತಮ್ಮ ಅಧಿಕಾರವನ್ನು ತಪ್ಪಿಸಲು 43 ಜನರು ನಿಮ್ಮ ಮೇಲೆ ತಿರುಗಿ ಬಿದ್ದಿದ್ದಾರೆ. ಅಂತಹವರ ಮೇಲೆ ಪೋಲೀಸಿನವರು ದಬ್ಬಾಳಿಕೆ ಮಾಡುತ್ತಿದ್ದಾರೆ. ಇದರಿಂದ ನಿಮ್ಮ ಕೈಕೆಳಗೆ ಇರತಕ್ಕ ಅಧಿಕಾರ ವರ್ಗದವರಿಂದ ಹೆಚ್ಚಿಗೆ ನಿಮಗೆ ಸಹಕಾರ ಸಿಗಲಾರದು. ಹಿಂದೆ ಹೈದರಾಬಾದ್ ನೈಜಾಮರ ಅಧಿಕಾರ, ಮೈಸೂರು ಮಹಾರಾಜರ ವೈಭವ ಎಲ್ಲವನ್ನೂ ನೋಡಿದ್ದೇವೆ. ಅವರ ಒಂದು ಪರಿಸ್ಥಿತಿ ಈಗ ಏನಾಯಿತು, ಕಾಲಪರಿಸ್ಥಿತಿ ಎಷ್ಟರಮಟ್ಟಿಗೆ ಬದಲಾವಣೆಯಾಗಿದೆಯೆಂಬುದನ್ನು ನೋಡಬೇಕು. ಕೆಲವು ಸ್ಟೇಟ್ ಮಿನಿಸ್ಟರ್ಸ್ ರಬ್ಬರ್‌ಸ್ಟಾಂಪ್ ಮಾಡಿಕೊಂಡಿದ್ದಾರೆ. ಅವರಿಗೆ ಮರ್ಯಾದೆ ಇದ್ದರೆ ಅಧಿಕಾರ ಬಿಟ್ಟುಹೋಗಬೇಕು. ಅವರಿಗೆ ಕೊಟ್ಟಿರುವ ಅಧಿಕಾರ ಏನೇನೂ ಇಲ್ಲ. ಅವರಿಗೆ ಒಂದು ಕಾರು, ಬಂಗಲೆ, ಸಿಬ್ಬಂದಿ, ಹಾಗೂ ಇತರ ಸೌಕರ್ಯಗಳೂ ಎಲ್ಲಾ ಇವೆ. ಏತಕ್ಕೆ ಇಷ್ಟು ಸೌಕರ್ಯಗಳು ಅವರಿಗೆ ಇವೆಯೋ ಗೊತ್ತಿಲ್ಲ. ಅವರ ಕೈಲಿ ಯಾವುದಕ್ಕೂ ಸ್ವತಂತ್ರವಾಗಿ ಒಂದು ಆರ್ಡರ್ ಮಾಡುವುದಕ್ಕೆ ಅಧಿಕಾರವಿಲ್ಲ. ಕೇವಲ ಒಬ್ಬ ಅಸಿಸ್ಟೆಂಟ್ ಕಮಿಷನರನ್ನು ವರ್ಗಮಾಡುವುದಕ್ಕೆ ಅಧಿಕಾರವಿಲ್ಲ. ಕೆಲವರಿಗೆ ದಕ್ಷತೆ ಇದೆ, ಎಫಿಷಿಯನ್ಸಿ ಇದೆ. ಕೆಲವರು ಇನ್ನೂ ಯುವಕರಾಗಿದ್ದಾರೆ.

ಶ್ರೀ ಎಚ್. ಸಿದ್ದವೀರಪ್ಪ :—ಮಾನ್ಯ ಸದಸ್ಯರು ಹರಿಕಥೆ ಮಾಡುವ ಹಾಗೆ ಮಾತನಾಡುತ್ತಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್ : —ಅವರಿಗೆ ಇಲ್ಲಿ ಕೆಲಸ ಕಡಿಮೆ ಇದ್ದರೂ ಹೊರಗಡೆ ಕೆಲಸ ಬಹಳ ಹೆಚ್ಚಾಗಿದೆ. ಆದ್ದರಿಂದ, ಪಾಪ, ಅವರನ್ನು ರಬ್ಬರ್ ಸ್ಟಾಂಪ್ ಮಂತ್ರಿಗಳನ್ನಾಗಿ ಮಾಡಬೇಡಿ.

ಶ್ರೀ ಬಿ. ಪುಟ್ಟಸ್ವಾಮಯ್ಯ : —ಮಂತ್ರಿಗಳಿಗೆ ಒಂದು ಮಾತು ಹೇಳುತ್ತೇನೆ. ಬರೀ ಗಂಡಸರನ್ನೇ ಪ್ರೈವೆಟ್ ಸೆಕ್ರೆಟರಿಯನ್ನಾಗಿ ಮಾಡಿದರೆ, ಹೆಂಗಸರಿಗೆ ಅಪಮಾನ ಮಾಡಿದಂತಾಗುತ್ತದೆ,

ಶ್ರೀ ಎಂ.ಎಸ್. ಕೃಷ್ಣನ್ :—ಅವರಿಗೆ ಎಷ್ಟು ವಯಸ್ಸು ಆಗಿರಬೇಕೆಂಬುದು ಒಂದು ಪ್ರಶ್ನೆ.

ಶ್ರೀ ವಾಟಾಳ್ ನಾಗರಾಜ್ :—ನಮ್ಮಲ್ಲಿ ಒಂದು ಇಲಾಖೆಯೇ ಇದೆ. ಅಲ್ಲಿಂದ ಪಂಚಾಯತಿ ರಾಜ್ಯ ಎಂಬ ಪುಸ್ತಕ ಬರುತ್ತಿದೆ. ಮಾರ್ಚ್‌ಆಫ್ ಮೈಸೂರು ಎಂಬುದು ಬೇರೆ ಬರುತ್ತಿದೆ. ಅದು ಏಕೆ ಬೇಕು ? ಅದು ಕೇವಲ ಮಾನ್ಯ ಮುಖ್ಯಮಂತ್ರಿಗಳ ಮುಖ ಫೋಟೊ ಹಾಕುವುದಕ್ಕೆ

ಹಾಗೂ ಇತರೇ ಮಂತ್ರಿಗಳ ಫೋಟೋ ಹಾಕುವುದಕ್ಕೆ ಮಾತ್ರ ಇರುವುದೆಂದು ಕಾಣುತ್ತದೆ. ರಾಜ್ಯೋತ್ಸವ ನ್ಯೂಸರೀಲ್ ಎಂದು ತೋರಿಸಿದ್ದಾರೆ. ಅದರಲ್ಲಿ ಎಲ್ಲ ಅವರದೇ, ನಮ್ಮನ್ನು ಅದರಲ್ಲಿ ತೋರಿಸಿಲ್ಲ. ಆದ್ದರಿಂದ ಇಂತಹ ಅನ್ಯಾಯಗಳನ್ನು ಮುಂದೆ ಮಾಡದೇ ಇರುವ ಹಾಗೆ ಸರ್ಕಾರದವರು ಕ್ರಮ ತೆಗೆದುಕೊಳ್ಳಬೇಕು. 16ನೇ ಕರ್ಣಾಟಕ ರಾಜ್ಯೋತ್ಸವ ಸಂದರ್ಭದಲ್ಲಿ ಅನೇಕ ಸಂಗತಿಗಳು ಪ್ರಕಟವಾಗಬೇಕಾಗಿತ್ತು. ಅವೆಲ್ಲವೂ ಈ ಇಲಾಖೆಯಲ್ಲಿದೆ. ಯಾವ ಒಂದು ಸಣ್ಣ ಪತ್ರಿಕೆಗಳಿಗೆ ಒಂದು ಜಾಹಿರಾತನ್ನು ಕೊಟ್ಟಿಲ್ಲ. ಕೇವಲ ದೊಡ್ಡ ಪತ್ರಿಕೆಗಳಿಗೆ ಮಾತ್ರ ಇದರ ಬಗ್ಗೆ ಜಾಹಿರಾತು ಕೊಟ್ಟಿದ್ದಾರೆ. ಆದ್ದರಿಂದ ಇನ್ನುಮುಂದೆ ಇಂತಹ ಸಂದರ್ಭಗಳಲ್ಲಿ ಜಿಲ್ಲಾ ಹಾಗೂ ತಾಲ್ಲೂಕುಗಳಲ್ಲಿರುವ ಸಣ್ಣ ಹಾಗೂ ದೊಡ್ಡ ಪತ್ರಿಕೆಗಳಿಗೆ ಇವುಗಳ ಬಗ್ಗೆ ಒಂದೇ ಸಮನಾಗಿ ಜಾಹಿರಾತುಗಳನ್ನು ಕೊಡಬೇಕಾಗುತ್ತದೆ.

ಇನ್ನೊಂದು ವಿಷಯ. ನಾನು ಅನೇಕ ಸಾರಿ ಜೈಲಿಗೆ ಹೋಗಿದ್ದೇನೆ. ಅಲ್ಲಿನವರ ಪರಿಸ್ಥಿತಿಯನ್ನು ನಾನು ತಿಳಿದಿದ್ದೇನೆ. 25ನೇ ವರ್ಷದ ಬೆಳ್ಳಿ ಹಬ್ಬದ ಸಂದರ್ಭದಲ್ಲಿ ಹೆಚ್ಚಿನ ಶಿಕ್ಷೆಯನ್ನು ಅನುಭವಿಸಿರುವವರು ಅದರಲ್ಲಿಯೂ ಹೆಚ್ಚು ವಯಸ್ಸಾಗಿರುವವರನ್ನು ಜೈಲಿನಿಂದ ಬಿಡುಗಡೆ ಮಾಡಬೇಕೆಂದು ಹೇಳುತ್ತೇನೆ. ಜಪ್ತಿ ಶಿಕ್ಷೆಯಾಗಿ ಎಲ್ಲೋ ಕದ್ದು ಬಂದು ಕೇವಲ 2 ತಿಂಗಳು ಆಗಿದ್ದರೆ ಅಂತಹವರನ್ನು ಬಿಟ್ಟಿರುವಾಗ ಜಪ್ತಿ ಶಿಕ್ಷೆಯಾಗಿರುವವರನ್ನೆಲ್ಲಾ ಈಗ ಬಿಡುಗಡೆ ಮಾಡಿ. ಮಾನ್ಯ ಶ್ರೀ ದೇವರಾಜ ಅರಸ್ ಅವರು ಪೋಲೀಸ್ ವ್ಯಾನಿನಲ್ಲಿ ಗೂಂಡಾಗಳನ್ನು ಕುಳ್ಳಿರಿಸಿಕೊಂಡು ನಮ್ಮಂತಹವರ ವಿಷಯದಲ್ಲಿ ಅನೇಕ ರೀತಿಯಲ್ಲಿ ಗಲಾಟೆ ಮಾಡಿಸುತ್ತಿದ್ದಾರೆ. ಇದರಲ್ಲಿ ಜಿಲ್ಲಾ ಪ್ರಕರಣಗಳು ಅನೇಕ ಇವೆ. ಮಾನ್ಯ ಶ್ರೀ ಕೆ. ಕೆ. ಮೂರ್ತಿಯವರು ಅವರ ಏಜೆಂಟರಾಗಿದ್ದಾರೆ. ಅವರ ಮೇಲೆ ನನ್ನ ಹತ್ತಿರ 18 ಚಾರ್ಜಸ್ ಇವೆ. ತಮ್ಮ ಅಪ್ಪಣೆಯ ಮೇರೆಗೆ ಈ ಸದನದಲ್ಲಿಯೇ ಮುಂದೆ ಆ ಎಲ್ಲ ಚಾರ್ಜುಗಳನ್ನು ಇಡುತ್ತೇನೆ. ಮಾನ್ಯ ಮುಖ್ಯ ಮಂತ್ರಿಗಳ ಬಗ್ಗೆ, ಒಬ್ಬ ಐ.ಜಿ.ಪಿ. ಬಗ್ಗೆ, ಎಂ.ಎಲ್.ಎ. ಗಳ ಬಗ್ಗೆ ಹಾಗೂ ಇತರೇ ಮಂತ್ರಿಗಳ ಬಗ್ಗೆ ಹೆಚ್ಚಿನ ಕಾರುಬಾರು ಮಾಡತಕ್ಕ ಒಬ್ಬ ಮಾನ್ಯ ಶ್ರೀ ಕೆ. ಕೆ. ಮೂರ್ತಿಯವರ ನೀತಿ ನಿಜವಾಗಿ ಒಳ್ಳೆಯದಲ್ಲವೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ರಾಮಸ್ವಾಮಿ (ಆನೇಕಲ್) :—ಸನ್ಮಾನ್ಯ ಸಭಾಪತಿಯವರೇ, ಈ ದಿವಸ ಏನು ನಮ್ಮ ಮುಖ್ಯ ಮಂತ್ರಿಗಳು ಸಭೆಯ ಮುಂದೆ ಬೇಡಿಕೆಗಳನ್ನು ಮಂಡಿಸಿದ್ದಾರೆ ಅವುಗಳನ್ನೆಲ್ಲಾ, ನಾನು ಸಂಪೂರ್ಣವಾಗಿ ಬೆಂಬಲಿಸುತ್ತ ನಾಲ್ಕಾರು ಮಾತುಗಳನ್ನು ಹೇಳಬಯಸುತ್ತೇನೆ.

ಮೊಟ್ಟಮೊದಲನೆಯದಾಗಿ ನಾನು ಎಕ್ಸೈಜ್ ಇಲಾಖೆಯ ಬಗ್ಗೆ ಹೇಳುವುದಾದರೆ ಈ ನಮ್ಮ ಸರ್ಕಾರ ಅಸ್ತಿತ್ವಕ್ಕೆ ಬಂದ ಮೇಲೆ ಬಡವರೂ, ನಿರ್ಗತಿಕರೂ ಮತ್ತು ಕಾರ್ಮಿಕರೂ ನಮ್ಮ ಆಡಳಿತ ಪಕ್ಷಕ್ಕೆ ಓಟ್ ಮಾಡಿದ್ದಾರೆ. ಆದರೆ ಈ ದಿವಸ ಈ ಇಲಾಖೆಗೆ ಸಂಬಂಧಪಟ್ಟ ಈ ಹೆಂಡ ಸಾರಾಯಿಗಳ ಮಾರಾಟ ಏನಿದೆ ಇದು ಕೆಲವೇ ಪಟ್ಟಭದ್ರ ಹಿತಾಸಕ್ತಿಗಳ ಕೈಸೇರಿ ಅದನ್ನು ಹದಗೆಡಿಸುತ್ತಿದ್ದಾರೆ, ಅದನ್ನು ಅಡಲ್ಟ್ರೇಟ್ ಮಾಡಿ ಮಾರಾಟ ಮಾಡುತ್ತಿದ್ದಾರೆ. ಇದರಿಂದ ಬಡವರ ಸ್ಥಿತಿ ಬಹಳ ಚಿಂತಾಜನಕವಾಗಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ಇರತಕ್ಕ ಕಾರ್ಮಿಕ ವರ್ಗದವರು ಹೆಂಡವನ್ನು ಸೇವನೆ ಮಾಡುತ್ತಾರೆ. ಅದಕ್ಕಾಗಿ ನಾನು ಸಲಹೆ ಮಾಡುತ್ತಿರುವುದೇನೆಂದರೆ ಯಾವ ಅಡಲ್ಟ್ರೇಷನ್ನನ್ನೂ ಮಾಡದೆ ಹೆಂಡವನ್ನು ಸುಸಜ್ಜಿತವಾದ ರೀತಿಯಲ್ಲಿ ಮರದಿಂದ ಹೇಗೆ ಇಳಿಸಲ್ಪಡುತ್ತದೆಯೋ ಹಾಗೇ ಅದನ್ನು ಸೀಲ್ ಮಾಡಿ ತಂದು ಅದನ್ನು ಜನರಿಗೆ ವಿತರಣೆ ಮಾಡಬೇಕೆಂದು ಹೇಳುತ್ತೇನೆ. ಆದರೆ ಮಾನ್ಯ ಆರೋಗ್ಯ ಸಚಿವರಿಗೆ ಗೊತ್ತಿರಬಹುದು, ಈ ದಿವಸ ದೇಶದಲ್ಲಿ ರೋಗಿಗಳ ಸಂಖ್ಯೆ ಹೆಚ್ಚುತ್ತಿದೆ. ಜನರು ಈ ಹೆಂಡ ಸಾರಾಯಿಗಳನ್ನು ಕುಡಿದು ತಮ್ಮ ಆರೋಗ್ಯವನ್ನು ಹೇಗೆ ಹಾಳು ಮಾಡಿಕೊಳ್ಳುತ್ತಿದ್ದಾರೆಂಬುದು ದಿನ ಬೆಳಗಾದರೆ ನಾನು ಪತ್ರಿಕೆಗಳಲ್ಲಿ ಓದುತ್ತಿದ್ದೇನೆ. ಇದಕ್ಕೆ ಡೀನೇಚರ್ಡ್ ಸ್ಪಿರಿಟ್ ಇತ್ಯಾದಿ

ಏನೇನೋ ವಸ್ತುಗಳನ್ನು ಇದರಲ್ಲಿ ಬೆರೆಸಿ ಮಾರಾಟ ಮಾಡುತ್ತಿರುವುದರಿಂದ ಜನರ ಆರೋಗ್ಯ ಕೆಡುತ್ತಿದೆ. ಕೆಲವು ಕಂಟ್ರಾಕ್ಟರುಗಳು ಅಂದರೆ ಖೋಡೆ ಮತ್ತು ನಂದಿ ಬ್ರೆವರೀಸ್ ಇವರಿಬ್ಬರ ಕೈವಾಡವೇ ಗ್ರಾಮಾಂತರ ಪ್ರದೇಶಗಳಲ್ಲಿ ಕೂಡ ಜಾಸ್ತಿಯಾಗಿದೆ. ಆದರೆ ಇನು ಮುಂದಕ್ಕಾದರೂ ಈ ಪಾನೀಯಂಗಳನ್ನು ಬಡವರಿಗೆ ಸುಲಭದರದಲ್ಲಿ ಒದಗಿಸುವುದಕ್ಕೆ ಪ್ರಯತ್ನ ಮಾಡಬೇಕು. ಈ ದಿವಸ ಈ ಹೆಂಡ ಸಾರಾಯಿ ಇವು ಕೆಲವು ಶ್ರೀಮಂತರ ಕೈಗೆ ಸಿಕ್ಕಿ ಬಹಳ ಅನ್ಯಾಯ ನಡೆಯುತ್ತಿದೆ. ಅದನ್ನು ತಪ್ಪಿಸಬೇಕೆಂದು ನಾನು ಮಾನ್ಯ ಸರಕಾರದವರನ್ನು ಕಡ್ಡಾಯವಾಗಿ ಪ್ರಾರ್ಥಿಸುತ್ತೇನೆ. ಇನ್ನು ಎಕ್ಸೈಜ್ ಇಲಾಖೆಯಲ್ಲಿ ಕೇಡರ್ ಅಂಡ್ ರೆಕ್ರೂಯಿಟ್‌ಮೆಂಟ್ ರೂಲುಗಳಿಲ್ಲ. ಸೀನಿಯಾರಿಟಿ ಲಿಸ್ಟಿಲ್ಲ. ಇಲ್ಲಿ ಸ್ವಜಾತಿಯುವರಿಗೆ ಮಾತ್ರ ಪ್ರೋತ್ಸಾಹ ಮನ್ನಣೆಗಳು ದೊರೆಯುತ್ತಿವೆ. ಅಲ್ಲಿ ಒಳ್ಳೆ ದಕ್ಷತೆ, ಪ್ರಾಮಾಣಿಕತೆ ಅನುಭವವುಳ್ಳ ನೌಕರರಿದ್ದರೂ ಅವರಿಗೆ ಮನ್ನಣೆಯಿಲ್ಲ, ಪ್ರೋತ್ಸಾಹವಿಲ್ಲ. ಅಲ್ಲಿ ಕೆಲವು ದಕ್ಷ ಅಧಿಕಾರಿಗಳು ಹೆಚ್ಚಿನ ಕ್ವಾಲಿಫಿಕೇಷನ್ ಉಳ್ಳವರಿದ್ದರೂ ಅವರಿಗೆ ಪ್ರಮೋಷನ್ ಸಿಗುತ್ತಿಲ್ಲ. ಅಲ್ಲಿ ಬಹಳ ಅನ್ಯಾಯ ನಡೆಯುತ್ತಿದೆ. ಸರ್ಕಾರದವರು ಯೋಗ್ಯರಿಗೆ ವಿದ್ಯಾವಂತರಿಗೆ, ದಕ್ಷರಿಗೆ ಪ್ರೋತ್ಸಾಹ ಸಿಗುವಂತೆ ಒಂದು ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ಇಲಾಖೆಯಲ್ಲಿ ಕೆಲವರಿಗೆ ಪ್ರಮೋಷನ್ ವಿಚಾರದಲ್ಲಿ ಬಹಳ ಅನ್ಯಾಯ ನಡೆದುದರಿಂದ ಅವರು ಹೈಕೋರ್ಟಿಗೆ ಹೋಗಿ ಅಲ್ಲಿಂದ ಅವರಿಗೆ ಪ್ರಮೋಷನ್ ಕೊಡಬೇಕಾಗಿರುತ್ತೆಂದು ಆಜ್ಞೆಯನ್ನು ತಂದಿದ್ದರೂ ಕೂಡ ಅದನ್ನು ಇನ್ನೂ ಇಂಪ್ಲಿಮೆಂಟ್ ಮಾಡಿಲ್ಲ. ಇನ್ನು ಈ ಇಲಾಖೆಯಲ್ಲಿ ಸೂಪರಿಂಟೆಂಡೆಂಟ್ ಮತ್ತು ಡೆಪ್ಯುಟಿ ಸೂಪರಿಂಟೆಂಡೆಂಟ್ ಆಫ್ ಎಕ್ಸೈಜ್ ಅಧಿಕಾರಿಗಳು ಮತ್ತು ಸ್ಕ್ವಾಡ್ ಅಂತ ಇದೆ. ಇವರನ್ನು ವರ್ಗಾವರ್ಗಿ ಮಾಡುವುದರಲ್ಲಿ ಯಾವ ಒಂದು ಸರಿಯಾದ ಧೋರಣೆಯೂ ಇರುವುದಿಲ್ಲ. ಇನ್ನು ಅಲ್ಲಿ ಕೆಲವು ಸಬ್ ಇನ್‌ಸ್ಪೆಕ್ಟರುಗಳಿದ್ದಾರೆ. ಅವರು ಹಿಂದೆ ಎಲ್ಲೆಲ್ಲಿ ಇದ್ದರು. ಏನು ಕೆಲಸಗಳನ್ನು ಮಾಡಿದ್ದಾರೆ, ಅವರ ಗುಣಚಾರಿತ್ರ್ಯಗಳೇನು ಎಂಬುದನ್ನು ತಿಳಿದು ಕೆಲಸ ಮಾಡಬೇಕು. ಅಲ್ಲದೆ ಅವರು ಎಷ್ಟೇ ದಕ್ಷರಾಗಿರಲಿ, ಒಳ್ಳೆಯವರಾಗಿರಲಿ ಎರಡು ವರ್ಷಗಳಿಗೆ ಮೇಲೆ ಒಂದು ಕಡೆ ಒಬ್ಬರನ್ನು ಇಡಬಾರದು, ಅವರನ್ನು ಅಲ್ಲಿಂದ ಬೇರೆ ಕಡೆಗೆ ವರ್ಗಮಾಡಬೇಕು. ಆದರೆ ಖಾಸಗೀ ಜನರ ಎಂ. ಎಲ್. ಎ. ಒತ್ತಡಕ್ಕೆ ಮಣಿದು ಕೆಲವರನ್ನು ಒಂದು ಕಡೆ ಇಡುವುದಕ್ಕೆ ಅವಕಾಶ ಕೊಡುತ್ತಿದ್ದಾರೆ. ಹೀಗಾಗಿ ಕೆಲವರು 20 ವರ್ಷಗಳಿಂದಲೂ ಒಂದೇ ಕಡೆ ಕೆಲಸಮಾಡಿ ಕೊಂಡಿರುತ್ತಾರೆ. ಇಂಥವರ ವರ್ಗಕ್ಕೆ ಆಫೀಸಿನಲ್ಲಿ ಏನಾದರೂ ಒಂದು ನೋಟನ್ನು ಪುಟಪ್ ಮಾಡಿದರೆ ಸಾಕು ಅದು ಹೇಗೋ ಮಾಡಿ ಏನೋ ಮಾಡಿ ಅದನ್ನು ಬೈಲಿಗೆ ತಂದು ಅದಕ್ಕೆ ಇನ್‌ಫ್ಲುಯೆನ್ಸ್ ಮಾಡಿಸಿ ಅದನ್ನು ಕ್ಯಾನ್‌ಸಲ್ ಮಾಡುವುದಕ್ಕೆ ಪ್ರಯತ್ನಗಳು ನಡೆಯುತ್ತಿವೆ. ಆದುದರಿಂದ ಹೀಗೆ ಆಫೀಸಿನ ಗುಟ್ಟನ್ನು ಬಯಲು ಮಾಡತಕ್ಕವರಿಗೆ ಉಗ್ರ ಶಿಕ್ಷೆ ವಿಧಿಸಬೇಕೆಂದು ಹೇಳುತ್ತೇನೆ. ಇನ್ನು ಕೇಸುಗಳ ಡಿಟೆಕ್ಷನ್ ವಿಚಾರಕ್ಕೆ ಬಂದರೆ 9258 ಕೇಸುಗಳು ಡಿಟೆಕ್ಟ್ ಆಗಿವೆ. ಅಂಡರ್ ಇನ್‌ವೆಸ್ಟಿಗೇಷನ್ 16295 ಕೇಸುಗಳು, ಕೋರ್ಟಿನಲ್ಲಿ 6176 ಕೇಸುಗಳೂ ಮತ್ತು ಕೆಮಿಕಲ್ ಎಗ್ಸಾಮಿನರಲ್ಲಿ 2294 ಕೇಸುಗಳಿರುತ್ತವೆ ಎಂದು ಹೇಳಿದೆ. ಆದರೆ ಈ ವಿಚಾರದಲ್ಲಿ ಸರ್ಕಾರಕ್ಕೆ ದೊಡ್ಡ ಅನ್ಯಾಯವಾಗುತ್ತಿದೆ. ಇಲ್ಲಿ ಕೆಲಸ ಮಾಡತಕ್ಕ ಅಸಿಸ್ಟೆಂಟ್ ಪ್ರಾಸೆಕ್ಯೂಟರ್ಸ್ ಏನಿದ್ದಾರೆ ಅವರು ಒಳ್ಳೇ ರೀತಿಯಲ್ಲಿ ಪಂಚನಾಮೆ ಇತ್ಯಾದಿಗಳನ್ನು ಮಾಡಿ ಒಳ್ಳೇ ರೀತಿಯಲ್ಲಿ ಕೇಸುಗಳನ್ನು ನಡೆಸುವುದಕ್ಕೆ ಒಂದು ಉತ್ತಮ ವ್ಯವಸ್ಥೆಯನ್ನು ಮಾಡ ಬೇಕೆಂದು ಹೇಳುತ್ತೇನೆ. ಈ ದಿವಸ ಗ್ರಾಮಾಂತರ ಪ್ರದೇಶಗಳಲ್ಲಿ ಎಕ್ಸೈಜ್ ಇಲಾಖೆಯಿಂದ ಆಗುತ್ತಿರುವ ಅನ್ಯಾಯವನ್ನು ತಪ್ಪಿಸಬೇಕೆಂದು ಕೇಳಿಕೊಳ್ಳುತ್ತೇನೆ. ಗ್ರಾಮಾಂತರ ಪ್ರದೇಶ ಗಳಲ್ಲಿ ಹೆಂಡ ಸಾರಾಯಿಂಗಳನ್ನು ದೇವಸ್ಥಾನ, ಮಕ್ಕಳು ಓದತಕ್ಕ ಶಾಲೆ ಇತ್ಯಾದಿ ಪವಿತ್ರ ಸ್ಥಳಗಳಲ್ಲಿ ಮಾರಾಟಕ್ಕಾಗಿ ಇಟ್ಟಿರುತ್ತಾರೆ. ಇದರಿಂದ ಊರುಗಳಲ್ಲಿ ವಿನಾ ಕಾರಣ ಜಗಳಕ್ಕೆ

ಕಾರಣವಾಗುತ್ತಿದೆ. ಆದುದರಿಂದ ಇವುಗಳನ್ನು ಊರು ಬಿಟ್ಟು ಆಚೆ ಕಡೆಗಳಲ್ಲಿ ಇಟ್ಟು ಮಾರಾಟ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕು.

ಇನ್ನು ಜನರಲ್ ಅಡ್ಮಿನಿಸ್ಟ್ರೇಷನ್ ಬಗ್ಗೆ ಹೇಳುವುದಾದರೆ—ಇಲ್ಲಿ ರಾಜ್ಯಪಾಲರಾಗಿದ್ದ ಶ್ರೀ ಧರ್ಮವೀರ ಅವರ ಕಾಲಕ್ಕೆ ಆಗಬಾರದ್ದೆಲ್ಲಾ ಆಗಿಹೋಗಿದೆ. ನನಗೆ ತಿಳಿದಿರುವ ಹಾಗೆ ಕೆಲವು ಕಾರ್ಯದರ್ಶಿಗಳು ಸರ್ಕಾರವನ್ನೇ ತಲೆಕೆಳಗು ಮಾಡುವುದಕ್ಕೆ ಹೊರಟಿದ್ದರು. ಜಿ. ಎ. ಡಿ. ನಲ್ಲಿ ಹಾಲಿ ಇರತಕ್ಕ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್‌ಗಳು ಸರಿಯಾಗಿಲ್ಲ. ಅವುಗಳನ್ನು ಸರಿಯಾದ ರೀತಿಯಲ್ಲಿ ರೀಪ್ರಿಂಟ್ ಸಹಾ ಮಾಡಿಸಿಲ್ಲ. ಯಾರಿಗೆ ಪ್ರಮೋಷನ್ ಸಿಕ್ಕಬೇಕೋ ಅವರಿಗೆ ಸಿಕ್ಕುತ್ತಿಲ್ಲ. ಕೆಲವರ ಬಗ್ಗೆ ಎಷ್ಟೇ ಒಳ್ಳೆಯ ಕಾನ್‌ಫಿಡೆನ್‌ಷಿಯಲ್ ರಿಪೋರ್ಟುಗಳಿರಲಿ, ಅವರ ಬಗ್ಗೆ ಎಷ್ಟೇ ಶಾಭಾಸ್‌ಗಿರಿಗಳಿದ್ದರೂ ಅವರಿಗೆ ಪ್ರಮೋಷನ್ ಸಿಕ್ಕಿಲ್ಲ. ನಮ್ಮ ಮುಖ್ಯ ಮಂತ್ರಿಗಳು ನಿಗಾವಹಿಸಿ ಇದನ್ನೆಲ್ಲಾ ಸರಿಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ಜಿ. ಎ. ಡಿ.ನಲ್ಲಿ 20–30 ವರ್ಷಗಳಿಂದ ಕೆಲವರು ಇದ್ದ ಕಡೆಯಲ್ಲೇ ಇದ್ದಾರೆ. ಕೆಲವು ಕ್ಲಾಸ್ ಫೋರ್‌ನಲ್ಲಿದ್ದು ಅಂಡರ್ ಸೆಕ್ರೆಟೆರಿಗಳಾಗಿರತಕ್ಕವರೂ ಇದ್ದಾರೆ. ಫೈನಾನ್ಸ್ ಡಿಪಾರ್ಟ್‌ಮೆಂಟಿನಿಂದ ಇಬ್ಬರು ಅಧಿಕಾರಿಗಳನ್ನು ಇನ್‌ಷೂರೆನ್ಸ್ ಇಲಾಖೆಗೆ ಕಳುಹಿಸಿದ್ದರು. ಅವರಲ್ಲಿ ಒಬ್ಬರು 9ನೇ ತಾರೀಖಿಗೆ ರಿಟೈರಾಗಬೇಕಾಗಿತ್ತು. ಅಂಥವರನ್ನು ಫೈನಾನ್ಸ್ ಡಿಪಾರ್ಟ್‌ಮೆಂಟಿನವರು ಗೌರ್ನಮೆಂಟ್ ಆಫ್ ಇಂಡಿಯಾಕ್ಕೆ ಲೆಂಟ್ ಬೇಸಿಸ್ ಮೇಲೆ ಕಳುಹಿಸಿದರು. ಇಂಡಿಯಾ ಸರ್ಕಾರದವರು—ಅವರನ್ನು ನಾಲಾಯಕ್ ಎಂದು ವಾಪಸ್ ಕಳುಹಿಸಿದರು. ಹಾಗೆ ರಿಟೈರಾದವರ ಜಾಗದಲ್ಲಿ ಬೇರೊಬ್ಬರಿಗೆ ಬಡ್ತಿಮಾಡಿದ ಆರ್ಡರಾಗಿದ್ದರೂ ಅದನ್ನು ಜಾರಿಗೆ ತಾರದೆ ಡಿಲೇ ಮಾಡಿದ್ದಾರೆ. ಇದನ್ನು ಇದುವರೆಗೆ ಅನುಷ್ಠಾನಕ್ಕೆ ತಂದಿಲ್ಲ. ಬಹುಶಃ ಹರಿಜನ ಎಂದು ತರಲಿಲ್ಲವೋ ಏನೋ. ಅದು ಗೊತ್ತಿಲ್ಲ. ಹಣಕಾಸಿನ ಸಚಿವರ ಗಮನಕ್ಕೆ ತರದೆ ಹಣಕಾಸಿನ ಇಲಾಖೆಯ ಸೆಕ್ರೆಟರಿಗಳಾದ ಮಣಿನಾರಾಯಣ ಸ್ವಾಮಿಯವರೇ ಇದರ ಬಗ್ಗೆ ಆಸಕ್ತಿ ವಹಿಸಿ ಕೊನೆಯವರೆಗೆ ನೋಡಿಕೊಂಡರು, ಡೆಸ್‌ಪ್ಯಾಚಿಂಗ್ ಕ್ಲಾರ್ಕ್ ಕೆಲಸದಿಂದ ಹಿಡಿದು ಸೆಕ್ರೆಟರಿಯ ಕೆಲಸದವರೆಗೆ ಅವರೇ ನೋಡಿಕೊಂಡರು. 9ನೆಯ ತಾರೀಖು ರಿಲೀವ್ ಆಗಬೇಕಾದವರನ್ನು ರಿಲೀವ್ ಮಾಡದೆ ಒಂದು ವರ್ಷದ ಅವಧಿಯವರೆಗೆ ಮುಂದುವರೆಸಿದ್ದಾರೆ. ಒಂದು ನಿರ್ದಿಷ್ಟವಾದ ತಾರೀಖಿನಲ್ಲಿ ನಿವೃತ್ತರಾಗಬೇಕಾಗಿದ್ದವರನ್ನು ನಿವೃತ್ತಿಮಾಡದೆ ಅವರಿಗೆ ಎಕ್ಸ್‌ಟೆನ್‌ಷನ್ ಕೊಟ್ಟು ಮುಂದುವರೆಸಿದರು. ಇದರಿಂದ ಪ್ರಮೋಷನ್ ಸಿಕ್ಕಬೇಕಾಗಿದ್ದ ಅಧಿಕಾರಿಗೆ ಬೇಗ ಅದು ಸಿಕ್ಕಲಿಲ್ಲ.

ಕ್ಲಾಸ್ ಫೋರ್‌ನ ಕೆಲವರಿಗೆ ಪ್ರಮೋಷನ್ ಕೊಟ್ಟಿಲ್ಲ, ಅವರಿಗೆ ಎಸ್.ಎಸ್.ಎಲ್.ಸಿ. ಅರ್ಹತೆಯಿದೆ, ಅವರು ಬಡವರು. ಅವರಿಗೆ ನಾಲ್ಕನೆ ದರ್ಜೆಯಿಂದ ಮೂರನೆಯ ದರ್ಜೆಗೆ ಪ್ರಮೋಷನ್ ಕೊಡಬೇಕಾಗಿತ್ತು. ಇದನ್ನು ಹೇಳಿದೆ. ಬಡವರು, ಅವರಿಗೆ ಸಹಾಯ ಮಾಡಿ ಎಂದು ಹೇಳಿದೆ. ಅವರಿಗೆ ಪ್ರಮೋಷನ್ ಕೊಟ್ಟಿಲ್ಲ, ಕೊಡಬೇಕು.

ಪೋಲೀಸ್ ಇಲಾಖೆ. ಈ ಇಲಾಖೆ ಕೆಲಸ ದಕ್ಷತೆಯಿಂದ ನಡೆಯುತ್ತಿಲ್ಲವೆಂದು ಅನೇಕರು ಹೇಳಿದ್ದಾರೆ. ಇದು ನಿಜ. ನಮ್ಮ ಐ.ಜಿ. ಬಹಳ ದಕ್ಷರೆಂದು ಹೆಸರು ಪಡೆದಿದ್ದಾರೆ. ಅವರು ಅಧಿಕಾರಕ್ಕೆ ಬಂದಾಗ ಅವರಿಗೆ ಒಂದು ಪತ್ರ ಬರೆದೆ. ಓವರ್‌ಲೋಡ್ ಮಾಡಿರುವುದನ್ನು ನೋಡಲು ಒಂದು ಸ್ಕ್ವಾಡ್ ಇದೆ, ಅದರಲ್ಲಿ ಒಬ್ಬ ಪೋಲೀಸು ಅಧಿಕಾರಿ ಮತ್ತು ಎಂ.ಎಸ್. ಆರ್.ಟಿ.ಸಿ. ಅಧಿಕಾರಿ ಕೂಡಿ ಕೆಲಸ ಮಾಡಬೇಕು. ಆದರೆ ಅವರಿಗೆ ಹೊಂದಾಣಿಕೆ ಇಲ್ಲದೆ ಅನ್ಯಾಯವಾಗುತ್ತಿದೆ. ನನ್ನ ಕ್ಷೇತ್ರದಲ್ಲಿ ತಮಿಳುನಾಡಿಗೆ ಬಸ್ಸು ಹೋಗುವುದು, ಯಾವ ಪ್ರೈವೇಟ್ ಬಸ್ಸೂ ನನ್ನ ಕ್ಷೇತ್ರದಲ್ಲಿ ನಿಲ್ಲುವುದಕ್ಕೆ ಅವಕಾಶವಿಲ್ಲ. ಅದರ ಬಗ್ಗೆ ಸುಪ್ರೀಂ ಕೋರ್ಟ್ ಆಜ್ಞೆಯಾಗಿದೆ ಎಂದು ಹೇಳುವರು. ಅಲ್ಲಿ ಓವರ್‌ಲೋಡ್ ಮಾಡಿ 200–300

ಜನರನ್ನು ತುಂಬಿಕೊಂಡು ಹೋಗುವರು, ಅದು ನ್ಯಾಷನಲ್ ಹೈ ವೇ ನಂಬರು 7 ಹೆಬ್ಬಿಗೋಡಿ ಅತ್ತಿಬೆಲೆ ಬಸ್ ಅದು. ಇದಕ್ಕೆ ಗಮನ ಕೊಟ್ಟು ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಪ್ರತಿಯೊಂದು ದಿವಸ ಪೋಲೀಸ್ ಸ್ಟೇಷನ್ನಿನಲ್ಲಿ ಹಣ ವಸೂಲು ಮಾಡುತ್ತಿದ್ದಾರೆ. ಪೋಲೀಸ್ ಅಧಿಕಾರಿಗಳ ಮೇಲೆ ಅನೇಕ ಆರೋಪಗಳಿವೆ. ಅಲ್ಲಿ ವಸೂಲಾಗುವ ಹಣ ಐ.ಜಿ.ಪಿ. ವರೆಗೆ ಸಲ್ಲುತ್ತದೆ ಎಂಬ ಭಾವನೆಯಿದೆ. ಇದರ ಬಗ್ಗೆ ನಿಗಾ ವಹಿಸಬೇಕು.

ಇನ್ನು ಜೈಲಿನ ಬಗ್ಗೆ ಒಂದೆರಡು ಮಾತುಗಳನ್ನು ಹೇಳಿ ನನ್ನ ಭಾಷಣ ಮುಗಿಸುತ್ತೇನೆ. ಜುಡಿಷಿಯಲ್ ಕಸ್ಟಡಿಯಲ್ಲಿರುವವರನ್ನು ನೋಡಲು ಅನೇಕರು ಗ್ರಾಮಾಂತರ ಪ್ರದೇಶಗಳಿಂದ ಬರುವರು, ಅವರಿಗೆ ಒಳ್ಳೆಯ ರೀತಿಯಿಂದ ಅವಕಾಶ ಕೊಡುತ್ತಿಲ್ಲ. ಜೈಲಿನಲ್ಲಿರುವ ಖೈದಿಯ ಹೆಂಡತಿಮಕ್ಕಳು, ಸಂಬಂಧಿಗಳು ಅವರನ್ನು ನೋಡಲು ದೂರದಿಂದ ಬರುವರು. ಅವರು ನೋಡುವುದಕ್ಕೆ ಹೋದರೆ ಬೆಳಿಗ್ಗೆ 8 ಗಂಟೆಯಿಂದ ಮಧ್ಯಾಹ್ನ 2–3 ಗಂಟೆಯವರೆಗೆ ಕಾಯಬೇಕು. ಹಾಗೆ ಮಾಡದೆ ಅವರಿಗೆ ಜಾಗ್ರತೆ ಅವಕಾಶ ಕೊಡಬೇಕು, ಬರುವವರನ್ನು ಒಳ್ಳೆಯ ರೀತಿಯಿಂದ ಕಾಣಬೇಕು ಎಂದು ಪ್ರಾರ್ಥನೆಮಾಡಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವಿ. ಕೃಷ್ಣರಾವ್ (ಗೌರಿಬಿದನೂರು) :—ಅಧ್ಯಕ್ಷಿಣಿಯವರೇ, ಈ ದಿವಸ ಮುಖ್ಯ ಮಂತ್ರಿಯವರು ಮಂಡಿಸಿರುವ ಸಾಮಾನ್ಯ ಆಡಳಿತ, ಅಬ್ಕಾರಿ, ಪೋಲೀಸು ಮತ್ತಿತರ ಬೇಡಿಕೆಗಳನ್ನು ಸಂಪೂರ್ಣವಾಗಿ ಅನುಮೋದಿಸುತ್ತಾ ಕೆಲವಾರು ಸಲಹೆಗಳನ್ನು ಕೊಡಲಿಚ್ಛಿಸುತ್ತೇನೆ. ಇಂದು ನಮ್ಮ ದೇಶದ ಸಾಮಾನ್ಯ ಆಡಳಿತ ಬಹಳ ಮಟ್ಟಿಗೆ ಯಾವ ಕಡೆ ಹೋಗುತ್ತಿದೆಯೆಂದರೆ ಲಂಚಗುಳಿತನ ಮತ್ತು ಅಸತ್ಯ ಎಂಬುದು ತಾಂಡವವಾಡುತ್ತಿದೆ, ಎಂದರೆ ಬಹಳ ಮಟ್ಟಿಗೆ ತಪ್ಪಾಗುವುದಿಲ್ಲವೇನೋ ಎಂದು ನಾನು ಭಾವಿಸುತ್ತಿದ್ದೇನೆ. ದೇಶದಲ್ಲಿ ಲಂಚಗುಳಿತನ ಹೋಗದೆ, ಪ್ರಾಮಾಣಿಕತೆ ಜಾಸ್ತಿಯಾಗದೆ ದೇಶದ ಆಡಳಿತ ಸರಿಹೋಗುವುದಿಲ್ಲ ಎಂಬುದನ್ನು ನಾನು ಒತ್ತಿ ಹೇಳಬೇಕಾಗಿಲ್ಲ. ಬಹಳ ಮುಖ್ಯವಾಗಿ ಲಂಚಗುಳಿತನ ಹೋಗಲಾಡಿಸುವುದು ಹೇಗೆ, ಪ್ರಾಮಾಣಿಕತೆ ಹೆಚ್ಚಿಸುವುದು ಹೇಗೆ ಎಂಬ ಮುಖ್ಯ ವಿಚಾರದ ಕಡೆ ಗಮನಿಸಿದಾಗ ನಮ್ಮಲ್ಲಿರುವ ಕಾನೂನು ಬಹಳ ಮಟ್ಟಿಗೆ ಸಾಲದೇನೋ ಎಂಬ ಭಾವನೆ ಬರುವುದು. ಇಂದು ಕೇವಲ ಸಿ.ಸಿ.ಎ. ರೂಲ್ಸ್ ಅಥವ ಆಂಟಿ ಕರಪ್ಷನ್ ಇಲಾಖೆ ಈ ಎರಡರಿಂದಲೇ ದೇಶದಲ್ಲಿರುವವರ ಅಪ್ರಾಮಾಣಿಕತೆ ಮತ್ತು ಲಂಚಗುಳಿತನ ಇವೆರಡೂ ಕೂಡ ಹೋಗುವುದಿಲ್ಲ. ಅತಿ ಮುಖ್ಯವಾಗಿ ಅಧಿಕಾರಿಗಳ ಮನಸ್ಸಿನ ಮೇಲೆ ಪರಿಣಾಮವಾಗುವಂಥ ವ್ಯವಸ್ಥೆಯಿರಬೇಕು. ಇದಾಗದ ಹೊರತು ಎಂಥ ಕಾನೂನು ಮಾಡಿದರೂ ಪ್ರಯೋಜನವಾಗುವುದಿಲ್ಲ. ಇದನ್ನು ಒತ್ತಿ ಹೇಳಬೇಕಾಗಿದೆ. ಈ ದೇಶದಲ್ಲಿರುವ ಬ್ಲಾಕ್ ಮಾರ್ಕೆಟ್, ಲಂಚಗುಳಿತನ, ಅಸತ್ಯ ಮುಂತಾದುವು ತೊಲಗಬೇಕಾದರೆ ಭದ್ರವಾದ ಕಾನೂನು ಅತ್ಯಗತ್ಯ ಎಂದು ಒತ್ತಿ ಒತ್ತಿ ಹೇಳಬೇಕಾಗಿದೆ. ಇಂಥ ಅಪರಾಧ ಮಾಡುವವರಿಗೆ ಉಗ್ರ ಶಿಕ್ಷೆ ಆಗದಿದ್ದರೆ ಭಯವಿರುವುದಿಲ್ಲ. ಭಯವುಂಟಾಗುವವರೆಗೆ ಪ್ರಯೋಜನವಾಗುವುದಿಲ್ಲ. ಬಹಳ ಮಟ್ಟಿಗೆ ಎಲ್ಲಾ ದರ್ಜೆ ಅಧಿಕಾರಿಗಳಲ್ಲೂ ಲಂಚಗುಳಿತನವಿದೆ, ಅಸತ್ಯವಿದೆ, ಅಧಿಕಾರಿಗಳಲ್ಲಿ ಇದು ತುಂಬಿ ತುಳುಕಾಡುತ್ತಿದೆ. ಇದಕ್ಕೆ ಒಂದೆರಡು ಉದಾಹರಣೆ ಕೊಡುತ್ತೇನೆ. ನನ್ನ ಮಿತ್ರರೊಬ್ಬರು ಇಂಥ ಕೆಲಸವಾಗಬೇಕು ಎಂದು ಹೇಳಿದಾಗ ಇನ್ನೂರು ರೂಪಾಯಿ ಕೊಡಿ ಕೆಲಸ ಮಾಡಿಸಿಕೊಂಡು ಬರುತ್ತೇನೆ ಎಂದು ಹೇಳಿದರು. ಇದರಿಂದ ಎಷ್ಟು ಉತ್ತಮವಾದ ಆಡಳಿತ ವ್ಯವಸ್ಥೆ ನಮ್ಮಲ್ಲಿದೆ ಎಂಬುದನ್ನು ಯೋಚನೆಮಾಡಬಹುದು. ಇದನ್ನು ತಡೆಗಟ್ಟಬೇಕು, ಭದ್ರಪಡಿಸಬೇಕು. ಆಂಟಿಕರಪ್ಷನ್ ಇಲಾಖೆಯನ್ನು ಸೃಷ್ಟಿಮಾಡಿದ್ದೇವೆ ಹೊರತು ಅದರಿಂದ ಸರಿಯಾದ ಪರಿಣಾಮವಾಗಿಲ್ಲ. ಆ ಇಲಾಖೆ ನಿಜವಾಗಿ ಎಷ್ಟು ಸಾಧಿಸಬೇಕೋ ಅಷ್ಟನ್ನು ಖಂಡಿತ ಸಾಧಿಸಿಲ್ಲ. ಆಂಟಿಕರಪ್ಷನ್ ಇಲಾಖೆ ಆಗುತ್ತಿದೆಯೋ ಹೊರತು ಯಾವ ಲಂಚಕೋರರಾದ ದೊಡ್ಡ ದೊಡ್ಡ ಅಧಿಕಾರಿಗಳನ್ನು ಹಿಡಿಯುತ್ತಿಲ್ಲ. ಅದು ಸಾಮಾನ್ಯವಾಗಿ

ಬಡ ಗುಮಾಸ್ತರನ್ನು 2 ರೂಪಾಯಿಯಿಂದ 10 ರೂಪಾಯಿಗಳವರೆಗೆ ಲಂಚ ಪಡೆಯುವ ಸಣ್ಣ ನೌಕರರನ್ನು ಮಾತ್ರ ಹಿಡಿಯುತ್ತಿದೆ. ಎರಡರಿಂದ ಹತ್ತು ಸಾವಿರ ರೂಪಾಯಿಗಳವರೆಗೆ ಲಂಚ ಪಡೆಯುವ ದೊಡ್ಡ ಅಧಿಕಾರಿಗಳಮೇಲೆ ಲಂಚನಿರೋಧ ಇಲಾಖೆ ಕ್ರಮ ತೆಗೆದುಕೊಳ್ಳದಿರುವುದು ಶೋಚನೀಯವಾದ ವಿಚಾರ. ಈ ಇಲಾಖೆಯಲ್ಲಿ ಸ್ವಲ್ಪ ದಕ್ಷರಾದ ಅಧಿಕಾರಿಗಳನ್ನು ನೇಮಕ ಮಾಡಬೇಕು.

ಎರಡನೆಯದು ಪೋಲೀಸು ಇಲಾಖೆ, ಇದರಲ್ಲಿ ಕೆಲವರು ಸತ್ಯಸಂಧರಾದ ಅಧಿಕಾರಿಗಳಿದ್ದರೂ ಕೆಲವರು ಜನರನ್ನು ಶೋಷಣೆ ಮಾಡುತ್ತಿದ್ದಾರೆ. ಇದರಲ್ಲಿ ಸಂದೇಹವಿಲ್ಲ. ಅವರ ಹೆಸರು ಹೇಳುವುದಿಲ್ಲ, ಒಬ್ಬ ಸಬ್‌ಇನ್‌ಸ್ಪೆಕ್ಟರು ಪೋಲೀಸು ಸ್ಟೇಷನ್ನಿನಲ್ಲಿ ಹಣ ಕೊಡಿ ಎಂದು ಕೇಳಿದರು. ಅವರು ತಾವು ಹತ್ತು ಸಾವಿರ ರೂಪಾಯಿ ಖರ್ಚುಮಾಡಿ ಸಬ್‌ಇನ್‌ಸ್ಪೆಕ್ಟರಾಗಿರುವುದಾಗಿಯೂ ಹೇಳಿದರು. ಇಂಥ ಅಧಿಕಾರಿಗಳಿದ್ದರೆ ದೇಶದಲ್ಲಿ ಪ್ರಾಮಾಣಿಕತೆ ಎಷ್ಟರಮಟ್ಟಿಗೆ ಇರುತ್ತದೆ, ಜನತೆಗೆ ನ್ಯಾಯ ಎಷ್ಟರಮಟ್ಟಿಗೆ ದೊರೆಯುತ್ತದೆ ಎಂಬುದನ್ನು ಸಭೆಯ ಗಮನಕ್ಕೆ ತರುತ್ತಿದ್ದೇನೆ.

ಇಂಥ ಒಂದು ರೀತಿಯ ಕೇಸುಗಳನ್ನು ತಮ್ಮ ಗಮನಕ್ಕೆ ತಂದಾಗ, ಉಗ್ರವಾದಂಥ ಶಿಕ್ಷೆಯನ್ನು ಮಾಡದೇ ಹೋದ ಪಕ್ಷದಲ್ಲಿ ದೇಶದಲ್ಲಿ ಪೋಲಿಸ್ ಭದ್ರತೆ ಇರುವುದಿಲ್ಲ. ಅಬ್ಕಾರಿ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತಿನ ದಿವಸ ಸೇಂದಿ, ಸಾರಾಯಿ ಈ ಎರಡು ಅಂಗಡಿಗಳಿಂದ ದೇಶಕ್ಕೆ ಹೆಚ್ಚು ಲಾಭ ಬರುತ್ತಿದೆ. ಈಗ ಸೇಂದಿ ಅಂಗಡಿಗಳನ್ನು ಡಿಸ್ಟ್ರಿಕ್ಟ್‌ವೈಸ್ ಹರಾಜು ಹಾಕುತ್ತಾರೆ. ತಾಲ್ಲೂಕುವೈಸ್ ಸೇಂದಿ ಅಂಗಡಿಗಳನ್ನು ಹರಾಜು ಹಾಕಿಸಿದರೆ, ಅವು ಕೇವಲ ಒಬ್ಬರ ಕೈಯ್ಯಲ್ಲಿ ಇರದೆ ಡೀಸೆಂಟ್ರಲೈಸ್ ಆಗುತ್ತದೆ. ತಾಲ್ಲೂಕುವೈಸ್ ಹರಾಜು ಹಾಕಿದರೆ, ತೆರಿಗೆಯಿಂದ ಹೆಚ್ಚಿನ ಲಾಭ ಬರುತ್ತದೆ. ಅದೇ ರೀತಿ ಸೇಂದಿ ಅಂಗಡಿಗಳನ್ನು ತಾಲ್ಲೂಕುವೈಸ್ ಹರಾಜು ಹಾಕಿದರೆ ಜಾಸ್ತಿ ತೆರಿಗೆ ಬರುತ್ತದೆ. ಎಂದು ನಿರೀಕ್ಷಿಸಬಹುದು. ಇನ್ನೊಂದು ನನ್ನ ಸಲಹೆ ಏನೆಂದರೆ ಮೊಲ್ಯಾಸಿಸ್ ಹೊರಗಡೆಯಿಂದ ಬರುತ್ತದೆ. ಇದು ಒಂದು ಟನ್‌ಗೆ ಸುಮಾರು 300 ರೂಪಾಯಿ ಮೇಲ್ಪಟ್ಟು ಬೆಲೆಯಾಗುತ್ತದೆ. ಇದನ್ನು ಸರ್ಕಾರ ನಿರ್ಬಂಧ ಮಾಡಿ ಕೇವಲ ಹತ್ತು ರೂಪಾಯಿಗೆ ತೆಗೆದುಕೊಳ್ಳುತ್ತಾರೆ. ಇದು ಸರಿಯಲ್ಲ. ರೇಟನ್ನಾದರೂ ಜಾಸ್ತಿಮಾಡಿ ಇಲ್ಲದೆ ಹೋದ ಪಕ್ಷದಲ್ಲಿ ಮೊಲ್ಯಾಸಿಸ್ ಅನ್ನು ಸ್ವಂತವಾಗಿ ಮಾಡಿಕೊಳ್ಳಲು ಅವಕಾಶ ಕೊಡಬೇಕು ಎಂದು ಈ ಸಂದರ್ಭದಲ್ಲಿ ನಾನು ಕೇಳಿಕೊಳ್ಳುತ್ತೇನೆ.

ಟೂರಿಸಂ ಬಗ್ಗೆ ಒಂದೆರಡು ಮಾತನ್ನು ಹೇಳುತ್ತೇನೆ. ಗೋರಿಬಿದನೂರು ತಾಲ್ಲೂಕಿನಲ್ಲಿ ವಿದುರಾಶ್ವಥ್ಥ ಪುಣ್ಯಕ್ಷೇತ್ರವಿದೆ, ಸಹಸ್ರಾರು ಮಂದಿ ಯಾತ್ರಿಕರು ಪ್ರತಿನಿತ್ಯವೂ ಬರುತ್ತಾರೆ. ಹತ್ತಾರು ಟೂರಿಸ್ಟ್ ಬಸ್‌ಗಳು ಬರುತ್ತವೆ. ಇದು ಬಹಳ ಪವಿತ್ರವಾದ ಜಾಗ, ದಕ್ಷಿಣ ಭಾರತದಲ್ಲಿ ಪ್ರಸಿದ್ಧವಾದ ಜಾಗ, ಆದ್ದರಿಂದ ಇದನ್ನು ಒಂದು ಟೂರಿಸ್ಟ್ ಸೆಂಟರ್ ಆಗಿ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಗೋರಿಬಿದನೂರು ಸಕ್ಕರೆ ಕಾರ್ಖಾನೆಗೆ ಒಂದು ಡಿಸ್ಟಿಲರಿ ಪ್ಲಾಂಟನ್ನು ಹಾಕಬೇಕು. ಈ ರೀತಿ ಮಾಡಿದರೆ ಅಲ್ಲಿ ಸಕ್ಕರೆ ಉತ್ಪತ್ತಿ ಜಾಸ್ತಿಯಾಗುತ್ತದೆ ಎಂದು ಕೇಳಿದ್ದೇನೆ. ಈಗಾಗಲೇ ನಾವು ಡಿಸ್ಟಿಲರಿ ಪ್ಲಾಂಟ್ ಬೇಕೆಂದು ಸರ್ಕಾರದಲ್ಲಿ ಪ್ರಾರ್ಥನೆ ಮಾಡಿಕೊಂಡಿದ್ದೇನೆ. ಆದಷ್ಟು ಬೇಗ ಇದಕ್ಕೆ ಸಂಬಂಧಪಟ್ಟ ಲೈಸೆನ್ಸ್‌ಅನ್ನು ಕೊಟ್ಟು ಒಂದು ಡಿಸ್ಟಿಲರಿ ಪ್ಲಾಂಟನ್ನು ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಂಡು ಅಧ್ಯಕ್ಷರು ನನಗೆ ಮಾತನಾಡಲು ಅವಕಾಶಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ) :—ಸನ್ಮಾನ್ಯ ಸಭಾಧ್ಯಕ್ಷಿಣಿಯವರೇ, ವ
ಮುಖ್ಯಮಂತ್ರಿಗಳು ಮಂಡಿಸಿದಂಥ ಬೇಡಿಕೆಗಳನ್ನು ವಿರೋಧಿಸಿ ಒಂದೆರಡು ಮಾತುಗ
ಆಡಲು ಇಚ್ಛೆಪಡುತ್ತೇನೆ. ಮೊದಲನೆಯದಾಗಿ ಮಾನ್ಯ ವಾಟಾಳ್ ನಾಗರಾಜ್ ಅ
ಮಾತನಾಡಿ ಒಂದು ವಿಷಯವನ್ನು ಬಿಟ್ಟಿದ್ದಾರೆ. ಜೈಲುಗಳಲ್ಲಿ ಏನಾಗಿದೆ ಎಂದರೆ
ಜೀವಾವಧಿ ಶಿಕ್ಷೆಯನ್ನು ಅನುಭವಿಸುವ ಕೈದಿಗಳು ಇದ್ದಾರೆ ಅವರನ್ನು ಬಿಡುಗಡೆ ಮಾಡುತ್ತಿ
ಎನ್ನುವ ಪ್ರಶ್ನೆಯನ್ನು ಹೋದ ಸಾರಿ ನಾನು ಕೇಳಿದ್ದೇನೆ. ಹೋದ ವರ್ಷ ಜುಲೈ 27 ರ
ಒಂದು ನೋಟಿಫಿಕೇಷನ್ ಬಂತು, ಏನೆಂದರೆ ಜೀವಾವಧಿ ಶಿಕ್ಷೆಯನ್ನು ಅನುಭವಿಸುವವರು
ಕ್ಲೂಡಿಂಗ್ ರೆಮಿಷನ್, ಇಂಥವರನ್ನೂ ಬಿಡುಗಡೆ ಮಾಡುತ್ತೇವೆ ಎಂದು ಪತ್ರಿಕೆಯಲ್ಲಿಯ
ಬಂತು, ಅದು ಈ ರೀತಿ ಇದೆ :

"...including remission as a special case, marking the silver jubilee
India's independence. This decision was taken by the Government
India...also prisoners suffering from cancer, tuberculosis and leprosy a
also blind if they are so certified by medical practitioners..."

ಈ ರೀತಿ ಅವರನ್ನು ಬಿಡುಗಡೆ ಮಾಡಿ ತಾವು ನಡೆದುಕೊಂಡಿದ್ದರೆ ನನಗೆ ಸಂತೋಷವಾಗುತ್ತಿ
ಆದರೆ ತಾವು ಹೇಳಿದ್ದು ಕಾರ್ಯರೂಪಕ್ಕೆ ಬರಲಿಲ್ಲ. ಇವತ್ತಿನ ದಿವಸ ಯಾರು ಲೈಫ್ ಪ್ರಿಸನ
ಇದ್ದಾರೆ ಅವರನ್ನು ತಾವು ಬಿಟ್ಟಿಲ್ಲ. ಇದರ ಬಗ್ಗೆ ಹೋದ ಸಾರಿ ನನ್ನ ಪ್ರಶ್ನೆಯೊಂದಕ್ಕೆ ಉತ್ತ
ಕೊಡುತ್ತಾ 498 ಜನರನ್ನು ರಿಲೀಸ್ ಮಾಡಿದ್ದೇವೆ ಎಂದು ಹೇಳಿದ್ದೀರಿ. 498 ಜನ ಯಾರು
ಸರ್ವೇಸಾಧಾರಣವಾಗಿ ಶಿಕ್ಷೆ ಅನುಭವಿಸುವವರು, ಆದರೆ ಅನೇಕ ಜನ ಅಲ್ಲಿ ಜೀವಾವಧಿ
ಯನ್ನು ಅನುಭವಿಸುವವರೂ ಇದ್ದಾರೆ, 10 ವರ್ಷಕ್ಕಿಂತ ಜಾಸ್ತಿ ಶಿಕ್ಷೆಯನ್ನು ಅನುಭವಿಸಿರ
ವವರೂ ಇದ್ದಾರೆ, ಆಗಸ್ಟ್ 15 ರಂದು 4-5 ಜನಕ್ಕೆ 50 ಪರ್ಸೆಂಟು ರೆಮಿಷನ್ ಕೊಟ
ಬಿಡುಗಡೆ ಮಾಡಿದ್ದಾರೆ. 10 ವರ್ಷಕ್ಕಿಂತ ಜಾಸ್ತಿ ಶಿಕ್ಷೆಯನ್ನು ಅನುಭವಿಸಿರುವವರು ಬಹ
ಮನ ನೊಂದಿದ್ದಾರೆ. ಯಾವುದೋ ಮರ್ಡರ್ ಕೇಸ್‌ನಲ್ಲಿ ಸಿಕ್ಕಿಹಾಕಿಕೊಂಡಿರತಕ್ಕ ಜ
ಯಾವುದೋ ಕಾರಣಾಂತರದಿಂದ ಅಪರಾಧಿಗಳಾದಂಥ ಜನ ಅವರು ಹೊರಗಡೆ ಬಂದಮೇ
ಹೊಸ ಸಮಾಜಕ್ಕೆ ಅನುಗುಣವಾಗಿ ನಡೆದುಕೊಳ್ಳುವ ಆಶೆ ಇರುತ್ತದೆ. ಅಕ್ಟೋಬರ್ ತಿಂಗಳ
ಮಹಾತ್ಮ ಗಾಂಧಿಯವರ ಜನ್ಮದಿನೋತ್ಸವ ಬರುತ್ತದೆ. ಇಂಥ ಸಮಯದಲ್ಲಿ ಇಂಥವರನ
ಬಿಡುಗಡೆ ಮಾಡಬಹುದು, ಇದರ ಬಗ್ಗೆ ಯಾವುದನ್ನೂ ತಾವು ಕಾರ್ಯರೂಪಕ್ಕೆ ತೆಗೆದುಕೊಂಡ
ಬಂದಿಲ್ಲ, ಅದನ್ನು ತರಬೇಕು ಎಂದು ಹೇಳುತ್ತೇನೆ. ನಾನು ಜೈಲಿನ ಬಗ್ಗೆ ಅನೇಕ ಸಾ
ಮಾತನಾಡುವಾಗ ರಿಫಾರ್ಮ್ಸ್ ಮಾಡಬೇಕು ಎಂದು ಹೇಳಿದ್ದೇನೆ. ಜೈಲ್ ಬಗ್ಗೆ ತಾವು ಏನ
ರಿಫಾರ್ಮ್ಸ್ ಮಾಡಿಲ್ಲ. ಎಷ್ಟು ಸುಧಾರಣೆ ಆಗಬೇಕೋ ಅದು ಆಗಿಲ್ಲ. ಮೊದಲು ಅಲ್ಲಿ
ಅಧಿಕಾರಿಗಳ ಸುಧಾರಣೆಯಾಗಬೇಕು. ಇದರಲ್ಲಿ ಯಾರದೂ ಭಿನ್ನಾಭಿಪ್ರಾಯವಿಲ್ಲ. ಜೈಲ
ಸೂಪರಿಂಟೆಂಡೆಂಟ್ಸ್ ಯಾರಿದ್ದಾರೆ ಅವರ ಸುಧಾರಣೆಯಾಗಬೇಕು, ಎಲ್ಲರೂ ಕೆಟ್ಟವರ
ಇದ್ದಾರೆ ಎಂದು ನಾನು ಹೇಳುವುದಿಲ್ಲ. ಕೆಲವು ಸೂಪೆರಿಂಟೆಂಡೆಂಟ್ ಅವರು ಅಲ್ಲಿರು
ಕೈದಿಗಳನ್ನು ಮನುಷ್ಯರು ಎಂದು ಯೋಚನೆ ಮಾಡುವುದಿಲ್ಲ. ಅವರನ್ನು ದನಗಳ ತರ
ಹೊಡೆಯುವುದು, ಬಡಿಯುವುದು ರಾಡ್ ಹಾಕುವುದು ಹಿಂದೆ ಯಾವ ರೀತಿ ಮಾಡುತ್ತಿದ್ದರೋ
ಆ ರೀತಿ ಈಗಲೂ ಮಾಡುತ್ತಿದ್ದಾರೆ ಎಂದು ತಿಳಿದುಬಂದಿದೆ. ಇದು ಹೋಗಬೇಕು. ಅವರನ
ಮನುಷ್ಯರನ್ನಾಗಿ ಮಾಡಿ, ಸರಿಯಾದ ರೀತಿ ಅವರ ಬಗ್ಗೆ ನಡೆದುಕೊಳ್ಳಬೇಕು ಎಂದು ನನ
ಅಭಿಪ್ರಾಯ. ಮೂರನೆಯದು, ಜೈಲ್ ಸೂಪರಿಂಟೆಂಡೆಂಟ್ ಅವರಿಗೆ ಕೆಲವು ಕಡೆ, ನನ
ತಿಳಿದ ಹಾಗೆ ಜೈಲಿನ ಎಲ್ಲಾ ಸಾಮಾನುಗಳೂ ತರಕಾರಿ ಮುಂತಾದುವುಗಳು ಜೈಲಿನಿಂ
ಹೋಗುತ್ತವೆ. ಅವರು ಒಂದು ನಯಾಪೈಸಾ ಕೊಟ್ಟು ಮಾರ್ಕೆಟ್ಟಿನಲ್ಲಿ ತರಕಾರಿಯನ

ಕೊಂಡುಕೊಳ್ಳಬೇಕಾಗಿಲ್ಲ. ಇದನ್ನೆಲ್ಲಾ ತಾವು ಯೋಚನೆ ಮಾಡಿ ಉಗ್ರವಾದ ಕ್ರಮ ತೆಗೆದುಕೊಳ್ಳಬೇಕು ಎಂದು ಈ ಸಂದರ್ಭದಲ್ಲಿ ನಾನು ಕೇಳಿಕೊಳ್ಳುತ್ತೇನೆ. ಇನ್ನೊಂದು ವಿಷಯವನ್ನು ಈ ಜೈಲಿನ ಬಗ್ಗೆ ಹೇಳಬೇಕು ಎಂದರೆ ಓಪನ್ ಏರ್ ಜೈಲನ್ನು ಮಾಡಿದ್ದಾರೆ. ಇದನ್ನು ಬಹಳ ವಿಶಾಲವಾಗಿ, ಮತ್ತು ಹೆಚ್ಚಿನ ರೀತಿಯಲ್ಲಿ ಮಾಡಬೇಕು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಪೊಲೀಸ್ ಇಲಾಖೆಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ವಾಟಾಳ್ ನಾಗರಾಜ್ ಅವರು ಇದರ ಬಗ್ಗೆ ಬಹಳ ವ್ಯಾಖ್ಯಾನವಾಗಿ ಮಾತನಾಡಿದ್ದಾರೆ. ಪ್ರತಿಯೊಂದು ಸಾರಿಯೂ, ಈ ಇಲಾಖೆಯಲ್ಲಿ ಪೋಲೀಸರ ವರ್ತನೆ ಸರಿಯಿಲ್ಲ, ಇದನ್ನು ಬದಲಾವಣೆ ಮಾಡಿಕೊಳ್ಳಬೇಕು ಬದಲಾವಣೆ ಮಾಡಿಕೊಳ್ಳದಿದ್ದರೆ ತೊಂದರೆ ಬರುತ್ತದೆ ಎಂದೂ ಹೇಳಿದ್ದೇವೆ. ತಾವು ಅಧಿಕಾರಕ್ಕೆ ಬಂದು ಒಂದು ವರ್ಷ ಎರಡು ತಿಂಗಳಾಯಿತು. ನನಗಂತೂ ಯಾವರೀತಿಯ ಬದಲಾವಣೆಯೂ ಕಾಣುವುದಿಲ್ಲ. ಅಧಿಕಾರಿಗಳು ಬದಲಾವಣೆಯಾಗಿರಬಹುದು. ಆದರೆ ಮೂಲಭೂತವಾಗಿ, ಜನಗಳ ಜೊತೆಗೆ ಸಮರ್ಪಕವಾಗಿ ನಡೆದುಕೊಳ್ಳುವುದು ಮತ್ತು ಸಾಮಾನ್ಯ ಜನಕ್ಕೆ ನ್ಯಾಯ ದೊರಕಿಸುವುದರಲ್ಲಿ ವೈಫಲ್ಯತೆಯನ್ನು ಪೂರ್ಣವಾಗಿ ತೋರಿಸಿದೆ ಎಂದು ನನ್ನ ಅಭಿಪ್ರಾಯ. ಇದಕ್ಕೆ ಎರಡು ಮೂರು ನಿದರ್ಶನಗಳನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ.

ಪೊಲೀಸ್ ಇಲಾಖೆಯವರು ಕೇಸ್‌ಗಳನ್ನು ಹಾಕುವುದರಲ್ಲಿ ಇದ್ದಾರೆಯೇ ವಿನಹ ಎಷ್ಟು ಕೇಸ್‌ಗಳಲ್ಲಿ ನ್ಯಾಯ ದೊರಕಿದೆ ಎಂದು ಹೇಳುವ ಪರಿಸ್ಥಿತಿಯಲ್ಲಿ ಇಲ್ಲ. ಟ್ರಾಫಿಕ್ ಕೇಸುಗಳು ಎಷ್ಟು ? ರಾಬರಿ ಕೇಸುಗಳು ಎಷ್ಟು, ಕ್ರಿಮಿನಲ್ ಕೇಸುಗಳು ಎಷ್ಟು ಹಾಕಿದ್ದಾರೆ ಎನ್ನುವುದರ ಮೇಲೆ ಹೋಗುತ್ತಾ ಇದ್ದಾರೆ. ಪೊಲೀಸ್ ಇಲಾಖೆಯ ಬಗ್ಗೆ ಒಳ್ಳೆಯ ಪರ್‌ಸ್ಪೆಕ್ಟಿವ್ ಇಟ್ಟುಕೊಳ್ಳಬೇಕು ಇದು ವಿವಾದಾಸ್ಪದ ವಿಷಯ. ನಮ್ಮ ದೇಶದಲ್ಲಿ ಮಾತ್ರವಲ್ಲ ಎಲ್ಲಾ ಕಡೆ ಈ ವಿಚಾರ ಚರ್ಚೆಗೆ ಬಂದಿದೆ. ಕೇಸುಗಳನ್ನು ಜಾಸ್ತಿ ಹಾಕುವುದರಿಂದ ಪೊಲೀಸಿನವರು ಎಫಿಷಿಯೆಂಟ್ ಎಂದು ಹೇಳುವುದಕ್ಕಾಗುವುದಿಲ್ಲ. ಪೊಲೀಸಿನವರು ಎಷ್ಟು ಕೇಸುಗಳಲ್ಲಿ ನ್ಯಾಯ ದೊರಕಿಸಿ ಕೊಟ್ಟಿದ್ದಾರೆ ಎನ್ನುವುದರ ಮೇಲೆ ಅವರು ಎಫಿಷಿಯೆಂಟ್ ಎಂದು ತಿಳಿದುಕೊಳ್ಳಬೇಕು. ಬರೀ ಕೇಸುಗಳನ್ನು ಹಾಕುವುದರಿಂದ ಅವರು ಎಫಿಷಿಯೆಂಟ್ ಎಂದು ತಿಳಿದುಕೊಳ್ಳಬಾರದು ಎಷ್ಟು ಕೇಸುಗಳಲ್ಲಿ ಸಾಮಾನ್ಯ ಜನರಿಗೆ ನ್ಯಾಯ ದೊರಕಿದೆ. ಎನ್ನುವುದನ್ನು ನೋಡಬೇಕೆಂದು ತಜ್ಞರು ಅಭಿಪ್ರಾಯ ಪಟ್ಟಿದ್ದಾರೆ. ಈ ಸಂದರ್ಭದಲ್ಲಿ ನಾನು ಅಂತರಾಷ್ಟ್ರೀಯ ಪೊಲೀಸ್ ಬಗ್ಗೆ ಏನು ಒಂದು ಸ್ಟಡಿ ಮಾಡಿದ್ದಾರೆ, ಆ ಸ್ಟಡಿ ಮಾಡಿರುವ ಒಂದು ಅಂಕಿಅಂಶಗಳ ಆಧಾರದ ಮೇಲೂ ಸಹ ಅವರು ಹೇಳುತ್ತಾರೆ ಪೊಲೀಸ್ ಇಲಾಖೆಯಲ್ಲಿ ಬರೀ ಸುಮ್ಮನೇ ಕೇಸುಗಳನ್ನು ಹಾಕಿಕೊಂಡರೆ ಪ್ರಯೋಜನವಿಲ್ಲ. ಅದರ ಬದಲು ಎಷ್ಟು ದೂರ ನ್ಯಾಯ ದೊರಕಿಸಿ ಕೊಟ್ಟಿದ್ದಾರೆ ಎಂದು ನೋಡಬೇಕು. ಬಿಹೇವಿಯರ್ ಆಫ್ ಮ್ಯಾನ್ ಬಗ್ಗೆ ಬದಲಾವಣೆ ಆಗಿಲ್ಲ ಅವರ ವರ್ತನೆ ಹಲವಾರು ರೀತಿಯಲ್ಲಿ ಹೊಂದಿಕೊಂಡಿದೆ. ಎನ್ನುವುದನ್ನು ನಿದರ್ಶನಗಳನ್ನು ಬೇಕಾದರೆ ಕೊಡಬಲ್ಲೆ. ಒಬ್ಬ ಮಂತ್ರಿಗಳು ಪೊಲೀಸಿನವರ ಕೆಲಸದೊಳಗೆ ಮಧ್ಯೆ ಪ್ರವೇಶ ಮಾಡಿ ಹಸ್ತಕ್ಷೇಪ ಮಾಡಿದಂಥ ನಿದರ್ಶನಗಳು ಬೇಕಾದಷ್ಟು ಕಂಡುಬಂದಿದೆ. ಮೂರು ನಿದರ್ಶನಗಳನ್ನು ಕೊಡುತ್ತೇನೆ.

ಇಂಥವರ ಮೇಲೆ ಕೇಸ್ ಹಾಕಿ ಎಂದು ರಾಜಕೀಯದ ದುರುದ್ದೇಶದಿಂದ ಕೇಸ್ ಹಾಕಿರುವ ಅನೇಕ ನಿದರ್ಶನಗಳು ನಮ್ಮ ಗಮನಕ್ಕೆ ಬಂದಿವೆ. ಪೊಲೀಸ್ ರೀತಿ ನಡೆದುಕೊಳ್ಳಬೇಕೆಂದು ಬಂದಿದೆ ಮೈಸೂರಿನಲ್ಲಿ ಮೇ ದಿನಾಚರಣೆಯ ಸಂಬಂಧದಲ್ಲಿ ಕಾರ್ಮಿಕರು ಮೆರವಣಿಗೆ ಹೋಗಕೂಡದು ಎಂದು ಮಂತ್ರಿಗಳು ಮೈಸೂರಿನ ಡಿ. ಎಸ್. ಪಿ. ಗೆ ಫೋನ್ ಮಾಡಿದರು. ಕಾರ್ಮಿಕರು

ಬೀದಿಯಲ್ಲಿ ಹೋದರೆ ಏನು ಆಗುತ್ತದೆಯೋ ಗೊತ್ತಿಲ್ಲ. ಏನು ಅನಾಹುತವಾಗುತ್ತಾ ಇರಲ್ಲಿಲ್ಲ. ಅಲ್ಲಿ ಚಪ್ಪರ ಹಾಕಿ ಮಜ್ಜಿಗೆ ನೀರು ಕೊಡಬೇಕೆಂದು ಇದ್ದರು. ಆದರೆ ಕಾರ್ಮಿಕರು. ಮೆರವಣಿಗೆಗೆ ಹೋಗಲೇ ಕೂಡದು ಎಂದು ಹೇಳಿದ್ದಾರೆ. ಈ ರೀತಿ ಮಂತ್ರಿಗಳು ರಾಜಕೀಯ ಹಸ್ತಕ್ಷೇಪವನ್ನು ನಡೆಸುತ್ತಿದ್ದಾರೆ. ಕೆಂಪೇಗೌಡ ರಸ್ತೆಯಲ್ಲಿ ಹೋಗುವುದಕ್ಕೆ ಬಿಡುವುದಿಲ್ಲ ನಿಮಗೆ ಮುಖ್ಯ ಟ್ರಾಫಿಕ್ ಫುಡ್‌ಗ್ರೇನ್ಸ್ ಡೀಲರ್ಸ್ ಅಲ್ಲ. ಆಹಾರಧಾನ್ಯ ವ್ಯಾಪಾರ ಮಾಡುವ ಬ್ಲಾಕ್ ಮಾರ್ಕೆಟೀಯರ್ಸ್ ಅಲ್ಲ. ಗುಂಡಾ ಆಕ್ಟ್ ಬೊಂಬಾಯಿ ನಗರದೊಳಗೆ ಜಾರಿ ಮಾಡಿದ್ದಾರೆ. ಗುಂಡಾ ಆಕ್ಟ್ ಜನಗಳ ವಿರುದ್ಧವಾಗಿ ಇರಕೂಡದು. ರಾಜಕೀಯ ದುರುದ್ದೇಶದಿಂದ ಕಾನೂನು ಜಾರಿ ಆಗಕೂಡದು, ರಾಜಕೀಯ ದುರುದ್ದೇಶದಿಂದ ಪಂಪಾಪತಿ ಮತ್ತು ಇತರ ಕಾರ್ಮಿಕ ಮುಖಂಡರ ಮೇಲೆ ಕಾನೂನು ಉಪಯೋಗ ಮಾಡಿದ್ದಾರೆ. ಈ ರೀತಿ ಮಾಡಕೂಡದು ಎಂದು ಹೇಳುತ್ತೇನೆ. ಒಂದು ಮಾತನ್ನು ಹೇಳುತ್ತೇನೆ. ಶ್ರೀಮಾನ್ ಅಜೀಜ್ ಸೇಠ್‌ರವರು ಮೈಸೂರಿನ ಪೊಲೀಸ್ ಅಧಿಕಾರಿಗಳಿಗೆ ಫೋನ್ ಮಾಡಿದರು.

ಶ್ರೀ. ಡಿ. ದೇವರಾಜ್ ಅರಸ್ :—ಅವರು ಹೇಳಿದರೆ ?

ಶ್ರೀ ಎಂ. ಎಸ್. ಕೃಷ್ಣನ್ :—ಇವತ್ತಿನ ದಿವಸ ಪೊಲೀಸ್ ಅಧಿಕಾರಿಗಳಿಗೆ ಕೇಳಿದರೆ ಅವರು ಒಪ್ಪಿಕೊಳ್ಳುತ್ತಾರೋ ಇಲ್ಲವೋ ನನಗೆ ಗೊತ್ತಿಲ್ಲ.

Sri D. Devaraj Urs :—Then how can you say?

ಶ್ರೀ ಎಂ. ಎಸ್. ಕೃಷ್ಣನ್ :—ಅಜೀಜ್ ಸೇಠ್ ಹೇಳಿದರು ಎಂದು ನನಗೆ ತಿಳಿದು ಬಂದಿದೆ. ಇಲ್ಲ ಎಂದರೆ ತನಿಖೆ ಮಾಡಿ. I am not talking through my hat. I have come to know of it. It is for you to verify. Similarly in the case of Pampapathy of Davangere Cotton Mill, owner has influenced the Minister; and also in case of H.M.T. another Minister has interfered. Is this the way in which your Police Department should conduct itself ?

ಸರ್ಕಲ್ ಇನ್ಸ್‌ಪೆಕ್ಟರಿಂದ ಮೇಲಿನವರೆಗೆ ಯೂನಿಫಾರಂ ಕೊಡುತ್ತಾ ಇಲ್ಲ. ಕೆಲವು ಕಡೆ ಕೊಡುತ್ತಾರೆ. ಆದುದರಿಂದ ಮೇಲಿನವರೆಗೂ ಕೂಡ ಕೊಡಬೇಕು. ಪೊಲೀಸಿನವರ ಮಧ್ಯೆ ಕೋಮುವಾರು ಭಾವನೆ, ಜಾತಿ ಮನೋಭಾವನೆ, ಪ್ರಾಂತ ಮನೋಭಾವನೆ ಉಂಟಾಗದೆ ಹಾಗೆ ಪರಿಣಾಮಕಾರಿಯಾದ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಜನರಲ್ ಅಡ್ಮಿನಿಸ್ಟ್ರೇಷನ್ ಬಗ್ಗೆ ಮಾತನಾಡಬೇಕೆಂದು ಇದ್ದೆ, ಆದರೆ ಮಾತನಾಡುವುದಕ್ಕೆ ಅವಕಾಶವಿಲ್ಲ ಮಾನ್ಯ ಡೆಪ್ಯುಟಿ ಸ್ಪೀಕರ್‌ರವರು ಬೆಲ್ ಹೊಡೆಯುತ್ತಿದ್ದಾರೆ. ಇಷ್ಟು ಹೇಳಿ ನನ್ನ ಮಾತು ಮುಗಿಸಿ ಕೂತುಕೊಳ್ಳುತ್ತೇನೆ.

ಶ್ರೀ ಟಿ.ಆರ್. ಶ್ಯಾಮಣ್ಣ (ಕೋಟೆ):—ಸನ್ಮಾನ್ಯ ಸಭಾಧ್ಯಕ್ಷರೇ ನಾನು ಹೇಳಬೇಕಾದ್ದು ಹೆಚ್ಚಿಗೆ ಏನೂ ಇಲ್ಲ. ಒಂದು ಕಟ್‌ಮೋಷನ್ ರೂಪದಲ್ಲಿ ಕೊಟ್ಟಿದ್ದೇನೆ. ಮೊದಲನೆಯದಾಗಿ ಕಳ್ಳಭಟ್ಟಿ ಸಾರಾಯಿ ವ್ಯಾಪಾರ ಮತ್ತು ತಯಾರಿಕೆ ವಿಪರೀತ ಜಾಸ್ತಿಯಾಗಿ ಜನಗಳ ಆರೋಗ್ಯ ಕೆಡುವುದರ ಜೊತೆಗೆ ಸರ್ಕಾರದ ವರಮಾನ ಬಹಳ ಕಡಿಮೆಯಾಗುತ್ತಾ ಇದೆ. ಅದರ ಬಗ್ಗೆ ಸೂಕ್ತ ಕಾರ್ಯ ಕ್ರಮ ತೆಗೆದುಕೊಳ್ಳದೇ ಹೋದರೆ ಜನಗಳ ಆರೋಗ್ಯ ಕೆಡುವುದರ ಜೊತೆಗೆ ಸರ್ಕಾರದ ವರಮಾನ ಕೂಡ ಹೋಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಟಾಡಿ ಆಕ್ಷನ್‌ನಲ್ಲಿ ಪಟ್ಟಭದ್ರ ಹಿತಾಸಕ್ತಿಗಳು ಒಂದು ಮನಾಪಲಿ ಮಾಡಿಕೊಂಡು ಅನೇಕ ಸಬ್‌ಲೀಜಸ್ ಕೊಟ್ಟು ವಿಪರೀತ ಲಾಭ ಮಾಡುತ್ತಿದ್ದಾರೆ ತಾಲ್ಲೂಕ್ ಮಟ್ಟದಲ್ಲಿ ಹರಾಜು ಮಾಡಬೇಕು. ಶಾಪ್

ಮಟ್ಟದಲ್ಲಿ ಹರಾಜು ಮಾಡಬೇಕೆಂದು ಸಲಹೆ ಮಾಡುವುದಕ್ಕೆ ಇಷ್ಟ ಪಡುತ್ತೇನೆ. ಮತ್ತು ಟಾಡಿ ಅಂಗಡಿಗಳನ್ನು ಅರಾಕ್‌ಶಾಪ್‌ಗಳನ್ನು ಜನಗಳು ವಾಸಮಾಡತಕ್ಕ ರೆಸಿಡೆನ್‌ಷಿಯಲ್ ಏರಿಯಾದಲ್ಲಿ ಓಪನ್ ಮಾಡಿರುವುದರಿಂದ ಜನರಿಗೆ ವಿಪರೀತ ಹಾವಳಿ ಆಗುತ್ತಿದೆ. ದಯ ಮಾಡಿ ಟಾಡಿ ಶಾಪ್ ಗಳನ್ನು ಜನಗಳು ವಾಸ ಮಾಡುವ ಜಾಗದಲ್ಲಿ ಕೊಡಬೇಡಿ ಎಂದು ಒತ್ತಾಯ ಪೂರ್ವಕವಾಗಿ ಅನೇಕ ಸಂದರ್ಭದಲ್ಲಿ ಹೇಳಿದ್ದೇನೆ. ಈಗಲೂ ಕೂಡ ಒತ್ತಾಯ ಪೂರ್ವಕವಾಗಿ ಹೇಳುತ್ತೇನೆ. ಬ್ರಾಂದಿ ಮತ್ತು ವಿಸ್ಕಿ ಶಾಪ್‌ಗಳು ಮೂಲೆ ಮೂಲೆಯಲ್ಲೂ ಓಪನ್ ಆಗುತ್ತಿದೆ. ಹುಡುಗರು ಅನೇಕರು ಕುಡಿಯುವುದಕ್ಕೆ ಅಭ್ಯಾಸ ಮಾಡಿದ್ದಾರೆ. ಇದನ್ನು ದಯವಿಟ್ಟು ಜನನಿಬಿಡ ಪ್ರದೇಶ ದಿಂದ ತೆಗೆದು ದೂರ ಹಾಕಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

General Administration ನೋಡುವಾಗ ತಾವು Report ನ preamble ನಲ್ಲಿ ಹೀಗೆ ಹೇಳಿದ್ದೀರಿ. The General Administration Department has under its control, a large number of administrative activities which include among other things, matters relating to services, their recruitment, morale and discipline, administrative improvements and integration of service. ಇಲಾಖೆಯಲ್ಲಿ ಲಂಚ ರುಷುವತ್ತು ತುಂಬಿರುವಾಗ, ಕೆಲಸ ಮಾಡುವವರು ಶ್ರದ್ಧೆಯಿಂದ ಕೆಲಸ ಮಾಡದೇ ಇರುವಾಗ, ಮೊರೇಲ್ ಎಲ್ಲಿ ಇರುತ್ತದೆ ? ಅಧಿಕಾರಿಗಳು ಹೈಕೋರ್ಟಿನಲ್ಲಿ ಹಾಕಿರುವ ಕೇಸ್ ಏನಾಯಿತು ಎಂದು ನೋಡುತ್ತಾ ಇರುವಾಗ, ತಮ್ಮ ಕಾರ್ಯದ ಬಗ್ಗೆ ಗಮನ ಕೊಡುವುದಿಲ್ಲ. ಆದುದರಿಂದ ಮೊರೇಲ್ ಆಗಲಿ, ಡಿಸಿಪ್ಲೈನ್ ಆಗಲಿ, ಅಡ್ಮಿನಿಸ್ಟ್ರೇಷನ್ನಿನಲ್ಲಿ ಇಂಪ್ರೂವ್‌ಮೆಂಟಾಗಲಿ ಇಲ್ಲದೇ ಇರುವುದು ಬಹಳ ಶೋಚನೀಯ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಈಗ ಸರ್ಕಾರದವರು ಎಸ್ಟಾಬ್ಲಿಷ್‌ಮೆಂಟ್‌ಗೆ ಬೇಕಾದಷ್ಟು ದುಡ್ಡು ಖರ್ಚು ಮಾಡುತ್ತಿದ್ದಾರೆ. ಎಫಿಶಿಯನ್ಸಿ ಸಾಕಾದಷ್ಟು ಮಟ್ಟಿಗೆ ಹೆಚ್ಚು ಮಾಡುವುದಕ್ಕೆ ಸೂಕ್ತ ಕಾರ್ಯಕ್ರಮ ತೆಗೆದು ಕೊಳ್ಳಬೇಕು ಎಂದು ಒತ್ತಾಯಪೂರ್ವಕವಾಗಿ ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ವಿಜಿಲೆನ್ಸ್ ಕಮಿಷನ್‌ಗೆ ದುಡ್ಡು ಖರ್ಚು ಮಾಡುತ್ತಿದ್ದಾರೆಯೇ ಹೊರತು ಅದರಿಂದ ಏನೂ ಪ್ರಯೋಜನವಾಗುತ್ತಿಲ್ಲ. ಬೆಂಗಳೂರು ನಗರ ಕಾರ್ಪೊರೇಷನ್ನಿನಲ್ಲಿ ವಿಜಿಲೆನ್ಸ್ ಕಮಿಷನ್ ಏರ್ಪಾಟುಮಾಡಿ ಒಂದೂವರೆ ವರ್ಷವಾಯಿತು. ಅವರು ಇದುವರೆಗೆ ಒಂದು ರಿಪೋರ್ಟ್ ಕೊಟ್ಟಿಲ್ಲ. ಸಸ್ಪೆನ್‌ಷನ್‌ನಲ್ಲಿ ಇಟ್ಟಿರುವವರು ಪ್ರಭಾವಶಾಲಿಗಳ ಮೂಲಕ ಅಥವಾ ದುಡ್ಡು ಕೊಟ್ಟು ತಮ್ಮ ಕೆಲಸಗಳನ್ನು ಮಾಡಿಕೊಂಡಿದ್ದಾರೆ. ಆದರೆ ಸಸ್ಪೆನ್‌ಷನ್‌ನಲ್ಲಿಟ್ಟಿರುವ ಬಡಪಾಯಿಗಳನ್ನು ಕೇಳುವವರೇ ಇಲ್ಲ. ಆದುದರಿಂದ ಕಾರ್ಪೊರೇಷನ್ ವಿಜಿಲೆನ್ಸ್ ಕಮಿಷನ್ ರಿಪೋರ್ಟ್ ಬೇಗ ತರಿಸಿ ಅವರ ಬಗ್ಗೆ ತೀರ್ಮಾನ ಮಾಡುವುದಕ್ಕೆ ಏರ್ಪಾಟು ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಇನ್ನು ಪೊಲೀಸ್ ಡಿಪಾರ್ಟ್‌ಮೆಂಟಿನ ರಿಪೋರ್ಟ್‌ನ್ನು ನೋಡಿದ ಪಕ್ಷದಲ್ಲಿ 16 ನೇ ಪುಟದಲ್ಲಿ ಹೀಗೆ ಹೇಳಿದ್ದಾರೆ. 1971ರಲ್ಲಿ 32,087 ಕ್ರೈಮ್ಸ್ ಇತ್ತು. ಈ ವರ್ಷ ಹೊಸ ಆಡಳಿತ ಬಂದ ಮೇಲೆ 37,295 ಆಗಿದೆ. ಕ್ರೈಮ್ಸ್ ವಿಪರೀತ ಜಾಸ್ತಿಯಾಗುತ್ತಿರುವ ಬಗ್ಗೆ ಸರ್ಕಾರ ಯಾವ ಕ್ರಮವನ್ನೂ ತೆಗೆದುಕೊಳ್ಳದೆ ಇರುವುದು ವಿಷಾದಕರ. ಪೊಲೀಸರ ಸಂಖ್ಯೆಗಿಂತ ಆಫೀಸರ ಸಂಖ್ಯೆಯೇ ಬೆಳೆಯುತ್ತಾ ಇದೆ. The present strength of the Central Crime Branch is 2 Police Inspectors, 7 Sub Inspectors, 12 Head Constables and 10 Police

Constables. ಈಗ ಅಧಿಕಾರಿಗಳ ಸಂಖ್ಯೆ ಜಾಸ್ತಿಯಾಗಿ ಎಸ್ಟಾಬ್ಲಿಷ್‌ಮೆಂಟ್ ಕೆಲಸ ಸಮರ್ಪಕವಾಗಿ ನಡೆಯುತ್ತಾ ಇಲ್ಲ ಎಂದು ಹೇಳಿದರೆ ತಪ್ಪಾಗಲಾರದು. ಪೋಲೀಸಿನವರಿಗೆ ಮಾಮೂಲು ಇಷ್ಟು ಕೊಡಬೇಕು ಅಂತ ಇದೆ. ಕ್ಲಬ್‌ನವರು ಇಷ್ಟು ಮಾಮೂಲು ಕೊಡಬೇಕು, ಕಂಪ್ಲೇಂಟ್ ಕೊಟ್ಟವರು ಇಷ್ಟು ಕೊಡಬೇಕು, ಯಾರ ಮೇಲೆ ಕಂಪ್ಲೇಂಟ್ ಕೊಟ್ಟಿದೆಯೋ ಆತ ಇಷ್ಟು ಕೊಡಬೇಕು ಅಂತ ಇದೆ. ಅನೇಕ ಮರ್ಡರ್ ಕೆಲಸಗಳಲ್ಲಿ ಕೂಡ ಲಂಚದ ಪ್ರಭಾವದಿಂದ ಕೆಲಸ ನಡೆಯದೆ ಇರುವ ಅನೇಕ ಸಂದರ್ಭಗಳಿವೆ. ಬಸವನಗುಡಿಯಲ್ಲಿ ಎರಡು ಮೂರು ಕೊಲೆಗಳು ಆದುವು. ಸಾಕಾದಷ್ಟು ಸಾಕ್ಷಿಗಳು ಇದ್ದರೂ ಕೂಡ, ಸರಿಯಾದ ಕ್ರಮ ತೆಗೆದುಕೊಳ್ಳದೆ ಅಧಕ್ಷತೆಗೆ ಅವಕಾಶವಾಗಿದೆ. ಕೆಲವು ಪೋಲೀಸ್ ಸ್ಟೇಷನ್ನಿನಲ್ಲಿ ಸಬ್ ಇನ್‌ಸ್ಪೆಕ್ಟರ್ ಪಾಳೆಯಗಾರರಾಗಿದ್ದಾರೆ. ಪೋಲೀಸರು ಜನಗಳ ಸ್ನೇಹಿತರಾಗಿ, ಜನರ ರಕ್ಷಕರಾಗಿ ಕೆಲಸ ಮಾಡದೇ ಹೋದ ಪಕ್ಷದಲ್ಲಿ ಅವರಿಂದ ದೇಶಕ್ಕೆ ಒಳ್ಳೆಯದಾಗುವುದಿಲ್ಲ. ಪೊಲೀಸ್ ಡಿಪಾರ್ಟ್‌ಮೆಂಟ್‌ಗೆ ವರ್ಷೇ ವರ್ಷೇ ಹೆಚ್ಚಿನ ಡಿಮ್ಯಾಂಡ್ ಕೊಡುತ್ತೇವೆ. ಹೀಗಿರುವಾಗ ಪೋಲೀಸರಿಂದ ರಕ್ಷಣೆಯಾಗದೆ ದಬ್ಬಾಳಿಕೆಯಾಗುತ್ತಿರುವುದರಿಂದ ಜನಗಳಿಗೆ ತೊಂದರೆಯಾಗುತ್ತಿದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಅಡ್ವರ್‌ಟೈಸ್‌ಮೆಂಟ್ ಡಿಪಾರ್ಟ್‌ಮೆಂಟಿನ ಬಗ್ಗೆ ಒಂದು ಮಾತು. ಯಾರು ಯಾರಿಗೆ ಅನುಕೂಲ, ಮಾಡಿಕೊಡಬೇಕೋ ಯಾರು ಯಾರಿಗೆ ಪ್ಯಾಟ್ರನೇಜ್ ಕೊಡಬೇಕೋ ಅದರಂತೆ ಅಡ್ವರ್‌ಟೈಸ್‌ಮೆಂಟ್ ಖರ್ಜಾಗುತ್ತಿದೆಯೇ ಹೊರತು, ಕಾರ್ಖಾನೆಗಳಲ್ಲಿ ತಯಾರಾಗುತ್ತಿರುವ ಸಾಮಾನುಗಳ ಅಡ್ವರ್‌ಟೈಸ್‌ಮೆಂಟ್ ಆಗುತ್ತಾ ಇಲ್ಲ. ಇದನ್ನು ಸರಿಪಡಿಸಬೇಕು ಎಂದು ಹೇಳಿ, ಇಷ್ಟು ಮಾತುಗಳನ್ನು ಆಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ) :—ಸ್ವಾಮಿ ಅಧ್ಯಕ್ಷರೇ, ಐದು ನಿಮಿಷಗಳ ಕಾಲ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದೀರಿ. ಅದಕ್ಕೆ ತಮ್ಮನ್ನು ಹೃತ್ಪೂರ್ವಕವಾಗಿ ನಮಸ್ಕರಿಸುತ್ತೇನೆ. ನಮ್ಮದು ಅಖಿಲ ಭಾರತ ರಾಜಕೀಯ ಪಕ್ಷವಾಗಿರುವುದರಿಂದ ಸೈದ್ಧಾಂತಿಕವಾಗಿ ಕೆಲವು ವಿಷಯಗಳನ್ನು ಹೇಳಬೇಕಾಗಿದೆ. 5 ನಿಮಿಷಗಳಲ್ಲಿ ಏನು ಹೇಳುವುದು ? ನಾವು ತತ್ವ ಸಿದ್ಧಾಂತ ಇರುವ ಜನ. ಆದುದರಿಂದ 5 ನಿಮಿಷ ಕೊಟ್ಟಿದ್ದಕ್ಕಾಗಿ ಕೃತಜ್ಞತೆಯನ್ನರ್ಪಿಸಿ ವಿನಯಪೂರ್ವಕವಾಗಿ ಕುಳಿತುಕೊಳ್ಳುತ್ತೇನೆ.

Mr. DEPUTY SPEAKER: It is not a matter of expressing any gratitude for me. When the names were sent from the Opposition, there was no name from the Hon. Member's party. But when a request came from one of you, we thought of adjusting and that is how his name has been incorporated. I thought it is my duty to help all the members so that no one would feel that he is ignored. If the Hon. Member is willing to speak, he may kindly commence his speech—I want the Hon. Members to speak.

ಶ್ರೀ ಕೋಣಂದೂರು ಲಿಂಗಪ್ಪ :—ತಮಗೆ ನಾನು ಕೃತಜ್ಞತೆಯನ್ನು ಅರ್ಪಿಸುತ್ತೇನೆ. ಮಾನ್ಯ ಅಧ್ಯಕ್ಷರೇ, ಶಿಸ್ತು, ಸಂಪ್ರದಾಯಗಳಿಗೆ ನಾನು ತಲೆಬಾಗಿ ಎರಡು ಮಾತುಗಳನ್ನು ಹೇಳಲು ಅಪೇಕ್ಷೆ ಪಡುತ್ತೇನೆ. ಮೊದಲನೆಯದಾಗಿ, ಕಳೆದ 25 ವರ್ಷಗಳಿಂದ ಜನರಲ್

ಅಡ್ಮಿನಿಸ್ಟ್ರೇಷನ್‌ನನ್ನು ಸರ್ಕಾರ ನಡೆಸಿಕೊಂಡು ಬಂದಿದೆ. ಅದು ಬ್ರಿಟಿಷರ ಕಾಲದಲ್ಲಿ ಯಾವ ನಡೆಯಲ್ಲಿ ಬಂದಿದೆಯೋ ಅದನ್ನು ಬದಲಾಯಿಸಿಲ್ಲ. ಇದು ಪ್ರಜಾಪ್ರಭುತ್ವದ ಅಪಭ್ರಂಶ, ನಮ್ಮ ರಾಷ್ಟ್ರದಲ್ಲಿ ನಡೆಯುತ್ತಿರುವುದು. ಪ್ರಜಾಪ್ರಭುತ್ವ ಮತ್ತು ಅಧಿಕಾರಶಾಹಿ, ಇವೆರಡೂ ಒಟ್ಟೊಟ್ಟಿಗೆ ಹೋಗುವುದಕ್ಕೆ ಸಾಧ್ಯವಿಲ್ಲ. ಆದರೂ ನಮ್ಮ ರಾಷ್ಟ್ರದಲ್ಲಿ ಮತ್ತು ನಮ್ಮ ರಾಜ್ಯದಲ್ಲಿ ಡೆಮಾಕ್ರಸಿ ಮತ್ತು ಬ್ಯೂರೊಕ್ರಸಿ ಒಟ್ಟಿಗೆ ನಡೆಯುತ್ತದೆ. ಇವತ್ತು ಪ್ರಜೆಗಳಿಂದ ಆಯ್ಕೆಯಾದ ಪ್ರತಿನಿಧಿಗಳಿಗೆ ಯಾವರೀತಿಯ ಅಧಿಕಾರ ಮತ್ತು ವಿಶೇಷವಾದಂಥ ಘನತೆ ಗೌರವಗಳಿಲ್ಲ. ರಾಜ್ಯ ಮತ್ತು ರಾಷ್ಟ್ರದಲ್ಲಿ ಕೇವಲ ಅಧಿಕಾರಿಗಳಿಗೆ ಅದರಲ್ಲೂ ಐ. ಎ. ಎಸ್. ಅಧಿಕಾರಿಗಳಿಗೆ ಇರತಕ್ಕ ಗೌರವ, ಲಕ್ಷ ಜನರ ಪ್ರತಿನಿಧಿಯಾದ ಎಂ. ಎಲ್. ಎ. ಗೆ, ಅಥವಾ 10 ಲಕ್ಷ ಜನರ ಪ್ರತಿನಿಧಿಯಾದ ಎಂ. ಪಿ. ಗೆ ಅಥವಾ ಮಂತ್ರಿಗೆ ಇಲ್ಲ. ಇವತ್ತಿಗೂ ಕೂಡ ವಿಕ್ಟೋರಿಯಾ ರಾಣಿಯ ಕಾಲದಿಂದ ಇಂದಿನವರೆಗೆ ಏನು ಸಂಪ್ರದಾಯ ನಡೆದುಕೊಂಡು ಬಂದಿದೆಯೋ ಅದೇ ಪದ್ಧತಿ ಈಗಲೂ ನಡೆದುಕೊಂಡು ಹೋಗುತ್ತಾ ಇದೆ. ಇದು ಪ್ರಜಾ ಪ್ರಭುತ್ವದ ಅಪಭ್ರಂಶ. ಆದುದರಿಂದ ಕಾಂಗ್ರೆಸ್ ಸರ್ಕಾರಕ್ಕೆ ಮೊದಲು ಧಿಕ್ಕಾರ ಹಾಕಿ ನಾನು ಎರಡು ಮಾತನ್ನು ಹೇಳಲು ಅಪೇಕ್ಷೆ ಪಡುತ್ತೇನೆ. ಇವರಿಗೆ ಪ್ರಜಾಪ್ರಭುತ್ವದಲ್ಲಿ ಪ್ರಮಾಣಿಕ ತನ ಮತ್ತು ಕಳಕಳಿ ಇದ್ದದ್ದೇ ಆದರೆ ಅಧಿಕಾರ ವಿಕೇಂದ್ರೀಕರಣ ಮಾಡಬೇಕು. ಸರ್ಕಾರದವರು ದೊಡ್ಡ ದೊಡ್ಡ ಹುದ್ದೆಗಳನ್ನು ಸೃಷ್ಟಿಮಾಡಿ ಅಧಿಕಾರಿಗಳನ್ನು ನೇಮಿಸುವುದರಲ್ಲಿ ನಿಷ್ಣಾತ ರಾಗಿದ್ದಾರೆಯೇ ಹೊರತು ಅಧಿಕಾರ ವಿಕೇಂದ್ರೀಕರಣದ ಬಗ್ಗೆ ಯಾವ ಹೆಜ್ಜೆಯನ್ನೂ ಇಟ್ಟಿಲ್ಲ. ಈ ಬಗ್ಗೆ ನಾನು ವಿಷಾದವನ್ನು ವ್ಯಕ್ತಪಡಿಸುತ್ತೇನೆ. ನಮ್ಮ ರಾಜ್ಯಕ್ಕೆ ಬೇಕಾದಂತ ಅಧಿಕಾರಿ ಗಳನ್ನು ನೇಮಕ ಮಾಡಿಕೊಳ್ಳತಕ್ಕ ಅಧಿಕಾರ ನಮಗೆ ಇರಬೇಕು. ಹಾಗೆಯೇ ಗೌರ್ನರ್ ಬಗ್ಗೆ ಹಿಂದೆ ಹೇಳಿದ್ದೇನೆ. ಪ್ರಜಾಪ್ರಭುತ್ವದಲ್ಲಿ ನಮಗೆ ಗೌರ್ನರ್ ಏತಕ್ಕೆ ಬೇಕು ? ಗೌರ್ನರ್ ಹುದ್ದೆ, ಜಿಲ್ಲಾಧಿಕಾರಿ, ತಹಶೀಲ್ದಾರ್ ಇವರುಗಳನ್ನೆಲ್ಲ ತೆಗೆಯಬೇಕು. ಅದಕ್ಕೆ ಬದಲು ಚುನಾಯಿತ ಪ್ರತಿನಿಧಿಗಳಿಗೆ ತಾಲ್ಲೂಕ್ ಬೋರ್ಡ್, ವಿಧಾನ ಪರಿಷತ್ತು ವಿಧಾನಸಭೆ, ಮಂತ್ರಿಮಂಡಲಗಳಲ್ಲಿ ಇವರಿಗೆ ಸಂಪೂರ್ಣ ಅಧಿಕಾರವಿರಬೇಕು. ಇತ್ತೀಚೆಗೆ ರೆವಿನ್ಯೂ ಅಧಿಕಾರಿಗಳಿಗೆ ಅಪಾರವಾದ ಅಧಿಕಾರವನ್ನು ಕೊಟ್ಟಿದ್ದೀರಿ. ಆ ಅಧಿಕಾರ ಜನರಿಂದ ಚುನಾಯಿತರಾದ ಪ್ರತಿನಿಧಿಗಳಿಗೆ ಸಿಗಬೇಕು. ಈ ಒಂದು ವ್ಯವಸ್ಥೆಯನ್ನು ತಾವು ಜಾರಿಗೆ ತರುವವರೆಗೆ ಇದು ಪ್ರಜಾಪ್ರಭುತ್ವವಲ್ಲ, ಕೇವಲ ಪ್ರಜಾಪ್ರಭುತ್ವದ ಅಪಭ್ರಂಶ ಎಂದು ಮಾತ್ರ ಕರೆಯಲು ಅಪೇಕ್ಷೆಪಡುತ್ತೇನೆ.

ಇನ್ನು ಕೇವಲ ಎರಡು ವಿಷಯಗಳ ಬಗ್ಗೆ ಹೇಳಲು ಅಪೇಕ್ಷೆಪಡುತ್ತೇನೆ. ನಾನು ಸ್ವಲ್ಪ ಕಾಲದ ಹಿಂದೆ ನವದೆಹಲಿಗೆ ಹೋಗಿದ್ದೆ. ಅಲ್ಲಿ ಮೈಸೂರ್ ಹೌಸ್ ಅಂತ ಇದೆ. ಯಾವನೇ ಆದರೂ ಸ್ವಾಭಿಮಾನವಿರತಕ್ಕವನು ಕನ್ನಡ ನೆಲದ ವಾಸನೆ ಇರತಕ್ಕ ಮನುಷ್ಯ ಅಪಮಾನದಿಂದ ತಲೆತಗ್ಗಿಸಿಕೊಂಡು ಬರಬೇಕು. ಅಕ್ಕಪಕ್ಕದ ಗುಜರಾತಿ ಭವನ, ತಮಿಳುನಾಡು ಭವನ ಮತ್ತು ಕಾಶ್ಮೀರ ಭವನ ನೋಡಿ, ನಮ್ಮ ಮೈಸೂರು ಭವನವನ್ನು ನೋಡಿದರೆ ನಾಚಿಕೆಯಿಂದ ತಲೆ ತಗ್ಗಿಸಿಕೊಂಡು ಬರಬೇಕು. ಮೈಸೂರು ಭವನದಲ್ಲಿ ಒಳಗೆ ಇರತಕ್ಕ 56 ಜನರಲ್ಲಿ 3–4 ಜನ ಕನ್ನಡಿಗರನ್ನು ಬಿಟ್ಟು ಬೇರೆ ಯಾರೂ ಇಲ್ಲ, ಗುಜರಾತ್ ಭವನಕ್ಕೆ ಹೋದಾಗ ಅಲ್ಲಿ ಜನ ಬರೀ ಗುಜರಾತಿನವರೆ. ಅವರಿಗೆ ಬೇರೆ ಭಾಷೆ ಬರುವುದಿಲ್ಲ, ನಮ್ಮ ಅಧಿಕಾರಿ ಕೂಡ ಯಾರು ಅಂದರೆ, ಪಂಜಾಬ್ ಐ. ಎ. ಎಸ್. ಅವರು ದರ್ಬಾರು ನಡೆಸುತ್ತಿದ್ದಾರೆ. ಅಲ್ಲಿ ಲಕ್ಷಾಂತರ ರೂಪಾಯಿ ಖರ್ಚಾಗುತ್ತಿದೆ. ಅದು ಮೈಸೂರು ಭವನವಂತೆ. ಆ ಮೈಸೂರು ಭವನಕ್ಕೆ ಯಾರು ಹೋದರೂ ಕೂಡ ನಾಚಿಕೆ ಪಟ್ಟುಕೊಂಡು ಬರಬೇಕು. ನಾನು ಗೋವಾಕ್ಕೆ ಹೋದಾಗ ಇನ್‌ಫರ್‌ಮೇಷನ್ ಡಿಪಾರ್ಟ್‌ಮೆಂಟನ್ನು ನೋಡಿಕೊಂಡು ಬಂದಿದ್ದೇನೆ. ನಮ್ಮ ರಾಜ್ಯದ ಬಗ್ಗೆ ಇಂಗ್ಲೀಷಿನಲ್ಲಿ ಎರಡು ಫಾಂಪ್ಲೆಟ್ ಹಾಕಿದ್ದಾರೆ. ಗೋವಾದಲ್ಲಿ ಪೋರ್ಚುಗೀಸ್ ಭಾಷೆ, ಕೊಂಕಣಿ ಭಾಷೆ, ಮತ್ತು

ಮರಾಠಿ ಭಾಷೆ ಇದೆ. ಅವರಲ್ಲಿ ನಮ್ಮ ರಾಜ್ಯಕ್ಕೆ ಸಂಬಂಧಪಟ್ಟ ಮಾಹಿತಿಯನ್ನು ಒದಗಿಸಬೇಕು. ಅಲ್ಲಿನ ಜನರಿಗೆ ನಮ್ಮ ರಾಜ್ಯದ ಬಗ್ಗೆ ತಿಳುವಳಿಕೆ ಕೊಡಬೇಕು.

ಅದನ್ನು ನಾವು ಮಾಡಬೇಕು. ಈ ಮಾತನ್ನು ಹೇಳಿ ನಾನು ಒಂದು ವರ್ಷವಾಯಿತು. ಅಲ್ಲಿಂದ ಆ ಜನರನ್ನು ತೆಗೆದು ಬೇರೆಯವರನ್ನು ಅಪಾಯಿಂಟ್ ಮಾಡಿ. ಬೇಕಾದರೆ ಪೋರ್ಚುಗೀಸ್‌ನವರೂ ಇರಲಿ, ಹಾಗೆಯೇ ಕನ್ನಡದವರೂ ಇರಲಿ ವಿಧಾನಸೌಧದಲ್ಲಿ ಇರತಕ್ಕಂಥ ಇನ್‌ಫರ್ಮೇಷನ್ ಬಗ್ಗೆ ಹೇಳದೇ ಇರುವುದು ಒಳ್ಳೆಯದು ಎಂದು ನನಗೆ ಅನಿಸುತ್ತದೆ. ಈವೊತ್ತು ನಮ್ಮ ರಾಜ್ಯಕ್ಕೆ ಏನಾದರೂ ಒಳ್ಳೆಯ ಕೆಲಸ ಮಾಡಿದ್ದರೆ, ಏನಾದರೂ ಈ ಬಗ್ಗೆ ಪ್ರಚಾರ ಆಗಿದ್ದರೆ ಅದು ಇಂಗ್ಲೀಷ್‌ನಲ್ಲಿ ಮಾಡಿದ್ದೀರಿ. ಸಾಮಾನ್ಯವಾಗಿ ಹೊರಗಡೆಯಿಂದ ಬಂದಿರತಕ್ಕಂಥಾವರಿಗೆ ಒಳ್ಳೆಯ ಕೆಲಸ ಮಾಡಿದ್ದೀರಿ. ಯಾವ ರೀತಿಯಾಗಿಯೂ ಮೈಸೂರಿನ ಗೌರವವನ್ನು ತರತಕ್ಕಂಥ ಕೆಲಸ ಮಾಡಿಲ್ಲ. ಇದು ಸತ್ತ ಇಲಾಖೆ, ಇದಕ್ಕೆ ಜೀವಕಳೆ ಕೊಡಿ ಎಂದು ಹೇಳುತ್ತೇನೆ.

ಇನ್ನು ಫಿಲ್ಮ್ ಡೆವಲಪ್‌ಮೆಂಟ್ ಕಾರ್ಪೋರೇಷನ್ ಬಗ್ಗೆ ಒಂದು ವಿಷಯ ಮಾತ್ರ ಹೇಳುತ್ತೇನೆ. ತಾವು ಈ ಬಗ್ಗೆ ಒಳ್ಳೆಯ ಯೋಜನೆ ಮಾಡಿದ್ದೀರಿ. ಮಿನಿ ಥಿಯೇಟರ್ಸ್ ಮಾಡುವುದು ಒಳ್ಳೆಯ ಯೋಜನೆ. ಅದರ ಜೊತೆಗೆ ಖಾಸಗೀಯವರ ಸಿನಿಮಾದ ಬಗ್ಗೆಯೂ ಯೋಜನೆ ಮಾಡಬೇಕು. ಮೊದಲು ಇದು ಯಶಸ್ವಿಯಾಗಬೇಕಾದರೆ ಖಾಸಗೀ ಥಿಯೇಟರುಗಳು ಏನು ಇದೆ ಅದನ್ನು ಮೊದಲು ರಾಷ್ಟ್ರೀಕರಣ ಮಾಡಿ. ಹಾಗೆಯೇ ನಮ್ಮ ರಾಜ್ಯದಲ್ಲಿರತಕ್ಕಂಥ ಜನಪದ ಸಾಹಿತ್ಯ, "ಜನಪದ ಸಂಸ್ಕೃತಿ" ಮತ್ತು ಹಾಗೆಯೇ ನಾನಾ ಸಂಸ್ಕೃತಿಗಳ ವಿಷಯಗಳನ್ನು ಸಂಗ್ರಹಿಸಿ ಸಣ್ಣ ಸಣ್ಣ ಚಲನಚಿತ್ರಗಳನ್ನು ಮಾಡಬೇಕು. ಡಾಕ್ಯುಮೆಂಟರಿ ಫಿಲಂ ಮಾಡಬೇಕು. ಚಿಕ್ಕ ಮಕ್ಕಳಿಗೆ ಬೇಕಾದಂಥ ಸಿನಿಮಾಗಳನ್ನೂ ಚಿತ್ರಗಳನ್ನೂ ಮಾಡಬೇಕು. ಇದಕ್ಕೆ ಸಾಕಾದಷ್ಟು ಹಣವನ್ನು ಒದಗಿಸಬೇಕು ಎಂದು ಹೇಳುತ್ತೇನೆ. ಈಗ ಪೋಲೀಸರ ಬಗ್ಗೆ ಹೇಳಿದ್ದಾರೆ. ನಾನು ಆ ಬಗ್ಗೆ ಹೇಳುವುದಿಲ್ಲ. ಜನರಲ್ ಅಡ್ಮಿನಿಸ್ಟ್ರೇಷನ್ ಬಗ್ಗೆ ಹೇಳುವುದಾದರೆ ಇದು ಹೀಗೆ ಇದ್ದರೆ ಇದು ಅದಷ್ಟು ಬೇಗ ಮುಳುಗಿ ಹೋಗುತ್ತದೆ. ಅದಷ್ಟು ಹೆಚ್ಚಿಗೆ ಲಂಚ ತೆಗೆದುಕೊಳ್ಳಲಿ, ಜನತೆಯಲ್ಲಿ ಅಸಮಾಧಾನ ಉಂಟಾಗಲಿ, ಅದಷ್ಟು ಕ್ಷೋಭೆ ಉಂಟಾಗಲಿ, ಅದಷ್ಟು ಮಟ್ಟಿಗೆ ಇದರಲ್ಲಿ ಪರಿವರ್ತನೆ ಆಗಲಿ, ಅದಷ್ಟು ಬೇಗ ನಿಮ್ಮ ಸರ್ಕಾರ ಉರುಳಿ ಹೋಗಲಿ ಎಂದು ಹಾರೈಸುತ್ತೇನೆ. ಈ ಬಗ್ಗೆ ಹೇಳಿದರೂ ರಿಪೇರಿಯಾಗುವುದಿಲ್ಲ, ಇವರು ರಿಪೇರಿ ಮಾಡುವುದೂ ಇಲ್ಲ. ನೀವು ದೇಶಕ್ಕೆ ಒಳ್ಳೆಯದು ಮಾಡಿರಿ, ಇಲ್ಲದೇ ಹೋದರೆ ನೀವು ಕೆಳಕ್ಕೆ ಇಳಿಯಿರಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ

Mr. DEPUTY SPEAKER. Just now the Hon. Member said that his party is an All India Party and it was not given sufficient time. I will just give an idea about the time taken by each Party up to yesterday on the discussion of Demands :

Congress (O)	...	13 hours 5 minutes
S.S.P. consisting of only two members	...	4 hours 14 minutes
C.P.I. consisting of only three members	...	4 hours 33 minutes
Jana Paksha consisting of only two members	...	2 hours 14 minutes
Independents	...	7 hours 9 minutes.

Can the hon. member now say that we have not done justice ?

ಶ್ರೀ ಕೋಣಂದೂರು ಲಿಂಗಪ್ಪ :—ನನಗೆ ಮಾತನಾಡಲು 5 ನಿಮಿಷ ಕಾಲಾವಕಾಶ ಕೊಟ್ಟಿದ್ದರಿಂದ ನಾನು ಜಾಸ್ತಿ ಹೇಳಲಿಲ್ಲ. ಆದರೂ ಕೂಡ ಅದಕ್ಕೆ ನಾನು ಕ್ಷಮೆ ಕೇಳುತ್ತೇನೆ.

Mr. DEPUTY SPEAKER :—The hon. member need not make an imputation when nobody is against any party.

Sri M. S. KRISHNAN :—It is better that Leaders of each party are given half-an-hour's time

Mr. DEPUTY SPEAKER :—As far as my knowledge goes members of various parties have been given sufficient time while initiating discussion on various Demands. It is a matter which has to be discussed by the Opposition in consultation with their Leader. The best thing is to have an understanding amongst themselves.

Sri H. S SIDDAPPA :—We give the list of those parties which want us to give. But some parties do not want us to give their names.

Sri M. S. KRISHNAN :—Sir, I protest against what Sri Siddappa says.

Mr. DEPUTY SPEAKER :—I think we have given time whenever it was asked.

ಶ್ರೀ ಹೆಚ್. ಜಿ. ಚೆನ್ನಪ್ಪ (ಮಾಗಡಿ) :—ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳು ಮಂಡಿಸಿರತಕ್ಕಂಥ ಸಾಮಾನ್ಯ ಆಡಳಿತ, ಅಬ್ಕಾರಿ, ಪೋಲೀಸು, ಜೈಲು, ಇನ್‌ಫರ್ಮೇಷನ್ ಡಿಪಾರ್ಟ್‌ಮೆಂಟಿನ ಬೇಡಿಕೆ ಮೇಲೆ ಮಾತನಾಡುವುದಕ್ಕೆ ಇಚ್ಛೆಪಡುತ್ತೇನೆ. ಈ ಬಗ್ಗೆ ಮಾತನಾಡಲು ತಾವು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಕೃತಜ್ಞತಾ ಪೂರ್ವಕವಾದ ವಂದನೆಗಳನ್ನು ಸಲ್ಲಿಸಿ ಒಂದೆರಡು ವಿಷಯಗಳನ್ನು ಮಾತ್ರ ಹೇಳುತ್ತೇನೆ, ಈ ಬಗ್ಗೆ ಹಿಂದೆ ಮಾತನಾಡಿದ ಎಲ್ಲಾ ಸ್ನೇಹಿತರೂ ಸಾಕಷ್ಟು ವಿಷಯಗಳನ್ನು ಎಲ್ಲಾ ಡಿಪಾರ್ಟ್‌ಮೆಂಟ್‌ಗಳ ಬಗ್ಗೆ ಹೇಳಿದ್ದಾರೆ. ಆದರೆ ನಾನು ಕೆಲವು ವಿಷಯಗಳನ್ನು ಮಾತ್ರ ಹೇಳಿ ಈ ಅಲ್ಪಕಾಲಾವಧಿ ಯಲ್ಲೇ ನನ್ನ ಮಾತನ್ನು ಮುಗಿಸುತ್ತೇನೆ.

ಈ ಪೋಲೀಸ್ ಇಲಾಖೆ ನಮ್ಮ ದೇಶದಲ್ಲಿ ಒಂದು ನ್ಯಾಯವನ್ನು ಒದಗಿಸತಕ್ಕಂಥ ಇಲಾಖೆ ಎಂದು ನಾವೆಲ್ಲರೂ ತಿಳಿದುಕೊಂಡಿದ್ದೇವೆ, ಆದರೆ ಈಗ ಅದು ಆ ಮಟ್ಟದಲ್ಲಿ ಇಲ್ಲವೆಂದು ಹೇಳಿದರೆ ತಪ್ಪಾಗಲಾರದು. ಪೋಲೀಸ್ ಸ್ಟೇಷನ್‌ಗೆ ಹೋದರೆ ನಮ್ಮ ಜನತೆಗೆ ನ್ಯಾಯ ದೊರಕುತ್ತದೆ ಎನ್ನುವ ಒಂದು ಧೈರ್ಯ, ಕಡಿಮೆಯಾಗಿ ಬರುತ್ತಾ ಇದೆ. ಇದರಲ್ಲಿ ನ್ಯಾಯ ಕ್ಕಿಂತಲೂ ಅನ್ಯಾಯವೇ ಜಾಸ್ತಿಯಾಗಿದೆ ಎಂದು ಹೇಳುತ್ತೇನೆ. ನ್ಯಾಯಕ್ಕೆ ಮನ್ನಣೆ ದೊರಕುತ್ತಾ ಇಲ್ಲ ಎಂದು ಜನಗಳ ಕೂಗು ನಮ್ಮ ಕಿವಿಗೆ ಮುಟ್ಟುತ್ತಾ ಇದೆ. ಇದರ ಬಗ್ಗೆ ಒಂದು ಹೆಚ್ಚಿನ ಗಮನ ಕೊಡಬೇಕು. ನ್ಯಾಯವನ್ನು ದೊರಕಿಸತಕ್ಕಂಥಾ ಈ ಇಲಾಖೆಯಲ್ಲಿ ಬಡವ ಬಲ್ಲಿದ ಎಂಬ ತಾರತಮ್ಯವನ್ನು ಹೇಳದೆ ನ್ಯಾಯ ದೊರಕಬೇಕು. ಜನಗಳು ಯಾರಾ ದರೂ ನಿರಪರಾಧಿಗಳು ದೂರು ಕೊಟ್ಟರೆ ಅಂಥವಾರಿಗೆ ಈವೊತ್ತಿನ ದಿವಸ ಅವಕಾಶವಿಲ್ಲ ದಂತಾಗಿದೆ. ಅಂತಹ ನಿರಪರಾಧಿಗಳು ನಮ್ಮ ಹತ್ತಿರ ಬಂದು ಅನೇಕ ವಿಷಯಗಳನ್ನು ಹೇಳಿಕೊಳ್ಳುತ್ತಾ ಇದ್ದಾರೆ, ನಮಗೆ ನ್ಯಾಯ ದೊರಕುತ್ತಾ ಇಲ್ಲ, ನಾವು ನಿರಪರಾಧಿಗಳು ಹೋದರೆ ನಮ್ಮನ್ನು ಕಾಯಿಸಿ ನೀವು ಏತಕ್ಕೆ ದೂರು ತೆಗೆದುಕೊಂಡು ಬಂದಿದ್ದೀರಿ ಎಂದು

ಕೇಳುತ್ತಾರೆ ಎಂದು ಇದು ದಿನೇ ದಿನೇ ಜಾಸ್ತಿಯಾಗುತ್ತಾ ಇದೆ. ಆದುದರಿಂದ ಈ ಇಲಾಖೆಯ ಮೇಲೆ ಅಧಿಕಾರಿಗಳು ಮತ್ತು ಮಂತ್ರಿಗಳು ಹೆಚ್ಚಿನ ಗಮನವನ್ನು ಹರಿಸಿ ನ್ಯಾಯವನ್ನು ಪರಿಪಾಲನೆ ಮಾಡುವಂತೆ ಮಾಡಬೇಕು ಎಂದು ಕೇಳುತ್ತೇನೆ ಮತ್ತು ಈ ಆಡಳಿತವನ್ನು ಸಫಲಗೊಳಿಸುವಂತೆ, ಶಕ್ತಿಯುತವಾಗಿ ಕೆಲಸ ಮಾಡಬೇಕು ಎಂದು ಈ ಸಂದರ್ಭದಲ್ಲಿ ಒತ್ತಿ ಹೇಳುತ್ತೇನೆ.

ಇನ್ನು ಇದೇ ಸಂದರ್ಭದಲ್ಲಿ ಇನ್ನೊಂದು ವಿಷಯವನ್ನು ಹೇಳುತ್ತೇನೆ. ಅದು ಪ್ರೊಬೆಷನರಿ ಸಬ್‌ಇನ್‌ಸ್ಪೆಕ್ಟರ್‌ನ್ನು ನೇಮಕ ಮಾಡಿಕೊಳ್ಳುವ ವಿಚಾರ. ಇದು ಹಣಕಾಸಿನ ವ್ಯವಸ್ಥೆಯ ಮೇಲೆ ಸಿಕ್ಕುತ್ತಾ ಇದೆ. ಇಲ್ಲದೇ ಹೋದರೆ ಆ ಹುದ್ದೆಗಳು ಸಿಕ್ಕುತ್ತಾ ಇಲ್ಲ ಎಂದು ಕೇಳಿದ್ದೇನೆ. ಕಳೆದ ಸಾರಿ ಪೋಲೀಸ್ ಸಬ್‌ಇನ್‌ಸ್ಪೆಕ್ಟರನ್ನು ಪ್ರೊಬೆಷನರಿಯಾಗಿ ನೇಮಕ ಮಾಡುವ ಸಂದರ್ಭದಲ್ಲಿ ಏನಾಯಿತು ಎಂದರೆ ನೀವು ಯಾವ ಮಂತ್ರಿಗಳಿಂದ ಶಿಫಾರಸು ಮಾಡಿಸಿದರೂ ಕೂಡ ಆ ಕೆಲಸ ಸಿಕ್ಕುವುದಿಲ್ಲ 5 ಸಾವಿರ ರೂಪಾಯಿ ಕೊಟ್ಟರೆ ಮಾತ್ರ ಕೆಲಸ ಸಿಕ್ಕುತ್ತದೆ ಎಂದು ಹೇಳಿದರು. ಅಲ್ಲಿ ಇಲ್ಲಿ ಶಿಫಾರಸು ಮಾಡಿಸುವ ಬದಲು ದುಡ್ಡು ಕೊಟ್ಟಿದ್ದರೆ ಕೆಲಸ ಆಗುತ್ತಿತ್ತು ಎಂದು ಹೇಳಿದರು. ನಾನು ಅದನ್ನು ನಂಬಿರಲಿಲ್ಲ. ಕೊನೆಗೆ ಅದೇರೀತಿ ಆಯಿತು ಎಂದು ಕೇಳಿದ್ದೇನೆ. ಆದುದರಿಂದ ಈ ಇಲಾಖೆಯಲ್ಲಿ ದಕ್ಷತೆ ಕಡಿಮೆಯಾಗಬೇಕಾದರೆ ಇದೂ ಒಂದು ಕಾರಣ ಎಂದು ನನಗೆ ಅನಿಸುತ್ತದೆ. ಆದುದರಿಂದ ಸೆಲೆಕ್ಷನ್ ಕಾಲದಲ್ಲಿ ದಕ್ಷರಿಗೆ ದಕ್ಷತೆಯಿಂದ ಮಾಡುವಂಥಾವರಿಗೆ ಕೆಲಸವನ್ನು ಒದಗಿಸಿ ಕೊಡಬೇಕು. ಈವಾಗ ನಡೆಯುತ್ತಾ ಇರುವಂಥ ಹಣಕಾಸಿನ ಒಂದು ವ್ಯವಸ್ಥೆ ಹೋಗಬೇಕು ಎಂದು ನಾನಾದರೂ ಈ ಸಂದರ್ಭದಲ್ಲಿ ಮನವಿಮಾಡಿಕೊಳ್ಳುತ್ತೇನೆ. ಇಲ್ಲದೇ ಹೋದರೆ ನಿಜವಾಗಿಯೂ ಈ ಇಲಾಖೆಯಲ್ಲಿ ದಕ್ಷತೆ ಕುಂಠಿತವಾಗಿ ಎಲ್ಲೆಲ್ಲೂ ಅಧರ್ಮ, ಅನ್ಯಾಯಗಳು ಜಾಸ್ತಿಯಾಗುತ್ತದೆ ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಪೋಲೀಸ್ ಇಲಾಖೆಯಲ್ಲಿ ಮೇಲ್ಪಟ್ಟ ಅಧಿಕಾರಿಗಳ ವರ್ಗಾವಣೆ ಎರಡು ಮೂರುವರ್ಷಗಳಲ್ಲಿ ಆಗುತ್ತದೆ. ಆದರೆ ದಫೇದಾರ್ ಮತ್ತು ಕಾನ್‌ಸ್ಟೇಬಲ್‌ಗಳು ಬಹಳ ವರ್ಷ ಒಂದೇ ಸ್ಥಳದಲ್ಲಿ ಇರುತ್ತಾರೆ. ಇವರು ಸ್ಥಳದ ಮಹತ್ವದಿಂದ ಹೆಚ್ಚಿನ ಒತ್ತಾಯವನ್ನು ತಂದು ಹೊಸದಾಗಿ ಬರುವ ಅಧಿಕಾರಿಗಳು ಇವರ ಇಂಗಿತಕ್ಕೆ ತಕ್ಕಂತೆ ನಡೆಯುವ ಹಾಗೆ ಆಗುತ್ತದೆ. ಆದುದರಿಂದ ಮೇಲ್ಪಟ್ಟ ಅಧಿಕಾರಿಗಳನ್ನು ವರ್ಗ ಮಾಡುವ ರೀತಿಯಲ್ಲಿ ಇತರರನ್ನೂ ಕೂಡ ವರ್ಗ ಮಾಡತಕ್ಕದ್ದು ಒಳ್ಳೆಯದು ಎಂದು ಹೇಳಬಯಸುತ್ತೇನೆ.

ಎಕ್ಸೈಜ್ ಇಲಾಖೆಯ ವಿಷಯದಲ್ಲಿ ಹೇಳುವುದಾದರೆ ತಾಲ್ಲೂಕ್‌ವೈಸ್, ಷಾಪ್‌ವೈಸ್ ಹರಾಜು ಮಾಡುವುದರಿಂದ ಹೆಚ್ಚಿನ ಹಣ ಸರ್ಕಾರಕ್ಕೆ ಬರುತ್ತದೆ. ಡಿಸ್ಟ್ರಿಕ್ಟ್‌ವೈಸ್ ಮಾಡುವುದರಿಂದ ಅಷ್ಟು ಹಣ ಸರ್ಕಾರಕ್ಕೆ ಬರಲಾರದು. ಯಾರೋ ಒಬ್ಬಿಬ್ಬ ಬಂಡವಾಳಷಾಹಿಗಳ ಕೈಗೆ ಈ ಇಲಾಖೆ ಸಿಕ್ಕಿ ಒಬ್ಬ ವ್ಯಕ್ತಿಯ ರಾಜ್ಯ ಬರುತ್ತದೆ. ಬಡ ಜನರಿಗೆ ಅನುಕೂಲವಾಗುವುದಿಲ್ಲ. ಹರಾಜು ಮಾಡುವುದರಲ್ಲಿ ವಿಕೇಂದ್ರೀಕರಣವಾಗಬೇಕು ಎಂದು ಹೇಳುತ್ತೇವೆ.

ಜನರಲ್ ಅಡ್ಮಿನಿಸ್ಟ್ರೇಷನ್ ವಿಚಾರ ಮಾತನಾಡುವಾಗ, ಅಗ್ರಿಕಲ್ಚರಲ್ ಇಲಾಖೆಯಲ್ಲಿ ಡಿಪ್ಲೊಮಾ ಮಾಡಿರುವವರ ಕೇಡರ್ ಮತ್ತು ಡಿಗ್ರಿ ಮಾಡಿರುವವರ ಕೇಡರ್ ಎರಡನ್ನೂ ಒಂದೇ ದರ್ಜೆಗೆ ಏರಿಸಿ, ಒಂದೇ ಕೇಡರ್ ಮಾಡಿದ್ದಾರೆಂದು ತಿಳಿದು ಬಂದಿದೆ. ಇದು ಬಹಳ ಶೋಚನೀಯವಾದ ವಿಷಯ. ಪದವೀಧರರು ಬೇಕಾಗಿಲ್ಲ, ಡಿಪ್ಲೊಮಾ ಮಾಡಿರುವವರೇ ಸಾಕು ಎನ್ನುವುದಾದರೆ ಅಗ್ರಿಕಲ್ಚರಲ್ ಯೂನಿವರ್ಸಿಟಿಯನ್ನು ಮುಚ್ಚತಕ್ಕದ್ದು ಒಳ್ಳೆಯದು ಎಂದು ನನಗಾದರೂ ಅನ್ನಿಸುತ್ತದೆ. ಎಲ್, ಎಜಿ. ಡಿಪ್ಲೊಮಾ ಮಾಡಿದವರೇ ಸಾಕು ಎನ್ನುವುದಾದರೆ ವಿಶ್ವವಿದ್ಯಾ

ನಿಲಯುವನ್ನು ಮುಚ್ಚಿದರೆ ಸರ್ಕಾರಕ್ಕೆ ಖರ್ಚು ಕೂಡ ಕಡಮೆಯಾಗುತ್ತದೆ. ಆ ರೀತಿ ಮಾಡ ಬಹುದು. ನನ್ನ ಅಭಿಪ್ರಾಯದಲ್ಲಿ ಪದವೀಧರರಿಗೂ ಡಿಪ್ಲೊಮಾದಾರರಿಗೂ ಅಂತರವಿರ ಬೇಕು. ಪದವೀಧರರ ದರ್ಜೆ ಮೇಲ್ಪಟ್ಟದ್ದಾಗಿರಬೇಕು. ಅವರ ದರ್ಜೆ ಡಿಪ್ಲೊಮಾದಾರರನ್ನು ತಂದು ಇರಿಸುವುದು ಸರಿಯಲ್ಲ. ಇದೇ ರೀತಿ ಅನೇಕ ಇಲಾಖೆಗಳಲ್ಲಿ ಅನ್ಯಾಯಗಳಾಗುತ್ತಿವೆ. ಅಯಾ ಗ್ರೇಡ್‌ವಾರ್ ಹುದ್ದೆಗಳನ್ನು ಕಲ್ಪಿಸಿಕೊಡಬೇಕು. ಇಲ್ಲದೆ ಹೋದರೆ ವಿದ್ಯಾವಂತರ, ಬುದ್ಧಿವಂತರ ಸಂಖ್ಯೆ ಕಡಮೆಯಾಗಿ, ಇಲಾಖೆಗಳಲ್ಲಿ ಶಕ್ತಿ ಕಡಮೆಯಾಗಿ ಅನ್ಯಾಯಗಳು ಆಗುತ್ತವೆ. ಬುದ್ಧಿವಂತರಿಗೆ ಹುದ್ದೆಗಳನ್ನು ಕೊಡತಕ್ಕದ್ದು ಜಾಸ್ತಿಯಾಗಬೇಕು. ಬುದ್ಧಿ ವಂತರನ್ನು ತೆಗೆದುಕೊಂಡು ಅವರ ಬುದ್ಧಿಶಕ್ತಿಯನ್ನು ಉಪಯೋಗಿಸಲಿಕ್ಕೆ ಇದ್ದರೆ ಇಲಾಖೆಗಳಲ್ಲಿ ದಕ್ಷತೆ ಕಡಮೆಯಾಗುತ್ತದೆ ಎಂದು ಹೇಳಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎನ್. ಎಸ್. ಗುರುಸಿದ್ದಪ್ಪ (ಬಿಳಿಗೆರೆ):—ಸನ್ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿರತಕ್ಕ ಬೇಡಿಕೆಗಳನ್ನು ವಿರೋಧಿಸಿ ನಾನು ಕೆಲವು ವಿಚಾರಗಳನ್ನು ಹೇಳಬಯಸುತ್ತೇನೆ. ಸಾಮಾನ್ಯವಾಗಿ ಆಡಳಿತದಲ್ಲಿ ಲಂಚ, ಸ್ವಜನಪಕ್ಷಪಾತ, ಜಾತೀಯತೆಯ ಪ್ರಭಾವ, ವಿಳಂಬನೀತಿ, ಉದಾಸೀನ ಇವು ಎದ್ದು ಕಾಣುತ್ತಿವೆ. ದಕ್ಷತೆ, ಪ್ರಾಮಾಣಿಕತೆ, ನಿಷ್ಠೆ ಬಹಳ ಕಡಮೆ ಇದೆ. ಈಗ ನಮ್ಮ ರಾಜ್ಯದಲ್ಲಿ ಅಭಾವವಿದೆ, ಬರಗಾಲವಿದೆ. ಅದನ್ನು ನಿವಾರಿಸಲು ಕೆಲಸ ಮಾಡಬೇಕಾದದ್ದು ಸರ್ಕಾರದ ಕರ್ತವ್ಯ. ನಮ್ಮ ದೇಶದಲ್ಲಿ ರೈತರು 80 ಪರ್ಸೆಂಟ್ ಇದ್ದಾರೆ. ಈ ಹೊತ್ತು ರೈತರ ಶೋಷಣೆ, ಅವರ ಬಗ್ಗೆ ಉದಾಸೀನತೆ ಆಡಳಿತದಲ್ಲಿ ಬಹಳವಾಗಿ ಎದ್ದು ಕಾಣುತ್ತಿದೆ. ಈ ಹೊತ್ತು ರೈತ ಅನ್ನ ಕೊಡುವುದಕ್ಕೆ, ಆಹಾರ ಧಾನ್ಯ ಗಳನ್ನು ಬೆಳೆಯುವುದಕ್ಕೆ ಸಿದ್ಧನಾಗಿದ್ದಾನೆ, ಎಷ್ಟು ಬೇಕಾದರೂ ಆಹಾರ ಬೆಳೆಯುವುದಕ್ಕೆ ಸಿದ್ಧವಾಗಿದ್ದಾನೆ. ಆದರೆ ನಮ್ಮ ಸರ್ಕಾರದ ಅಧಿಕಾರಿಗಳಿಂದ ಅನೇಕ ತೊಂದರೆಗಳಾಗುತ್ತಿವೆ ಮತ್ತು ಪ್ರೋತ್ಸಾಹ ಸಿಕ್ಕುತ್ತಿಲ್ಲ. ಉದಾಹರಣೆಗೆ ಹಣ ಬೇಕು, ತಾಲ್ಲೂಕು ಆಫೀಸಿಗೆ ಹೋಗಿ ರಿಕಾರ್ಡ್ ತರಬೇಕು, ಎನ್‌ಕಂಬರೆನ್ಸ್ ಸರ್ಟಿಫಿಕೇಟ್, ರಿಜಿಸ್ಟ್ರೇಷನ್, ಪಹಣಿ ಪ್ರತಿಯೊಂದು ಕೆಲಸಕ್ಕೆ ಹೋದಾಗಲೂ ಪ್ರತಿಯೊಂದು ಟೇಬಲ್‌ಗೂ ಹಣ ಕೊಡಬೇಕು. ಲಂಚ ಕೊಡದೆ ಇದ್ದರೆ ಯಾವ ಕೆಲಸವೂ ಆಗುವುದಿಲ್ಲ. ಈ ತರಹ ಶೋಷಣೆ ತಪ್ಪಬೇಕು. ರೈತ ಬೆಳೆಯು ವುದಕ್ಕೆ ಸಿದ್ಧನಾಗಿದ್ದಾನೆ, ಎಷ್ಟು ಆಹಾರವಾದರೂ ಬೆಳೆಯುವುದಕ್ಕೆ ಸಿದ್ಧವಾಗಿದ್ದಾನೆ. ರೈತನಿಗೆ ಪವರ್ ಸಿಕ್ಕುತ್ತಿಲ್ಲ, ಡೀಸೆಲ್ ಇಂಜಿನ್ ಆದರೂ ಹಾಕಿಕೊಳ್ಳೋಣ ಎಂದರೆ ಡೀಸೆಲ್ ಇಲ್ಲ. ಹೀಗಾಗಿ ಅವನ ಶೋಷಣೆಯಾಗುತ್ತಿದೆ. ರೈತರ ಶೋಷಣೆ, ಅವರ ಬಗ್ಗೆ ಉದಾಸೀನತೆ ಬಹಳ ದಿವಸ ನಡೆಯಲಾರದು. ರೈತರು ಎಚ್ಚೆತ್ತರೆ ಕ್ರಾಂತಿಯಾಗುತ್ತದೆ. ಆಗ ನೀವೂ, ನಾವೂ ಯಾರೂ ಉಳಿಯುವುದಕ್ಕಾಗುವುದಿಲ್ಲ. ಅವರ ವೋಟು ತೆಗೆದುಕೊಂಡು ಬಂದು ಇಲ್ಲಿ ನಾವೆಲ್ಲ ಕುಳಿತಿದ್ದೇವೆ. ಹಳ್ಳಿಯಲ್ಲಿ ಆಹಾರಧಾನ್ಯವಿಲ್ಲ, ಸೀಮೆಎಣ್ಣೆ ಇಲ್ಲ, ಯಾವುದೂ ಸಿಕ್ಕುತ್ತಿಲ್ಲ. ಪ್ರತಿಯೊಂದು ಹಂತದಲ್ಲಿಯೂ ಲಂಚ ಕೊಡಲೇಬೇಕು. ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುವುದೇನೆಂದರೆ, ಜನ ಸಾಮಾನ್ಯರ ಭೇಟಿ ಮಾಡಿ ಅವರ ಕಷ್ಟಸುಖಗಳನ್ನು ವಿಚಾರಿಸಿ ಅವರಿಗೆ ಬೇಕಾದ ಕೆಲಸ ಮಾಡಿಕೊಡಿ ಎಂದು ಕೇಳಿಕೊಳ್ಳುತ್ತೇನೆ.

ಮಂತ್ರಿಗಳ ಸುತ್ತ ಹೊಗಳುಭಟ್ಟರಿದ್ದಾರೆ. ಹೊಗಳಿ ಹೊಗಳಿ ತಮ್ಮ ಕೆಲಸ ಕಾರ್ಯಗಳನ್ನು ಮಾಡಿಕೊಂಡು ಒಂದೇ ಸಲ ಕೆಳಕ್ಕೆ ಕೆಡವುತ್ತಾರೆ. ಆದ್ದರಿಂದ ಹುಷಾರಾಗಿರಬೇಕು.

ಐ.ಎ.ಎಸ್. ಮತ್ತು ಐ.ಪಿ.ಎಸ್. ಅಧಿಕಾರಿಗಳಿದ್ದಾರೆ. ಅವರಿಗೆ ಕನ್ನಡ ತಿಳಿಯದು ಮತ್ತು ಜನಸಾಮಾನ್ಯರ ಕಷ್ಟಸುಖ ಗೊತ್ತಿಲ್ಲ. ಸಾಮಾನ್ಯವಾಗಿ ಅವರು ಜನಸಾಮಾನ್ಯರೊಡನೆ ದರ್ಪ ದಿಂದ ನಡೆದುಕೊಳ್ಳುತ್ತಾರೆ. ಅವರಲ್ಲಿ ಆ ದರ್ಪ ಹೋಗಬೇಕು. ಶಾಸಕರು ಹೋದಾಗ ಕೂಡ ಉದಾಸೀನತೆಯಿಂದ ಇರತಕ್ಕ ಅಧಿಕಾರಿಗಳು ಇದ್ದಾರೆ, ಪ್ರೀತಿ ವಿಶ್ವಾಸದಿಂದ ಕರೆದು

ಮಾತನಾಡುವುದಿಲ್ಲ. ಕೆಲವರು ಜನಸಾಮಾನ್ಯರಲ್ಲಿ ಹೊಂದಿಕೊಂಡು ನಡೆಯುವುದಿಲ್ಲ. ಆದ್ದರಿಂದ ಅಂಥ ಅಧಿಕಾರಿಗಳಿಗೆ ಸರಿಯಾದ ಡೈರೆಕ್ಷನ್ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಪೊಲೀಸ್ ಇಲಾಖೆಯಲ್ಲಿ ವಿಪರೀತ ಲಂಚ; ಹೇಳುವುದಕ್ಕೇ ಸಾಧ್ಯವಿಲ್ಲ, ಕ್ಯಾಬರೆ ಡ್ಯಾನ್ಸ್, ಗ್ಯಾಂಬ್ಲಿಂಗ್ ಹೌಸ್ ನಡೆಸುವವರಿಗೆ ಪೊಲೀಸ್ ಇಲಾಖೆಯ ಸಪೋರ್ಟ್ ಇದೆ. ಆನ್ ಕಾಂಟ್ರಾಕ್ಟ್ ಬಸ್ಸುಗಳನ್ನು ಓಡಿಸುವುದರಲ್ಲಿ ಅವರ ಬೆಂಬಲವಿದೆ. ಮೈಸೂರು ಬೆಂಗಳೂರು ಮಧ್ಯೆ ಸುಮಾರು 50 ಇಂಥ ಬಸ್ಸುಗಳು ಓಡಾಡುತ್ತವೆ. ಅವುಗಳಿಗೆ ಪರ್ಮಿಟ್ ಇಲ್ಲ. ಪ್ರತಿಯೊಂದು ಪೊಲೀಸ್ ಸ್ಟೇಷನ್ನಿಗೂ ಮಾಮೂಲು ಇದೆ. ಇದು ನಿಮ್ಮ ಗಮನಕ್ಕೆ ಬಂದಿದೆಯೇ, ಎಷ್ಟು ಜನ ಸಬ್ ಇನ್‌ಸ್ಪೆಕ್ಟರನ್ನು ಸಸ್ಪೆಂಡ್ ಮಾಡಿದ್ದೀರಿ, ಎಷ್ಟು ಜನರ ಮೇಲೆ ಕ್ರಮ ತೆಗೆದುಕೊಂಡಿದ್ದೀರಿ ? ಸರ್ಕಾರ ದಕ್ಷತೆಯಿಂದ ಇಂಥ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತಿಲ್ಲ. ಇದು ಬಹಳ ಶೋಚನೀಯ.

ಹಳ್ಳಿಗಳಲ್ಲಿ ರೈತರು ಪೊಲೀಸ್ ಕಂಪ್ಲೇಂಟ್ ಕೊಡುವುದಕ್ಕೆ ಹೋದರೆ ಕಂಪ್ಲೇಂಟ್ ಕೊಡುವವನು ನೂರು ರೂಪಾಯಿ ಕೊಡಬೇಕು, ಅಪರಾಧಿಯಾದವನು 200 ರೂಪಾಯಿ ಕೊಡಬೇಕು. ಇದು ನಿಜವಾದ ಸಂಗತಿ. ನಾನೇ ಅಲ್ಲ, 25 ವರ್ಷಗಳಿಂದ ಶಾಸಕರು ಎಷ್ಟು ಹೇಳಿದರೂ ಸರ್ಕಾರ ಈ ಬಗ್ಗೆ ತೀವ್ರ ಗಮನ ಕೊಡುತ್ತಿಲ್ಲ.

ಎಕ್ಸೈಜ್ ಡಿಪಾರ್ಟ್‌ಮೆಂಟ್ ವಿಷಯ ಹೇಳುವುದಾದರೆ, ನಿಜವಾಗಿ ಹಣಕ್ಕಾಗಿ ಸರ್ಕಾರ ಪಾನನಿರೋಧವನ್ನು ತೆಗೆಯಬಾರದಿತ್ತು. ಹಣಕ್ಕಾಗಿ ಮಾಡಬಾರದ್ದನ್ನು ಮಾಡುತ್ತಿದ್ದಾರೆ. ಇದು ಈ ಹೊತ್ತಲ್ಲ, ಮುಂದಿನ ಪೀಳಿಗೆಯವರು ಶಾಪ ಹಾಕುತ್ತಾರೆ.

ಜೈಲುಗಳ ವಿಷಯ ಹೇಳುವುದಾದರೆ ಬಾಲಾಪರಾಧಗಳು ಜಾಸ್ತಿಯಾಗುತ್ತಿವೆ. ಜೈಲುಗಳು ಬಹಳ ಇಂಪ್ರೂವ್ ಆಗಬೇಕು. ಫಿಲಂ ಇಂಡಸ್ಟ್ರಿಗೆ ಕೋಟ್ಯಂತರ ರೂಪಾಯಿ ಖರ್ಚು ಮಾಡುತ್ತಿದ್ದಾರೆ. ಅದೇ ರೀತಿಯಾಗಿ ಹಳ್ಳಿಯಲ್ಲಿರುವ ಕಲೆಗಾರರಿಗೆ ಸಹ ಸ್ವಲ್ಪ ಪ್ರೋತ್ಸಾಹ ಕೊಡಬೇಕು ಎನ್ನುವುದು ನನ್ನ ಉದ್ದೇಶ.

ಇನ್‌ಫರ್ಮೇಷನ್ ಅಂಡ್ ಟೂರಿಸಂ ವಿಷಯ ಹೇಳುವುದಾದರೆ ಮಂತ್ರಿಗಳನ್ನು ಹೊಗಳಿ, ಅವರು ಭಾಗವಹಿಸುವ ಸಮಾರಂಭಗಳ ಕಾರ್ಯಕಲಾಪಗಳು ಪತ್ರಿಕೆಗಳಲ್ಲಿ ಹೆಚ್ಚಾಗಿ ಬರುತ್ತವೆ. ಜನಸಾಮಾನ್ಯರ ಕಷ್ಟಸುಖಗಳೂ, ಇತರೆ ವಿಚಾರಗಳೂ ಸಾಮಾನ್ಯವಾಗಿ ಪತ್ರಿಕೆಗಳಲ್ಲಿ ಬರುವುದಿಲ್ಲ. ತಾವು ಸ್ವಲ್ಪ ತಿದ್ದುಕೊಂಡರೆ ಒಳ್ಳೆಯದು. ನಮ್ಮ ಕಡೆ ಪ್ರವಾಹ ಬಂದು ನೂರಾರು ಎಕರೆ ಜಮೀನಿನಲ್ಲಿನ ಫಸಲು ಹಾಳಾಯಿತು. ಬರಗಾಲ ಪರಿಸ್ಥಿತಿ, ಅಥವಾ ಹಳ್ಳಿಗಾಡಿನಲ್ಲಿ ಮಳೆ ಇಲ್ಲದೆ ಇರುವ ಪರಿಸ್ಥಿತಿ ಇಂಥ ವಿಷಯಗಳನ್ನು ಸರ್ಕಾರದ ಗಮನಕ್ಕೆ ತಂದರೆ ಒಳ್ಳೆಯದು. ಇಷ್ಟು ಹೇಳಿ, ಉಪಾಧ್ಯಕ್ಷರು ಅವಕಾಶ ಕೊಟ್ಟಿದ್ದಕ್ಕೆ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Mr. DEPUTY SPEAKER: The House stands adjourned to meet to-morrow at 9-30 A.M.

The House adjourned at Forty Minutes past Six of the Clock to meet again at Thirty Minutes past Nine of the Clock on Thursday the 3rd May 1973.

THE MYSORE POLICE (AMENDMENT) BILL, 1973

(L. A. Bill No. 17 of 73)

A Bill to amend the Mysore Police Act, 1963

Whereas it is expedient to amend the Mysore Police Act, 1963 (Mysore Act 4 of 1964) for the purposes herein-after appearing;